ಸಂಪುಟ 7, ಸಂಚಿಕೆ 01

ಜುಲೈ 1-15, 2026

# ನ್ಯೂ ಇಂಡಿಯಾ ಸಮಾಚಾರ

ಉಚಿತ ವಿತರಣೆಗಾಗಿ




Follow Us @NISPIBIndia

## ಸುಗಮ ನ್ಯಾಯಾಂಗದ ಯುಗ, ಹೊಸ ಕಾನೂನುಗಳು-ಹೊಸ ವಿಶ್ವಾಸ

ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮಕ್ಕೆ ಎರಡು ವರ್ಷ ತುಂಬಿದ್ದು, ನಾಗರಿಕ ಕೇಂದ್ರಿತ ನ್ಯಾಯ ವ್ಯವಸ್ಥೆಯನ್ನು ಬೆಳೆಸುವ ನಿಟ್ಟಿನಲ್ಲಿ ಒಂದು ಮಹತ್ವದ ಬದಲಾವಣೆಯ ಹೆಜ್ಜೆಗುರುತಾಗಿದೆ.

ಇ-ಪ್ರತಿಗಾಗಿ

## ಡಾ. ಶ್ಯಾಮ ಪ್ರಸಾದ್ ಮುಖರ್ಜಿ

**ಪರಂಪರೆಯ ಗೌರವ | ಜುಲೈ 6 ಜನ್ಮ ಜಯಂತಿ**

# ಏಕತೆ, ಸಮಗ್ರತೆ ಮತ್ತು ಸಾಂಸ್ಕೃತಿಕ ರಾಷ್ಟ್ರೀಯತೆಯ ರುವಾರಿ

*ತಮ್ಮ ರಾಷ್ಟ್ರೀಯವಾದಿ ಆದರ್ಶಗಳ ಮೂಲಕ 'ಭಾರತ ಮಾತೆ'ಗೆ ಕೀರ್ತಿ ತಂದ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರು ಭಾರತದ ಅಭಿವೃದ್ಧಿಗೆ ಅತ್ಯುತ್ತಮ ಮತ್ತು ಅನುಕರಣೀಯ ಕೊಡುಗೆ ನೀಡಿದ್ದಾರೆ. ಅವರು ಭಾರತದ ಏಕತೆಗಾಗಿ ದಣಿವರಿಯದ ಮತ್ತು ಧೈರ್ಯಶಾಲಿ ಪ್ರಯತ್ನಗಳನ್ನು ಮಾಡಿದರು; ಅವರಿಗೆ ದೇಶದ ಏಕತೆ ಮತ್ತು ಸಮಗ್ರತೆಗಿಂತ ಮುಖ್ಯವಾದುದು ಬೇರೇನೂ ಇರಲಿಲ್ಲ. ಉತ್ತರದ ಕಾಶ್ಮೀರದಿಂದ ಪೂರ್ವದ ಬಂಗಾಳದವರೆಗೆ, ಅವರು ರಾಷ್ಟ್ರದ ಪ್ರತಿ ಇಂಚು ಭೂಮಿಗಾಗಿ ಹೋರಾಡಿದರು ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ 'ಇಬ್ಬರು ಪ್ರಧಾನ ಮಂತ್ರಿಗಳು, ಎರಡು ಸಂವಿಧಾನ ಮತ್ತು ಎರಡು ಧ್ವಜ' ವ್ಯವಸ್ಥೆಯನ್ನು ರದ್ದುಗೊಳಿಸಲು ಪ್ರಯತ್ನಿಸಿದರು. ತಾಯ್ನಾಡಿಗಾಗಿ ಅವರ ಸಮರ್ಪಣೆ ಮತ್ತು ತ್ಯಾಗ ದೇಶದ ಜನರಿಗೆ ಎಂದೆಂದಿಗೂ ಸ್ಫೂರ್ತಿ ನೀಡುತ್ತವೆ.*

> **ರಾಷ್ಟ್ರದ ಅಮರ ಪುತ್ರ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರ ಜನ್ಮ ದಿನಾಚರಣೆಯಂದು ಅವರಿಗೆ ಹೃದಯಾಂತರಾಳದ ನಮನಗಳು. ರಾಷ್ಟ್ರದ ಗೌರವ, ಘನತೆ ಮತ್ತು ವೈಭವವನ್ನು ಎತ್ತಿಹಿಡಿಯಲು ಅವರು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರು. ವಿಕಸಿತ ಮತ್ತು ಸ್ವಾವಲಂಬಿ ಭಾರತವನ್ನು ನಿರ್ಮಿಸುವಲ್ಲಿ ಅವರ ಆದರ್ಶಗಳು ಮತ್ತು ತತ್ವಗಳು ಅಮೂಲ್ಯವಾಗಿವೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*



# ನ್ಯೂ ಇಂಡಿಯಾ ಸಮಾಚಾರ

ಸಂಪುಟ 7, ಸಂಚಿಕೆ 01 | ಜುಲೈ 1-15, 2026

ಪ್ರಧಾನ ಸಂಪಾದಕರು
**ಧೀರೇಂದ್ರ ಓಝಾ**
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
**ಸಂತೋಷ್ ಕುಮಾರ್**

ಹಿರಿಯ ಸಹಾಯಕ ಸಲಹಾ ಸಂಪಾದಕ
**ಪವನ್ ಕುಮಾರ್**

ಸಹಾಯಕ ಸಲಹಾ ಸಂಪಾದಕ
**ಅಖಿಲೇಶ್ ಕುಮಾರ್**
**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ರಜನೀಶ್ ಮಿಶ್ರಾ** (ಇಂಗ್ಲಿಷ್)
**ನದೀಮ್ ಅಹ್ಮದ್** (ಉರ್ದು)

ಹಿರಿಯ ವಿನ್ಯಾಸಕರು
**ಫೂಲ್ ಚಂದ್ ತಿವಾರಿ**

ವಿನ್ಯಾಸಕರು
**ಅಭಯ್ ಗುಪ್ತಾ**
**ಸತ್ಯಂ ಸಿಂಗ್**




13 ಭಾಷೆಗಳಲ್ಲಿ ಲಭ್ಯವಿರುವ ನವ ಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್‌ಡೇಟ್‌ಗಳಿಗಾಗಿ @NISPIBIndia ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ

# ಒಳ ಪುಟಗಳಲ್ಲಿ...





**ಮುಖಪುಟ ಲೇಖನ**

200 ವರ್ಷಗಳ ವಸಾಹತುಶಾಹಿ ಆಳ್ವಿಕೆಯ ನೆರಳಿನಿಂದ ಮುಕ್ತವಾದ ಭಾರತವು ತನ್ನದೇ ಆದ ಕಾನೂನುಗಳೊಂದಿಗೆ 21ನೇ ಶತಮಾನವನ್ನು ಪ್ರವೇಶಿಸಿದೆ. ಇದರ ಪರಿಣಾಮವಾಗಿ, ನಾಗರಿಕರಿಗೆ, ಪೊಲೀಸರ ಅಥವಾ ನ್ಯಾಯಾಲಯಗಳ ನ್ಯಾಯದ ಧ್ವನಿ ಮತ್ತು ಚೌಕಟ್ಟು ಕಳೆದ ಎರಡು ವರ್ಷಗಳಲ್ಲಿ ಬದಲಾಗಿದೆ. ಈ ಬದಲಾವಣೆಯ ಮೂಲಕ ಭಾರತದ ಜನತೆ ದೇಶೀಯ ನ್ಯಾಯ ವ್ಯವಸ್ಥೆಯ ಉದಯಕ್ಕೆ ಸಾಕ್ಷಿಯಾಗುತ್ತಿದ್ದಾರೆ. | 14-23

**ಭಾರತದ ದೀರ್ಘಾವಧಿಯ ಚುನಾಯಿತ ಪ್ರಧಾನಮಂತ್ರಿ**

**ರಾಷ್ಟ್ರ ನಿರ್ಮಾಣಕ್ಕಾಗಿ ಸೇವೆ, ಧೈರ್ಯ ಮತ್ತು ಅಚಲ ಸಮರ್ಪಣೆಯ ಸಂಕೇತ**

**ಪ್ರಧಾನಮಂತ್ರಿ ನರೇಂದ್ರ ಮೋದಿ**



ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದ್ದೇವೆ... ಯುಗವನ್ನು ವ್ಯಾಖ್ಯಾನಿಸಲು ಸಂದ 12 ವರ್ಷಗಳ ಪ್ರಗತಿಯ ಪಯಣ | 6-10

**ಐತಿಹಾಸಿಕ ನಾಯಕತ್ವ, ಜಾಗತಿಕ ಮೆಚ್ಚುಗೆ ನವ ಭಾರತ, ಸಶಕ್ತ ಭಾರತ**

ಪ್ರಧಾನಮಂತ್ರಿ ಮೋದಿ ಭಾರತದಲ್ಲಿ ದೀರ್ಘಾವಧಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಮಂತ್ರಿ ಯಾಗಿದ್ದಾರೆ. ಈ ಸ್ಮರಣಾರ್ಹ ಸಂದರ್ಭದಲ್ಲಿ ಜಾಗತಿಕ ಸಮುದಾಯ ದಿಂದ ಅಭಿನಂದನಾ ಸಂದೇಶಗಳು ಹರಿದು ಬಂದಿವೆ... | 11-12

**ಸುದ್ದಿ ತುಣುಕುಗಳು** | 4-5

**ಮೂಲಸೌಕರ್ಯಕ್ಕೆ ಉತ್ತೇಜನ, ಅಹಮದಾಬಾದ್ ಮೆಟ್ರೊಗೆ ಅನುಮೋದನೆ**
ಕೇಂದ್ರ ಸಚಿವ ಸಂಪುಟದ ನಿರ್ಣಯಗಳು | 13

**ಕೌಶಲ ಭಾರತದತ್ತ ದಾಪುಗಾಲು**
ಕೌಶಲ್ಯ ಅಭಿವೃದ್ಧಿಯ ಮೂಲಕ ಲಕ್ಷಾಂತರ ನಾಗರಿಕರ ಸಬಲೀಕರಣ | 26-27

**ತಂತ್ರಜ್ಞಾನದಿಂದ ಪ್ರೇರಿತವಾದ ಪರಿವರ್ತನೆಯ ಹೊಸ ಯುಗ**
ಪ್ರಮುಖ ಪಾತ್ರ: ಡಿಜಿಟಲ್ ಇಂಡಿಯಾ ಕಾರ್ಯಕ್ರಮದ 11 ವರ್ಷಗಳು | 28-30

**ನವ ಭಾರತದ ಕಾರ್ಯಪಡೆಯ ಸಬಲೀಕರಣ**
ಪಿಎಂ ವಿಕಸಿತ ಭಾರತ ರೋಜ್ಗಾರ್ ಯೋಜನೆಯಡಿ 5.6 ದಶಲಕ್ಷ ನೋಂದಣಿ | 31

**ಆಧುನಿಕ ಸಂಪರ್ಕ ಮತ್ತು ಅಭಿವೃದ್ಧಿಯಲ್ಲಿ ಹೊಸ ಅಧ್ಯಾಯ**
ಸೂರತ್-ದಮನ್ ನಲ್ಲಿ 23,000 ಕೋಟಿ ರೂ. ಮೌಲ್ಯದ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ | 32-34

**ಶೌರ್ಯಕ್ಕೆ ಗೌರವ...**
ರಕ್ಷಣಾ ಪ್ರಶಸ್ತಿ ಪ್ರದಾನ ಸಮಾರಂಭ-I ರಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ 51 ಧೈರ್ಯಶಾಲಿಗಳಿಗೆ ಸನ್ಮಾನ | 35

**ಜಗತ್ತಿಗೆ ಸ್ಫೂರ್ತಿ ನೀಡುತ್ತಿರುವ ಭಾರತದ ಅಭಿವೃದ್ಧಿಯ ಗಾಥೆ**
ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿ ಸಭೆ | 36-37

**ವ್ಯಕ್ತಿತ್ವ: ಗುಲ್ಜಾರಿ ಲಾಲ್ ನಂದಾ**
ಸವಾಲಿನ ಸಮಯದಲ್ಲಿ ಮುಂದಾಳತ್ವ ವಹಿಸಿಕೊಂಡ ವ್ಯಕ್ತಿ | 38

**'ವಿಕಸಿತ ಭಾರತ' - 'ಜಿ-ರಾಮ್-ಜಿ' ಜುಲೈ 1, 2026 ರಿಂದ ಜಾರಿ**



**ಈಗ ಗ್ರಾಮೀಣ ಭಾರತದಲ್ಲಿ**
**125 ದಿನಗಳ ಉದ್ಯೋಗ ಖಾತರಿ**
ಪ್ರತಿ ಗ್ರಾಮೀಣ ಕುಟುಂಬದ ವಯಸ್ಕ ಸದಸ್ಯರು ಕೌಶಲ್ಯರಹಿತ ಶ್ರಮಿಕ ಉದ್ಯೋಗ ಕೇಳಿದರೆ, 'ಜಿ-ರಾಮ್-ಜಿ' ಅಡಿಯಲ್ಲಿ ಪ್ರತಿ ಹಣಕಾಸು ವರ್ಷದಲ್ಲಿ 125 ದಿನಗಳ ವೇತನ ಆಧಾರಿತ ಉದ್ಯೋಗವನ್ನು ಖಾತರಿಪಡಿಸಲಾಗುತ್ತದೆ | 24-25



**Published:** Kanchan Prasad, Director General, on behalf of Central Bureau of Communication
**Communication Address :** Room No–1077, Soochna Bhawan, CGO Complex, New Delhi -110003.
**E-Mail : response-nis@pib.gov.in, RNI No. :** DELENG/2020/78811

# ಸಂಪಾದಕೀಯ...

## ಹೊಸ ಕಾನೂನು, ಹೊಸ ದಿಕ್ಕು
## ನ್ಯಾಯಾಂಗ ವ್ಯವಸ್ಥೆಯನ್ನು ಸಶಕ್ತಗೊಳಿಸುವ ಹೊಸ ಯುಗ

**ಶುಭಾಶಯಗಳು!**

ಇಂದು, ರಾಷ್ಟ್ರವು 'ವಿಕಸಿತ ಭಾರತ'ದ ಸಂಕಲ್ಪವನ್ನು ಸಾಕಾರಗೊಳಿಸಲು ಸಮರ್ಪಿತವಾಗಿದೆ. ಈ ದೃಷ್ಟಿಕೋನವನ್ನು ಸಾಧಿಸಲು, ನಾವೆಲ್ಲರೂ 'ಪಂಚ ಪ್ರಾಣ'ವನ್ನು ತೆಗೆದುಕೊಂಡಿದ್ದೇವೆ. ವಸಾಹತುಶಾಹಿ ಮನಸ್ಥಿತಿಯಿಂದ ನಮ್ಮನ್ನು ಸಂಪೂರ್ಣವಾಗಿ ಮುಕ್ತಗೊಳಿಸುವುದು ಮತ್ತು ದೇಶವನ್ನು ಭಾರತೀಯ ನೀತಿ ಮತ್ತು ಅಸ್ಮಿತೆಯಲ್ಲಿ ಬೇರೂರಿರುವ ಸ್ವಾವಲಂಬಿ ರಾಷ್ಟ್ರವಾಗಿ ಪರಿವರ್ತಿಸುವುದು ಈ ಪ್ರತಿಜ್ಞೆಗಳಲ್ಲಿ ಒಂದಾಗಿದೆ. ಈ ಪ್ರತಿಜ್ಞೆಯ ಈಡೇರಿಕೆಯತ್ತ ಸಾಗುವ ನಿಟ್ಟಿನಲ್ಲಿ, ಸರ್ಕಾರವು ಜುಲೈ 1, 2024 ರಂದು ಮೂರು ಹೊಸ ಕಾನೂನುಗಳನ್ನು ಜಾರಿಗೆ ತಂದಿತು - ಭಾರತೀಯ ನ್ಯಾಯದ ಪರಿಕಲ್ಪನೆಯನ್ನು ಆಧರಿಸಿ - ವಸಾಹತುಶಾಹಿ ಯುಗದ ಮೂರು ಕಾನೂನುಗಳನ್ನು ರದ್ದುಗೊಳಿಸಿತು. ಭಾರತೀಯ ದಂಡ ಸಂಹಿತೆ (1860), ಕ್ರಿಮಿನಲ್ ಪ್ರೊಸೀಜರ್ ಕೋಡ್ (1898) ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆ (1872) ಅನ್ನು ಬದಲಾವಣೆ ಮಾಡಲು ಅನುಕ್ರಮವಾಗಿ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮವನ್ನು ಮಂಡಿಸಲಾಯಿತು. ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕ, ಪರಿಣಾಮಕಾರಿ ಮತ್ತು ಸಮಕಾಲೀನ ಸಮಾಜದ ಅಗತ್ಯಗಳಿಗೆ ಅನುಗುಣವಾಗಿ ಮಾರ್ಪಡಿಸುವಾಗ ವೈಯಕ್ತಿಕ ಸ್ವಾತಂತ್ರ್ಯ, ಭದ್ರತೆ ಮತ್ತು ಮಾನವ ಹಕ್ಕುಗಳಿಗೆ ಆದ್ಯತೆ ನೀಡುವುದು ಈ ಕಾನೂನುಗಳ ಉದ್ದೇಶವಾಗಿದೆ. ಈ ಕಾನೂನುಗಳು ಸೈಬರ್ ಅಪರಾಧ ಮತ್ತು ಸಂಘಟಿತ ಅಪರಾಧದಂತಹ ಆಧುನಿಕ ಸವಾಲುಗಳನ್ನು ನಿಭಾಯಿಸುತ್ತವೆ, ಸಂತ್ರಸ್ತರಿಗೆ ನ್ಯಾಯವನ್ನು ಖಾತ್ರಿಪಡಿಸುತ್ತವೆ. ಕಳೆದ ಎರಡು ವರ್ಷಗಳಲ್ಲಿ, ಈ ಮೂರು ಕಾನೂನುಗಳು ಪ್ರವೇಶಾರ್ಹ ನ್ಯಾಯದ ಹೊಸ ಯುಗವನ್ನು ಸ್ಥಾಪಿಸಿವೆ. ಭಾರತದ ಸಂಪೂರ್ಣ ನ್ಯಾಯ ವ್ಯವಸ್ಥೆಯು ಈಗ ಭಾರತೀಯ ಮನೋಭಾವವನ್ನು ಸಾಕಾರಗೊಳಿಸುತ್ತದೆ. ಈ ಎರಡು ವರ್ಷಗಳ ಪ್ರಯಾಣವು ಈ ಸಂಚಿಕೆಯ ಮುಖಪುಟ ಲೇಖನವಾಗಿದೆ.

ವ್ಯಕ್ತಿತ್ವ ವಿಭಾಗದಲ್ಲಿ, ಸಂದಿಗ್ಧ ಸಮಯದಲ್ಲಿ ರಾಷ್ಟ್ರದ ಉಸ್ತುವಾರಿ ವಹಿಸಿಕೊಂಡ ಗುಲ್ಜಾರಿ ಲಾಲ್ ನಂದಾ ಅವರ ಬಗ್ಗೆ ಓದಿ. ಡಿಜಿಟಲ್ ಇಂಡಿಯಾ, ಸ್ಕಿಲ್ ಇಂಡಿಯಾ ಮತ್ತು ವಿಕಸಿತ ಭಾರತ್ ರೋಜ್ ಗಾರ್ ಯೋಜನೆಯಂತಹ ಪ್ರಮುಖ ಉಪಕ್ರಮಗಳು ಇತರ ಮುಖ್ಯಾಂಶಗಳಾಗಿವೆ. ಕೇಂದ್ರ ಸಚಿವ ಸಂಪುಟ ನಿರ್ಣಯಗಳು, ನೀತಿ ಆಯೋಗದ ಆಡಳಿತ ಮಂಡಳಿ ಸಭೆ ಮತ್ತು ಕಳೆದ ಹದಿನೈದು ದಿನಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಾರ್ಯಕ್ರಮಗಳು ಸಹ ಈ ಸಂಚಿಕೆಯ ಭಾಗವಾಗಿವೆ.

ಜುಲೈ 6ರಂದು ಶ್ಯಾಮ ಪ್ರಸಾದ್ ಮುಖರ್ಜಿ ಅವರ ಜನ್ಮ ದಿನಾಚರಣೆಯ ಅಂಗವಾಗಿ ಮುಖಪುಟದ ಒಳ ಪುಟದಲ್ಲಿ ಅವರಿಗೆ ವಿಶೇಷ ಗೌರವ ಸಲ್ಲಿಸಲಾಗಿದೆ ಮತ್ತು ಜಯಪ್ರಕಾಶ್ ನಾರಾಯಣ್ ಪಕ್ಷಿಧಾಮವನ್ನು 100ನೇ ರಾಮ್ಸರ್ ತಾಣವೆಂದು ಘೋಷಣೆ ಕುರಿತ ಮಾಹಿತಿಯೂ ಇದೆ.

***ದಯವಿಟ್ಟು ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಿರಿ.***



(ಧೀರೇಂದ್ರ ಓಝಾ)

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
*https://newindiasamachar.pib.gov.in/*

# ಅಂಚೆ ಪೆಟ್ಟಿಗೆ




## ವಿದ್ಯಾರ್ಥಿಗಳಿಗೆ ಉಪಯುಕ್ತ ನಿಯತಕಾಲಿಕ

ಈ ಹಿಂದೆ ನಾನು ನಿಯಮಿತ ಓದುಗನಲ್ಲದಿದ್ದರೂ, ನನ್ನ ಶಿಕ್ಷಕರ ಸೂಚನೆಯಂತೆ ಇತ್ತೀಚೆಗೆ ಮೇ ತಿಂಗಳ 'ನ್ಯೂ ಇಂಡಿಯಾ ಸಮಾಚಾರ' ಸಂಚಿಕೆಯನ್ನು ಓದಿದೆ. ಈ ನಿಯತಕಾಲಿಕವು ವಿದ್ಯಾರ್ಥಿಗಳಿಗೆ ಎಷ್ಟು ಉಪಯುಕ್ತವಾಗಿದೆ ಎಂದು ನಾನು ಆಶ್ಚರ್ಯಚಕಿತನಾದೆ. ಇದು ಎಲ್ಲಾ ಯು.ಪಿ.ಎಸ್.ಸಿ-ಸಂಬಂಧಿತ ವಿಷಯಗಳ ಬಗ್ಗೆ ವಿಶ್ವಾಸಾರ್ಹ ಮತ್ತು ವಾಸ್ತವಿಕ ಮಾಹಿತಿಯನ್ನು ನೀಡುತ್ತದೆ. ಯು.ಪಿ. ಎಸ್.ಸಿ ದೃಷ್ಟಿಕೋನದಿಂದ ನಿರ್ಣಾಯಕ ವಿಷಯವಾದ 'ಸ್ವಸಹಾಯ ಗುಂಪುಗಳು' ಎಂಬ ವಿಷಯವನ್ನು ಹೆಚ್ಚು ನೀಡಿದ್ದರಿಂದ ಇತ್ತೀಚಿನ ಸರ್ಕಾರಿ ಪರೀಕ್ಷೆಯಲ್ಲಿ ನಾನು ಇದರ ಪ್ರಯೋಜನ ಪಡೆದೆ. ಪ್ರಚಲಿತ ವಿದ್ಯಮಾನಗಳ ಬಗ್ಗೆ ನಿಯತಕಾಲಿಕದ ಒತ್ತು ಅತ್ಯುತ್ತಮವಾಗಿದೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವಶ್ಯಕವಾಗಿದೆ. ಅದನ್ನು ಓದಿದ ನಂತರ, ನಾನು ನಿಯಮಿತ ಓದುಗನಾಗಲು ನಿರ್ಧರಿಸಿದ್ದೇನೆ. ಈ ಆಕರ್ಷಕ ನಿಯತಕಾಲಿಕವನ್ನು ಓದಲು ಮತ್ತು ಅದರ ಲಾಭವನ್ನು ಪಡೆಯಲು ನಾನು ಇತರರನ್ನು ಪ್ರೋತ್ಸಾಹಿಸುತ್ತೇನೆ.

**ವೈಭವ್ ಸೋನಿ**
**Vaibhavsoni074@gmail.com**

## ರಾಷ್ಟ್ರದ ಪ್ರಗತಿ ಮತ್ತು ಸರ್ಕಾರದ ಉಪಕ್ರಮಗಳ ಒಳನೋಟ ಬೀರುತ್ತದೆ

ನಾನು 'ನ್ಯೂ ಇಂಡಿಯಾ ಸಮಾಚಾರ' ನಿಯತಕಾಲಿಕದ ಡಿಜಿಟಲ್ ಆವೃತ್ತಿಯನ್ನು ಓದಿದೆ. ಇದು ದೇಶದ ಪ್ರಗತಿ ಮತ್ತು ಸರ್ಕಾರದ ಉಪಕ್ರಮಗಳ ಬಗ್ಗೆ ಮಾಹಿತಿಯುಕ್ತ ತಾಜಾ ಮಾಹಿತಿಗಳನ್ನು ಒದಗಿಸುತ್ತದೆ. ನಾನು ಅದನ್ನು ತುಂಬಾ ಪ್ರಶಂಸಿಸುತ್ತೇನೆ.

**sachingour231@gmail.com**

## ರಾಷ್ಟ್ರದ ಪರಂಪರೆಯ ಬಗ್ಗೆ ಹೆಮ್ಮೆಯ ಭಾವನೆ

ನಾನು 'ನ್ಯೂ ಇಂಡಿಯಾ ಸಮಾಚಾರ'ದ ಇತ್ತೀಚಿನ ಸಂಚಿಕೆಯಲ್ಲಿ 2027ರ ಜನಗಣತಿಯ ಮುಖಪುಟ ಲೇಖನವನ್ನು ಓದಿದೆ. ಈ ಲೇಖನಕ್ಕೆ ಧನ್ಯವಾದಗಳು! ಇದು ಎಷ್ಟು ವಿವರವಾದ ಮತ್ತು ಉತ್ತಮವಾಗಿ ರಚನಾತ್ಮಕವಾಗಿದೆಯೆಂದರೆ, ಇದು ಪ್ರಕ್ರಿಯೆಯನ್ನು ಸ್ಪಷ್ಟವಾಗಿ ವಿವರಿಸುವುದಲ್ಲದೆ ಎಲ್ಲಾ ಅನುಮಾನಗಳನ್ನು ಹೋಗಲಾಡಿಸುತ್ತದೆ. ಕುಮುದಿನಿ ಲಾಖಿಯಾ ಅವರ ಬಗ್ಗೆ ಓದಿ ನಾನು ನಿಜವಾಗಿಯೂ ಆನಂದಿಸಿದೆ. ಅಂತಹ ಗಣ್ಯ ವ್ಯಕ್ತಿಗಳ ಬಗ್ಗೆ ನಾನು ನನ್ನ ಮಕ್ಕಳಿಗೆ ಹೇಳಬಲ್ಲೆ ಮತ್ತು ನಮ್ಮ ರಾಷ್ಟ್ರದ ಪರಂಪರೆಯ ಬಗ್ಗೆ ಹೆಮ್ಮೆ ಪಡುವ ನಿಮ್ಮ ತಂಡವನ್ನು ನಾನು ಪ್ರಶಂಸಿಸುತ್ತೇನೆ.

**ಶಿಪ್ರಾ ಅಬ್ರಹಾಂ**
**shipra.abraham@gmail.com**

## ಮಾಹಿತಿಪೂರ್ಣ ಪತ್ರಿಕೆಯನ್ನು ಓದಲು ಉತ್ಸುಕನಾಗಿದ್ದೇನೆ

'ನ್ಯೂ ಇಂಡಿಯಾ ಸಮಾಚಾರ' ಪತ್ರಿಕೆಯ ಕನ್ನಡ ಆವೃತ್ತಿಯನ್ನು ನಾನು ಮನೆಯಲ್ಲಿ ನಿಯಮಿತವಾಗಿ ಓದುತ್ತೇನೆ. ಇದು ಬಹಳ ಮಾಹಿತಿಪೂರ್ಣ ನಿಯತಕಾಲಿಕವಾಗಿದೆ, ಮತ್ತು ನಾನು ಸದಾ ಅದನ್ನು ಓದಲು ಎದುರು ನೋಡುತ್ತೇನೆ. ಅದನ್ನು ಓದುವುದರಿಂದ ಸಂಕೀರ್ಣ ಸಮಸ್ಯೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ನನಗೆ ಸಹಾಯ ಮಾಡುತ್ತದೆ. ನಾನು ಅದನ್ನು ಅತ್ಯುತ್ತಮವೆಂದು ಭಾವಿಸುತ್ತೇನೆ; ಇದು ನನಗೆ ಇತ್ತೀಚಿನ ಮಾಹಿತಿಯ ಸಿಂಚನೆ ಮಾಡುತ್ತಿದೆ.

**ಕಸ್ತೂರಿ**
**rakeshla143@gmail.com**

# ಸುದ್ದಿ ಚುಟುಕುಗಳು

## ಜೋಜಿಲಾ ಸುರಂಗ

### ಒಂದು ಹೆಗ್ಗುರುತಿನ ಎಂಜಿನಿಯರಿಂಗ್ ಸಾಧನೆ

ಭಾರತವು ತನ್ನ ಎಂಜಿನಿಯರಿಂಗ್ ಪರಾಕ್ರಮವನ್ನು ನಿರಂತರವಾಗಿ ಪ್ರದರ್ಶಿಸುತ್ತಿದೆ. ಭಾರತದಲ್ಲಿ, ಸುರಂಗ ನಿರ್ಮಾಣವು ಮೂಲಸೌಕರ್ಯ ಅಭಿವೃದ್ಧಿಗೆ ಮಾತ್ರ ಸೀಮಿತವಾಗಿಲ್ಲ; ಬದಲಿಗೆ, ಒಂದು ಕಾಲದಲ್ಲಿ ಸಂಪರ್ಕಕ್ಕೆ ಅಡ್ಡಿಯಾಗಿದ್ದ ಪರ್ವತಗಳು ಮತ್ತು ಒರಟಾದ ಭೂಪ್ರದೇಶಗಳಿಂದ ಭೌಗೋಳಿಕ ಸವಾಲುಗಳನ್ನು ನಿವಾರಿಸಲಾಗುತ್ತಿದೆ. ಅಟಲ್ ಸುರಂಗ, ಚೆನಾಬ್ ಸೇತುವೆ, ಹೊಸ ಪಂಬನ್ ಸೇತುವೆ ಮತ್ತು ಬೈರಾಬಿ-ಸೈರಾಂಗ್ ರೈಲು ಮಾರ್ಗವನ್ನು ಪೂರ್ಣಗೊಳಿಸಿದ ನಂತರ, ಏಷ್ಯಾದ ಅತಿ ಉದ್ದದ ಸುರಂಗ - ಜೋಜಿಲಾ ಸುರಂಗ ಜೂನ್ 9 ರಂದು ಐತಿಹಾಸಿಕ ಪ್ರಗತಿಯನ್ನು ಸಾಧಿಸಿತು. ಈ ಪ್ರಗತಿಯು ಕೇವಲ ನಿರ್ಮಾಣ ಪ್ರಗತಿ ಮಾತ್ರವಲ್ಲದೆ ಭಾರತದ ತಾಂತ್ರಿಕ ಪರಿಣತಿ, ಎಂಜಿನಿಯರಿಂಗ್ ಸಾಮರ್ಥ್ಯ ಮತ್ತು ಅದಮ್ಯ ಸಂಕಲ್ಪವನ್ನು ಸಂಕೇತಿಸುತ್ತದೆ. ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ನಡುವೆ ಸರ್ವಋತು ಸಂಪರ್ಕವನ್ನು ಸ್ಥಾಪಿಸುವಲ್ಲಿ ಈ ಯೋಜನೆಯು ನಿರ್ಣಾಯಕ ಮೈಲಿಗಲ್ಲಾಗಿ ಹೊರಹೊಮ್ಮುತ್ತಿದೆ. ಕಾರ್ಯತಂತ್ರದ ಮೂಲಸೌಕರ್ಯವನ್ನು ಹೆಚ್ಚಿಸುವುದರಿಂದ ಪ್ರಾದೇಶಿಕ ಅಭಿವೃದ್ಧಿ, ಪ್ರವಾಸೋದ್ಯಮ, ವ್ಯಾಪಾರ ಮತ್ತು ರಾಷ್ಟ್ರೀಯ ಭದ್ರತೆಯನ್ನು ವೇಗಗೊಳಿಸುತ್ತದೆ. ಪೂರ್ಣಗೊಂಡ ನಂತರ, ಸೋನಾಮಾರ್ಗ್ ಮತ್ತು ಮಿನಾಮಾರ್ಗ್ ನಡುವಿನ ಪ್ರಯಾಣದ ಅವಧಿ ಸುಮಾರು ಎರಡು ಗಂಟೆಗಳಿಂದ ಸುಮಾರು 30 ನಿಮಿಷಗಳಿಗೆ ಇಳಿಯುತ್ತದೆ. ಬಾಲ್ಟಾಲ್ ಮತ್ತು ಮಿನಾಮಾರ್ಗ್ ನಡುವಿನ ರಾಷ್ಟ್ರೀಯ ಹೆದ್ದಾರಿ -1 ರಲ್ಲಿ ನಿರ್ಮಿಸಲಾಗುತ್ತಿರುವ ಜೋಜಿಲಾ ಸುರಂಗವು ಸುಮಾರು 14 ಕಿ.ಮೀ ವ್ಯಾಪಿಸಿದೆ ಮತ್ತು 6,800 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದನ್ನು 2,900 ಮೀಟರ್ ನಿಂದ 3,310 ಮೀಟರ್ ಎತ್ತರದಲ್ಲಿ ನಿರ್ಮಿಸಲಾಗುತ್ತಿದೆ.




## ಭಾರತದ ಸಮುದ್ರಾಹಾರ ರಫ್ತು ಸಾರ್ವಕಾಲಿಕ ಗರಿಷ್ಠ 74,000 ಕೋಟಿ ರೂ.

ಜಾಗತಿಕ ಮಾರುಕಟ್ಟೆಯ ಸವಾಲಿನ ಪರಿಸ್ಥಿತಿಗಳ ಹೊರತಾಗಿಯೂ, ಭಾರತವು 2025-26ರ ಆರ್ಥಿಕ ವರ್ಷದಲ್ಲಿ 73,890.46 ಕೋಟಿ ರೂ.ಗಳ ಮೌಲ್ಯದ 19.72 ಲಕ್ಷ ಮೆಟ್ರಿಕ್ ಟನ್ ಸಮುದ್ರಾಹಾರವನ್ನು ರಫ್ತು ಮಾಡಿದೆ. ಇದು ಪರಿಮಾಣ ಮತ್ತು ಮೌಲ್ಯ ಎರಡರಲ್ಲೂ ದಾಖಲೆಯ ಗರಿಷ್ಠ ಮಟ್ಟವನ್ನು ಸೂಚಿಸುತ್ತದೆ. ಅಮೆರಿಕಾ ಮತ್ತು ಚೀನಾ ಭಾರತೀಯ ಸಮುದ್ರಾಹಾರದ ಪ್ರಮುಖ ಆಮದುದಾರ ರಾಷ್ಟ್ರವಾಗಿ ಉಳಿದಿವೆ. ಹೆಪ್ಪುಗಟ್ಟಿದ ಸೀಗಡಿಗಳು ಪ್ರಾಥಮಿಕ ರಫ್ತು ಸರಕಾಗಿದ್ದು, ರಫ್ತಿನಲ್ಲಿ ₹49,000 ಕೋಟಿಗಿಂತ ಹೆಚ್ಚು ದಾಖಲಿಸುತ್ತವೆ ಮತ್ತು ಒಟ್ಟು ರಫ್ತು ಪ್ರಮಾಣದ ಶೇಕಡಾ 40 ಕ್ಕಿಂತ ಹೆಚ್ಚು ಪಾಲನ್ನು ಹೊಂದಿವೆ.



## 3 ಕೋಟಿಯ ಗುರಿ 'ಲಕ್ಷಾಧಿಪತಿ ದೀದಿಗಳ' ಗುರಿ ಸಾಧನೆ

ದೇಶವು 3 ಕೋಟಿ 'ಲಕ್ಷಾಧಿಪತಿ ದೀದಿಗಳು' (ಕನಿಷ್ಠ 1 ಲಕ್ಷ ರೂ.ಗಳ ವಾರ್ಷಿಕ ಆದಾಯವನ್ನು ಗಳಿಸುವ ಮಹಿಳೆಯರು) ರಚಿಸುವ ಗುರಿಯನ್ನು ಸಾಧಿಸಿದೆ ಮತ್ತು ಸಮರೋಪಾದಿಯಲ್ಲಿ ಇನ್ನೂ 3 ಕೋಟಿ 'ಲಕ್ಷಾಧಿಪತಿ ದೀದಿ'ಗಳನ್ನು ರೂಪಿಸುವ ಸಂಕಲ್ಪವನ್ನು ಈಡೇರಿಸಲು ಈಗ ಒತ್ತು ನೀಡಲಾಗುತ್ತಿದೆ. 'ಲಖ್ ಪತಿ ದೀದಿ' ಉಪಕ್ರಮವು ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಪರಿವರ್ತನಾತ್ಮಕ ಅಭಿಯಾನವಾಗಿ ಹೊರಹೊಮ್ಮಿದೆ. ಹೆಚ್ಚುವರಿ 3 ಕೋಟಿ ಮಹಿಳೆಯರನ್ನು ಅವರ ಆದಾಯದಲ್ಲಿ ನಿರಂತರ ಏರಿಕೆಯನ್ನು ಖಚಿತಪಡಿಸಿಕೊಳ್ಳಲು ಸುಸ್ಥಿರ ಮತ್ತು ವೈವಿಧ್ಯಮಯ ಜೀವನೋಪಾಯ ಚಟುವಟಿಕೆಗಳೊಂದಿಗೆ ಸಂಪರ್ಕಿಸುವುದು ಈಗ ಆದ್ಯತೆಯಾಗಿದೆ. ದೇಶಾದ್ಯಂತ ಸುಮಾರು 4.11 ಕೋಟಿ ಸಂಭಾವ್ಯ 'ಲಕ್ಷಾಧಿಪತಿ ದೀದಿ'ಗಳನ್ನು ಗುರುತಿಸ ಲಾಗಿದೆ, ಇದು ಮುಂದಿನ ಹಂತದ ಗುರಿಗಳನ್ನು ಸಾಧಿಸಲು ಬಲವಾದ ಅಡಿ ಪಾಯವನ್ನು ಒದಗಿಸುತ್ತದೆ.



# ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ: ಒಂದು ದಶಕದ ಆರೈಕೆ

ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನವು ದೇಶಾದ್ಯಂತ ಸುರಕ್ಷಿತ ಹೆರಿಗೆಯನ್ನು ಖಾತ್ರಿಪಡಿಸುವಲ್ಲಿ 10 ವರ್ಷಗಳನ್ನು ಪೂರೈಸಿದೆ. ಈ ಸಂದರ್ಭದ ಅಂಗವಾಗಿ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಜೆ.ಪಿ.ನಡ್ಡಾ ಅವರು ಜೂನ್ 9ರಂದು "ಪಿಎಂಎಸ್ಎಂಎಯ 10 ವರ್ಷಗಳು - ಆರೈಕೆಯ ದಶಕ" ಎಂಬ ಧ್ಯೇಯವಾಕ್ಯದ ಅಡಿಯಲ್ಲಿ ರಾಷ್ಟ್ರವ್ಯಾಪಿ ಆಚರಣೆಗೆ ಚಾಲನೆ ನೀಡಿದರು. ಈ ಸಾಧನೆಯ ನೆನಪಿಗಾಗಿ, ಸರ್ಕಾರವು ₹ 75 ಮೌಲ್ಯದ ಸ್ಮರಣಾರ್ಥ ನಾಣ್ಯ ಮತ್ತು ₹ 5 ಮೌಲ್ಯದ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತು. ಪ್ರತಿ ತಿಂಗಳ 9 ರಂದು ತಜ್ಞ ವೈದ್ಯರ ಮೂಲಕ ಗರ್ಭಿಣಿಯರಿಗೆ ಉಚಿತ ಪ್ರಸವಪೂರ್ವ ತಪಾಸಣೆ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜೂನ್ 9, 2016 ರಂದು ಈ ಯೋಜನೆಯನ್ನು ಪ್ರಾರಂಭಿಸಿದರು. ಕಳೆದ ದಶಕದಲ್ಲಿ, ದೇಶಾದ್ಯಂತ 7.5 ಕೋಟಿಗೂ ಹೆಚ್ಚು ಗರ್ಭಿಣಿಯರು ಈ ಅಭಿಯಾನದ ಮೂಲಕ ಉಚಿತ ಆರೋಗ್ಯ ಸೇವೆಗಳಿಂದ ಪ್ರಯೋಜನ ಪಡೆದಿದ್ದಾರೆ. ಈ ಉಪಕ್ರಮವು ಆರೋಗ್ಯಕರ ಮತ್ತು ಸುರಕ್ಷಿತ ಭಾರತವನ್ನು ನಿರ್ಮಿಸಲು ಬಹಳ ಬಲವಾದ ಅಡಿಪಾಯವನ್ನು ಹಾಕಿದೆ.






## 2027ನೇ ಸಾಲಿನ ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನ

### ಜುಲೈ 31, 2026 ರವರೆಗೆ ಅವಕಾಶ

2027ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಘೋಷಿಸಲಾಗುವ ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನಗಳಿಗೆ ಕೊನೆಯ ದಿನಾಂಕ ಜುಲೈ 31, 2026 ಆಗಿರುತ್ತದೆ. ನಾಮನಿರ್ದೇಶನಗಳು ಮತ್ತು ಶಿಫಾರಸುಗಳನ್ನು ರಾಷ್ಟ್ರೀಯ ಪ್ರಶಸ್ತಿ ಪೋರ್ಟಲ್ (https://awards.gov.in) ಮೂಲಕ ಪ್ರತ್ಯೇಕವಾಗಿ ಆನ್ ಲೈನ್ ನಲ್ಲಿ ಸ್ವೀಕರಿಸಲಾಗುತ್ತದೆ. ಪದ್ಮ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಸೇರಿವೆ. 1954 ರಲ್ಲಿ ಸ್ಥಾಪಿಸಲಾದ ಈ ಪ್ರಶಸ್ತಿಗಳನ್ನು ಪ್ರತಿ ವರ್ಷ ಗಣರಾಜ್ಯೋತ್ಸವದಂದು ಘೋಷಿಸಲಾಗುತ್ತದೆ. ಕಲೆ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಸೇವೆ, ವಿಜ್ಞಾನ ಮತ್ತು ಎಂಜಿನಿಯರಿಂಗ್, ಸಾರ್ವಜನಿಕ ವ್ಯವಹಾರಗಳು, ನಾಗರಿಕ ಸೇವೆ ಮತ್ತು ವ್ಯಾಪಾರ ಮತ್ತು ಉದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಮತ್ತು ಅಸಾಧಾರಣ ಸಾಧನೆಗಳು ಅಥವಾ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಪದ್ಮ ಪ್ರಶಸ್ತಿಗಳನ್ನು "ಪ್ರಜಾ ಪದ್ಮ" ವನ್ನಾಗಿ ಪರಿವರ್ತಿಸಲು ಸರ್ಕಾರ ಬದ್ಧವಾಗಿದೆ ಮತ್ತು ಸ್ವಯಂ ನಾಮನಿರ್ದೇಶನಗಳು ಸೇರಿದಂತೆ ನಾಮನಿರ್ದೇಶನಗಳು ಮತ್ತು ಶಿಫಾರಸುಗಳನ್ನು ಮಾಡಲು ನಾಗರಿಕರನ್ನು ವಿನಂತಿಸಿದೆ.

## 'ಭವ್ಯ' ಪೋರ್ಟಲ್ ಆರಂಭ

### ರಾಷ್ಟ್ರವ್ಯಾಪಿ 100 ಕೈಗಾರಿಕಾ ಪಾರ್ಕ್ ಗಳನ್ನು ಸ್ಥಾಪಿಸುವ ಪ್ರಕ್ರಿಯೆಗೆ ಚಾಲನೆ

ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆ (ಭವ್ಯ) ಕಾರ್ಯಾರಂಭ ಮಾಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿ, ಭವ್ಯ ಪೋರ್ಟಲ್ ಅನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಡಿಯಲ್ಲಿ, ರಾಜ್ಯಗಳು ತಮ್ಮ ಕೈಗಾರಿಕಾ ಸಾಮರ್ಥ್ಯಗಳು, ಭೂ ಲಭ್ಯತೆ, ಹೂಡಿಕೆದಾರರ ಆಸಕ್ತಿ ಮತ್ತು ಪ್ರಾದೇಶಿಕ ಸಾಮರ್ಥ್ಯವನ್ನು ಎತ್ತಿ ತೋರಿಸುವ ವಿವರವಾದ ಯೋಜನಾ ಪ್ರಸ್ತಾಪಗಳನ್ನು ಸಲ್ಲಿಸಲು ಪ್ರೋತ್ಸಾಹಿಸಲಾಗುತ್ತದೆ. ಹೆಚ್ಚಿನ ಹೂಡಿಕೆಯ ಮೂಲಕ ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸಲು ದೇಶಾದ್ಯಂತ 100 ಕೈಗಾರಿಕಾ ಪಾರ್ಕ್ ಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಈ ಪಾರ್ಕ್ ಗಳನ್ನು ವಿವಿಧ ಗಾತ್ರಗಳಲ್ಲಿ ನಿರ್ಮಿಸಲಾಗುವುದು. ಗುಡ್ಡಗಾಡು ಪ್ರದೇಶಗಳು, ಸಣ್ಣ ಕೇಂದ್ರಾಡಳಿತ ಪ್ರದೇಶಗಳು ಮತ್ತು ಈಶಾನ್ಯ ರಾಜ್ಯಗಳಲ್ಲಿ 25 ಎಕರೆಗಳಿಂದ ಹಿಡಿದು, ಮಧ್ಯಮ ಗಾತ್ರದ ರಾಜ್ಯಗಳು ಮತ್ತು ಪ್ರದೇಶಗಳಲ್ಲಿ 100-500 ಎಕರೆಯಲ್ಲಿ ಮತ್ತು ನಗರಗಳು ಮತ್ತು ಪಟ್ಟಣಗಳ ಬಳಿ 1,000 ಎಕರೆಗಳಲ್ಲಿ ಅಭಿವೃದ್ಧಿಪಡಿಸಲಾಗುವುದು.





ಪ್ರಧಾನ ಮಂತ್ರಿ ನರೇಂದ್ರ ಮೋದಿ

# ಸೇವೆ ಮತ್ತು ಧೈರ್ಯದ ಸಂಕೇತ

# ಮತ್ತು ರಾಷ್ಟ್ರ ನಿರ್ಮಾಣಕ್ಕೆ ಅಚಲ ಸಮರ್ಪಣೆ



*ಜೂನ್ 10, 2026 ಅನ್ನು ಭಾರತೀಯ ಸಂಸತ್ತಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಕೆತ್ತಲಾಗಿದೆ. "ರಾಷ್ಟ್ರ ಮೊದಲು" ಎಂಬ ಮನೋಭಾವದಿಂದ ಪ್ರೇರಿತರಾದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಅವಿರತ ಪಯಣವು ಇಂದು ಇತಿಹಾಸವನ್ನು ಸೃಷ್ಟಿಸಿದೆ. ಈ ಐತಿಹಾಸಿಕ ದಿನದಂದು, ಅಧಿಕಾರದಲ್ಲಿ 4,399 ದಿನಗಳನ್ನು ಪೂರೈಸಿದ ನಂತರ, ಅವರು ಭಾರತದ ಚುನಾಯಿತ ಪ್ರಧಾನ ಮಂತ್ರಿಯಾಗಿ ಅತಿ ದೀರ್ಘ ಕಾಲ ಸೇವೆ ಸಲ್ಲಿಸಿದ ಗೌರವಕ್ಕೆ ಭಾಜನರಾಗಿದ್ದಾರೆ.*

*1952ರ ಮೇ 13ರಿಂದ 1964ರ ಮೇ 27ರವರೆಗೆ ಒಟ್ಟು 4,398 ದಿನಗಳ ಕಾಲ ಭಾರತದ ಮೊದಲ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರೂ ಈ ದಾಖಲೆ ಅಲಂಕರಿಸಿದ್ದರು. ಪ್ರಧಾನ ಮಂತ್ರಿ ಮೋದಿಯವರ ದಾಖಲೆ ಕೇವಲ ದಿನಗಳ ಎಣಿಕೆಯಲ್ಲ; ಭಾರತದ ರೈತರು, ಕಾರ್ಮಿಕರು, ಯುವಕರು, ಮಹಿಳೆಯರು ಮತ್ತು ಸಮಾಜದ ಪ್ರತಿಯೊಂದು ವರ್ಗವು ತಮ್ಮ ಪ್ರಧಾನ ಮಂತ್ರಿಯ ಮೇಲೆ ಇಟ್ಟಿರುವ ಆಳವಾದ ನಂಬಿಕೆ ಮತ್ತು ಅಚಲ ನಂಬಿಕೆಗೆ ಇದು ಸಾಕ್ಷಿಯಾಗಿದೆ.*

*ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿರುವ... ಅಭಿವೃದ್ಧಿಯ ಈ 12 ವರ್ಷಗಳ ಪಯಣವು ಒಂದು ಯುಗವನ್ನು ವ್ಯಾಖ್ಯಾನಿಸಲಿದೆ. ಈ ಸಾಧನೆಗಾಗಿ ಪ್ರಧಾನ ಮಂತ್ರಿ ಮೋದಿಯವರನ್ನು ಶ್ಲಾಘಿಸಿದ ಕೇಂದ್ರ ಸಚಿವ ಸಂಪುಟವು ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿತು, ಅವರ ಸಮರ್ಥ ನಾಯಕತ್ವದಲ್ಲಿ, ಭಾರತವು ಸ್ವಾವಲಂಬಿ, ಸುರಕ್ಷಿತ, ಸಮೃದ್ಧ ಮತ್ತು ವೈಭವಯುತ ರಾಷ್ಟ್ರವಾಗಿ ಹೊಸ ಎತ್ತರಕ್ಕೆ ಏರುವುದನ್ನು ಮುಂದುವರಿಸಿದೆ ಮತ್ತು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಹಾದಿಯನ್ನು ಬಲಪಡಿಸುತ್ತದೆ.*

## ಕೇಂದ್ರ ಸಚಿವ ಸಂಪುಟದ ನಿರ್ಣಯ

ಇಂದು, ಜೂನ್ 10, 2026, ಭಾರತೀಯ ಪ್ರಜಾಪ್ರಭುತ್ವದ ಪಯಣದಲ್ಲಿ ಒಂದು ಐತಿಹಾಸಿಕ ಮತ್ತು ಸ್ಫೂರ್ತಿದಾಯಕ ಮೈಲಿಗಲ್ಲಾಗಿದೆ. ಇಂದು, ನರೇಂದ್ರ ಮೋದಿ ಅವರು ಚುನಾಯಿತ ಪ್ರಧಾನ ಮಂತ್ರಿಯಾಗಿ ಸುದೀರ್ಘ ನಿರಂತರ ಅಧಿಕಾರಾವಧಿಯಲ್ಲಿ ದೇಶಕ್ಕೆ ಸೇವೆ ಸಲ್ಲಿಸಿದ ಪ್ರಧಾನ ಮಂತ್ರಿಯಾಗಿದ್ದಾರೆ. ಚುನಾಯಿತ ಪ್ರಧಾನ ಮಂತ್ರಿಯಾಗಿ 4,399 ದಿನಗಳ ನಿರಂತರ ಸೇವೆಯ ದಾಖಲೆಯನ್ನು ಅವರು ನಿರ್ಮಿಸಿದ್ದಾರೆ - ಇದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಸಾಧಿಸಿದ ಸಾಧನೆಯಾಗಿದೆ. ಇದಕ್ಕೂ ಮುನ್ನ ಶ್ರೀ ಜವಾಹರಲಾಲ್ ನೆಹರು ಅವರು 1952 ರಿಂದ 1964 ರವರೆಗೆ 4398 ದಿನಗಳ ಕಾಲ ಸತತವಾಗಿ ಈ ಹುದ್ದೆಯನ್ನು ಅಲಂಕರಿಸಿದ್ದರು. ಈ ಸಂದರ್ಭವು ಭಾರತದ ಪ್ರಜಾಸತ್ತಾತ್ಮಕ ಪ್ರಜ್ಞೆ, ಸಾರ್ವಜನಿಕ ನಂಬಿಕೆ ಮತ್ತು ಜನರ ಭಾಗವಹಿಸುವಿಕೆಯ ಶಕ್ತಿಯನ್ನು ಸಂಕೇತಿಸುತ್ತದೆ. ಒಬ್ಬ ಜನಪ್ರತಿನಿಧಿಯು 'ರಾಷ್ಟ್ರ ಮೊದಲು' ಎಂಬ ಸಂಕಲ್ಪದಿಂದ ಬದುಕಿದಾಗ, ಅವನು ಸತ್ಯ, ಸಮಗ್ರತೆ, ಕಠಿಣ ಪರಿಶ್ರಮ, ಪ್ರಾಮಾಣಿಕತೆ ಮತ್ತು ಜೀವನದಲ್ಲಿ ಪ್ರಾಮಾಣಿಕತೆಯನ್ನು ತನ್ನ ಮಾರ್ಗದರ್ಶಿ ತತ್ವಗಳನ್ನಾಗಿ ಮಾಡಿಕೊಂಡಾಗ ಮತ್ತು ಜನರ ಸೇವೆಗೆ ದೃಢವಾಗಿ ಸಮರ್ಪಿತರಾದಾಗ ಸಾರ್ವಜನಿಕರು ಅಭೂತಪೂರ್ವ ಬೆಂಬಲದ ರೂಪದಲ್ಲಿ ತನ್ನ ಆಶೀರ್ವಾದವನ್ನು ಅವರಿಗೆ ನೀಡುತ್ತಾರೆ. ಇಂದಿನ ಐತಿಹಾಸಿಕ ಕ್ಷಣವು ಅದೇ ಸಾರ್ವಜನಿಕ ಆಶೀರ್ವಾದದ ಪ್ರತಿಬಿಂಬವಾಗಿದೆ.

ಈ ಸಂದರ್ಭದಲ್ಲಿ ಕೇಂದ್ರ ಸಚಿವ ಸಂಪುಟವು ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳನ್ನು ಸಲ್ಲಿಸುತ್ತದೆ. ಜೂನ್ 10, 2026ರ ಈ ಐತಿಹಾಸಿಕ ಮೈಲಿಗಲ್ಲು ಇತರ ಮಹತ್ವದ ಸಾಧನೆಗಳೊಂದಿಗೆ ಸಮೀಕೃತವಾಗುತ್ತದೆ. ಮಾನ್ಯ ಪ್ರಧಾನಮಂತ್ರಿಯವರ ನಾಯಕತ್ವದಲ್ಲಿ ಎನ್.ಡಿ.ಎ ಸರ್ಕಾರ 12 ವರ್ಷಗಳನ್ನು ಪೂರೈಸಿದೆ. ಸರ್ಕಾರದ ಮುಖ್ಯಸ್ಥರಾಗಿ, ಗೌರವಾನ್ವಿತ ಪ್ರಧಾನ ಮಂತ್ರಿಯವರು 25 ವರ್ಷಗಳ ನಿರಂತರ ಸೇವೆಯ ಐತಿಹಾಸಿಕ ಮೈಲಿಗಲ್ಲನ್ನು ದಾಟಲಿದ್ದಾರೆ. ಆರು ದಶಕಗಳ ನಂತರ, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶವು ಎನ್.ಡಿ.ಎ ಸರ್ಕಾರಕ್ಕೆ ಸತತ ಮೂರನೇ ಅವಧಿಗೆ ಜನಾದೇಶ ನೀಡಿದೆ ಎಂಬುದು ಗಮನಾರ್ಹವಾಗಿದೆ. ಸೂಕ್ಷ್ಮತೆ, ಸಂಯಮ, ಉದ್ದೇಶ ಮತ್ತು ನಿರ್ಣಾಯಕ ಸಾಮರ್ಥ್ಯವನ್ನು ಹೊಂದಿರುವ ಸಮರ್ಥ ಕೈಗಳಲ್ಲಿ ನಮ್ಮ ನಾಯಕತ್ವವಿದೆ ಎಂದು ನಾವು ಹೆಮ್ಮೆ ಪಡುತ್ತೇವೆ. ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಜೀವನವು ಸೇವೆ, ಧೈರ್ಯ ಮತ್ತು ರಾಷ್ಟ್ರ ನಿರ್ಮಾಣದ ನಿರಂತರ ಅನ್ವೇಷಣೆಯ ಸಂಕೇತವಾಗಿದೆ. ಸಂಸ್ಥೆಯ ಕಾರ್ಯಕರ್ತನಾಗಿ ಮತ್ತು ನಂತರ ರಾಜ್ಯದ ಮುಖ್ಯಮಂತ್ರಿಯಾಗಿ ಅವರ ಅಪಾರ ಅನುಭವದಿಂದಾಗಿ ವಾಸ್ತವಗಳ ಬಗ್ಗೆ ಅವರ ತಿಳಿವಳಿಕೆಯು ನೀತಿಗಳನ್ನು ಹೆಚ್ಚು ಸೂಕ್ಷ್ಮ, ಪ್ರಾಯೋಗಿಕ ಮತ್ತು ಫಲಿತಾಂಶ ಆಧಾರಿತವಾಗಿಸಿದೆ. 2014ರಲ್ಲಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಸಂಸತ್ತಿನ ಸೆಂಟ್ರಲ್ ಹಾಲ್ ನಲ್ಲಿ ತಮ್ಮನ್ನು ತಾವು 'ಪ್ರಧಾನ ಸೇವಕ' ಎಂದು ಕರೆದುಕೊಂಡಿದ್ದರು. ಅವರು ದೇಶದ ಸಂವಿಧಾನವನ್ನು ಪವಿತ್ರ




## ಭಾರತದಲ್ಲಿ ಮಹಿಳಾ ನೇತೃತ್ವದ ಅಭಿವೃದ್ಧಿಯ ಹೊಸ ಯುಗವನ್ನು ಗುರುತಿಸಿದ ಕಳೆದ 12 ವರ್ಷ

ಮೋದಿ ಅವರ ಮಾರ್ಗದರ್ಶನದಲ್ಲಿ, ಸರ್ಕಾರವು ನಿರಂತರವಾಗಿ ರಾಷ್ಟ್ರದ ಮಹಿಳೆಯರನ್ನು ತನ್ನ ನೀತಿಗಳ ಕೇಂದ್ರ ಭಾಗದಲ್ಲಿರಿಸಿದೆ. ಶೌಚಾಲಯ ಸೌಲಭ್ಯಗಳು, ಹೊಗೆ ಮುಕ್ತ ಅಡುಗೆಮನೆಗಳು, ಗರ್ಭಿಣಿಯರಿಗೆ ಆರ್ಥಿಕ ನೆರವು, ಮುದ್ರಾ ಯೋಜನೆ, ಮಹಿಳೆಯರ ಹೆಸರಿನಲ್ಲಿ ಪಿಎಂ ವಸತಿ ಯೋಜನೆ, ಲಖ್‌ಪತಿ ದೀದಿ ಅಭಿಯಾನ, ಜನನದಿಂದ ಜೀವನದ ಕೊನೆಯ ಕ್ಷಣಗಳವರೆಗೆ ಜೀವನದ ಪ್ರತಿಯೊಂದು ಹಂತದಲ್ಲೂ ದೇಶದ ಮಹಿಳೆಯರಿಗೆ ಸಂಪೂರ್ಣ ಬೆಂಬಲ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ನೀಡುವ ಮೂಲಕ, ದೇಶದ ನೀತಿ ನಿರೂಪಣೆಯಲ್ಲಿ ಅವರ ಭಾಗವಹಿಸುವಿಕೆಯನ್ನು ಮತ್ತಷ್ಟು ಹೆಚ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಗ್ರಂಥ ಎಂದು ಬಣ್ಣಿಸಿದ್ದರು ಮತ್ತು ತಮ್ಮ ಸರ್ಕಾರ ಬಡವರಿಗೆ ಸಮರ್ಪಿತವಾಗಿದೆ ಎಂದು ಹೇಳಿದ್ದರು. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮಂತ್ರವನ್ನು ಸರ್ಕಾರದ ಧ್ಯೇಯವಾಕ್ಯವನ್ನಾಗಿ ಮಾಡಿಕೊಂಡು, ಕಳೆದ 12 ವರ್ಷಗಳು ಈ ನಿರ್ಣಯಗಳ ಅಭಿವ್ಯಕ್ತಿಯಾಗಿದೆ.

ಪ್ರಧಾನಮಂತ್ರಿಯವರ ನಾಯಕತ್ವದಲ್ಲಿ ಭಾರತವು ಬಡವರ ಕಲ್ಯಾಣವನ್ನು ಆಡಳಿತದ ಕೇಂದ್ರ ಬಿಂದುವಿನಲ್ಲಿಟ್ಟಿದೆ. ಮೊದಲ ಬಾರಿಗೆ, ಕಾಂಕ್ರೀಟ್ ಮನೆಗಳು, ವಿದ್ಯುತ್, ಅನಿಲ ಸಂಪರ್ಕಗಳು, ಶುದ್ಧ ಕುಡಿಯುವ ನೀರು, ಶೌಚಾಲಯಗಳು ಮುಂತಾದ ಸೌಲಭ್ಯಗಳು ದೇಶದ ಕೋಟ್ಯಂತರ ಜನರನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ತಲುಪಿವೆ. ಮೊದಲ ಬಾರಿಗೆ, ಕೋಟ್ಯಂತರ ಜನರಿಗೆ ಬ್ಯಾಂಕ್ ಖಾತೆಗಳನ್ನು ತೆರೆಯಲಾಯಿತು, ಯಾವುದೇ ಮಧ್ಯವರ್ತಿಗಳ ಒಳಗೊಳ್ಳುವಿಕೆಯಿಲ್ಲದೆ ನೇರವಾಗಿ ಸರ್ಕಾರದ ಸಹಾಯವನ್ನು ಪಡೆಯಲು ಅನುವು ಮಾಡಿಕೊಟ್ಟಿತು. ಮೊದಲ ಬಾರಿಗೆ, 80 ಕೋಟಿಗೂ ಹೆಚ್ಚು ನಾಗರಿಕರು ಉಚಿತ ಪಡಿತರದ ಸೌಲಭ್ಯವನ್ನು ಪಡೆದಿದ್ದಾರೆ ಮತ್ತು ಮೊದಲ ಬಾರಿಗೆ, 60 ಕೋಟಿಗೂ ಹೆಚ್ಚು ಬಡ ಜನರು 5 ಲಕ್ಷ ರೂ.ಗಳವರೆಗೆ ಉಚಿತ ಚಿಕಿತ್ಸೆಯ ಭರವಸೆ ಪಡೆದಿದ್ದಾರೆ. ಈ ಕ್ರಮಗಳು ಜನರ ಆತ್ಮವಿಶ್ವಾಸವನ್ನು ಹೆಚ್ಚಿಸಿದವು ಮತ್ತು ಅವರು ಘನತೆಯಿಂದ ಬದುಕಬಹುದು ಎಂಬ ನಂಬಿಕೆಯನ್ನು ಅವರಲ್ಲಿ ತುಂಬಿದವು. ಇದರ ಪರಿಣಾಮವಾಗಿ 25 ಕೋಟಿಗೂ ಹೆಚ್ಚು ಜನರು ಬಡತನದಿಂದ ಹೊರಬರಲು ಸಾಧ್ಯವಾಯಿತು. ಯುವ ಶಕ್ತಿಯನ್ನು ಭಾರತದ ಅತಿದೊಡ್ಡ ಆಸ್ತಿ ಎಂದು ಪ್ರಧಾನ ಮಂತ್ರಿ ಪರಿಗಣಿಸುತ್ತಾರೆ. ಅವರ ಮಾರ್ಗದರ್ಶನದಲ್ಲಿ, ಕೌಶಲ್ಯ ಅಭಿವೃದ್ಧಿ, ಸ್ಟಾರ್ಟ್ ಅಪ್ ಇಂಡಿಯಾ, ನಾವೀನ್ಯತೆ, ಡಿಜಿಟಲ್ ಆರ್ಥಿಕತೆ, ಕ್ರೀಡೆ, ಉದ್ಯಮಶೀಲತೆ ಮತ್ತು ಸದೃಢತೆ ಅಭೂತಪೂರ್ವ ಉತ್ತೇಜನವನ್ನು ಪಡೆದಿವೆ. ಕಳೆದ 12 ವರ್ಷಗಳಲ್ಲಿ, ಭಾರತವು ವಿಶ್ವದ ಮೂರನೇ ಅತಿದೊಡ್ಡ ನವೋದ್ಯಮ ಪರಿಸರ ವ್ಯವಸ್ಥೆಯಾಗಿದೆ ಮತ್ತು ಈಗ ನಮ್ಮ ದೇಶವು ವಿಶ್ವದ ಪ್ರಮುಖ ಕ್ರೀಡಾ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಚಂದ್ರಯಾನ ಅಭಿಯಾನದ ಅಡಿಯಲ್ಲಿ ಚಂದ್ರನ ದಕ್ಷಿಣ ಧ್ರುವದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ಭಾರತವು ತನ್ನ ಬೆಳೆಯುತ್ತಿರುವ ವೈಜ್ಞಾನಿಕ ಸಾಮರ್ಥ್ಯಗಳನ್ನು ಜಗತ್ತಿಗೆ ಪ್ರದರ್ಶಿಸಿದೆ. ಗೌರವಾನ್ವಿತ ಪ್ರಧಾನ ಮಂತ್ರಿಯವರ ಕಲ್ಪನೆಯ 'ವಿಕಸಿತ ಭಾರತ'ದ (ಅಭಿವೃದ್ಧಿ ಹೊಂದಿದ ಭಾರತ) ಪ್ರಮುಖ ಆಧಾರ ಸ್ತಂಭಗಳಲ್ಲಿ ನಮ್ಮ ರೈತರು ಒಬ್ಬರು. ಕಳೆದ 12 ವರ್ಷಗಳಲ್ಲಿ, ರೈತರಿಗೆ ಹೊಸ ತಳಿಯ ಬೀಜಗಳನ್ನು ಒದಗಿಸುವುದು, ಅನೇಕ ಅಪೂರ್ಣ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು, ಪಿಎಂ ಕಿಸಾನ್ ಸಮ್ಮಾನ್ ನಿಧಿ ನೀಡುವುದು, ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸುವುದು ಮತ್ತು

ಸರ್ಕಾರಿ ಖರೀದಿಯನ್ನು ಹೆಚ್ಚಿಸುವುದು ಮುಂತಾದ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ವಿಶೇಷವಾಗಿ ಸಣ್ಣ ರೈತರು, ಪಶುಪಾಲಕರು ಮತ್ತು ಮೀನುಗಾರರಿಗೆ ಅಭೂತಪೂರ್ವ ಕೆಲಸ ಮಾಡಲಾಗಿದೆ. ಪಶುಪಾಲಕರು ಮತ್ತು ಮೀನುಗಾರರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ವಿಸ್ತರಿಸುವ ಗೌರವಾನ್ವಿತ ಪ್ರಧಾನಮಂತ್ರಿಯವರ ನಿರ್ಧಾರದಿಂದ ಲಕ್ಷಾಂತರ ಜನರು ಪ್ರಯೋಜನ ಪಡೆಯುತ್ತಿದ್ದಾರೆ. ಇಂದು, ಭಾರತದ ಕೃಷಿ ರಫ್ತು 2014 ರಲ್ಲಿ 2 ಲಕ್ಷ 60 ಸಾವಿರ ಕೋಟಿ ರೂ.ಗಳಿಂದ 4 ಲಕ್ಷ 40 ಸಾವಿರ ಕೋಟಿ ರೂ.ಗೆ ಏರಿದೆ. ಇಂದು ಭಾರತದ ಕೃಷಿ ರಫ್ತು 5 ಲಕ್ಷ ಕೋಟಿ ರೂ.ಗಳನ್ನು ದಾಟಿದೆ. ಇದು ರೈತರ ಕಲ್ಯಾಣಕ್ಕೆ ಸಂಬಂಧಿಸಿದ ಮಾನ್ಯ ಪ್ರಧಾನಮಂತ್ರಿಯವರ ನೀತಿಗಳ ಸ್ಪಷ್ಟ ಪರಿಣಾಮವಾಗಿದೆ.

'ರಾಷ್ಟ್ರ ಮೊದಲು' ಎಂಬ ಮನೋಭಾವದಿಂದ ಪ್ರೇರಿತವಾದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರಧಾನ ಮಂತ್ರಿ ಎಂದಿಗೂ ಹಿಂಜರಿಯಲಿಲ್ಲ. ಇದಕ್ಕಾಗಿಯೇ ದಶಕಗಳಿಂದ ಬಾಕಿ ಉಳಿದಿದ್ದ ನಿರ್ಧಾರಗಳು ಮತ್ತು ಸುಧಾರಣೆಗಳು ಈಗ ವಾಸ್ತವವಾಗಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ 370 ನೇ ವಿಧಿಯನ್ನು ರದ್ದುಗೊಳಿಸುವುದು, ಜಿಎಸ್ಟಿ ಜಾರಿಗೊಳಿಸುವುದು, ಒಆರ್ಒಪಿ (ಒಂದು ಶ್ರೇಣಿ ಒಂದು ಪಿಂಚಣಿ) ಜಾರಿ, ಸಿಡಿಎಸ್ ಹುದ್ದೆಯ ಸೃಷ್ಟಿ, ಬಡವರಿಗೆ ಶೇ.10 ಮೀಸಲಾತಿ ನೀಡುವುದು, ವೈರಿ ಆಸ್ತಿ ಕಾಯ್ದೆಯನ್ನು ಜಾರಿ, ಸಿಎಎ ಜಾರಿ, ತ್ರಿವಳಿ ತಲಾಖ್ ವಿರುದ್ಧ ಶಾಸನ, ವಕ್ಫ್ ಕಾಯ್ದೆಗೆ ತಿದ್ದುಪಡಿ, ಪರಮಾಣು ವಲಯದ ಸುಧಾರಣೆಗಳಿಗೆ ಕಾನೂನುಗಳ ಜಾರಿ, ಭಾರತೀಯ ನ್ಯಾಯ ಸಂಹಿತೆಗಳ ಜಾರಿ ಮತ್ತು ಹಲವಾರು ಕಾರ್ಮಿಕ ಕಾನೂನುಗಳನ್ನು ನಾಲ್ಕು ಸಂಹಿತೆಗಳಾಗಿ ಕ್ರೋಡೀಕರಣ - ಅಂತಹ ಮಹತ್ವದ ನಿರ್ಧಾರಗಳು ನಿರ್ಣಾಯಕ ನಾಯಕ ಎಂಬ ಗೌರವಾನ್ವಿತ ಪ್ರಧಾನ ಮಂತ್ರಿಯ ಚಿತ್ರಣವನ್ನು ಬಲಪಡಿಸುತ್ತವೆ. ಪ್ರಧಾನಮಂತ್ರಿಯವರು ರಾಷ್ಟ್ರೀಯ ಭದ್ರತೆಗೆ ಹೊಸ ಆಯಾಮವನ್ನು ನೀಡಿದ್ದಾರೆ, ಅದಕ್ಕೆ ಹೊಸ ಎತ್ತರವನ್ನು ನೀಡಿದ್ದಾರೆ. ಭಯೋತ್ಪಾದನೆಯ ವಿರುದ್ಧ ದೃಢವಾದ ಕ್ರಮಗಳನ್ನು ತೆಗೆದುಕೊಂಡ ಕೀರ್ತಿ ಸಂಪೂರ್ಣವಾಗಿ ಅವರ ನಾಯಕತ್ವಕ್ಕೆ ಸಲ್ಲುತ್ತದೆ. ಮೊದಲ ಬಾರಿಗೆ, ಗಡಿಯಾಚೆಗಿನ ಭಯೋತ್ಪಾದಕ ಶಿಬಿರಗಳ ಮೇಲೆ ಸರ್ಜಿಕಲ್ ಸ್ಟ್ರೈಕ್ ನಡೆಸಲಾಯಿತು. ಮೊದಲ ಬಾರಿಗೆ, ಗಡಿಯಾಚೆಗಿನ ವೈಮಾನಿಕ ದಾಳಿಯನ್ನು ನಡೆಸಲಾಯಿತು. ಮೊದಲ ಬಾರಿಗೆ 'ಆಪರೇಷನ್ ಸಿಂಧೂರ' ಅಡಿಯಲ್ಲಿ ಈ ಹಿಂದೆ ಊಹಿಸಲಾಗದ ಪಾಕಿಸ್ತಾನದೊಳಗಿನ ಗುರಿಗಳನ್ನು ಹೊಡೆದುರುಳಿಸಲಾಯಿತು. ಗೌರವಾನ್ವಿತ ಪ್ರಧಾನಮಂತ್ರಿಯವರ ನಿರ್ದೇಶನದ ಮೇರೆಗೆ, ಭಾರತ ಸರ್ಕಾರವು ದಶಕಗಳ ಹಿಂದೆ ಪಾಕಿಸ್ತಾನದೊಂದಿಗೆ ಸಹಿ ಹಾಕಿದ ಅನ್ಯಾಯದ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದೆ. ಈಗ ಭಾರತದ ನೀರು ಭಾರತದ ರೈತರಿಗೆ ಉಪಯುಕ್ತವಾಗಲಿದೆ.

ಗೌರವಾನ್ವಿತ ಪ್ರಧಾನ ಮಂತ್ರಿಯವರ ನಾಯಕತ್ವದಲ್ಲಿ ಭಾರತವು ನಕ್ಸಲವಾದದಿಂದ ಸಂಪೂರ್ಣವಾಗಿ ಮುಕ್ತವಾಗುತ್ತಿದೆ. ಈಶಾನ್ಯದಲ್ಲಿ ಅನೇಕ ಶಾಶ್ವತ ಶಾಂತಿ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ, ಇದು ಈ ಪ್ರದೇಶದಲ್ಲಿ ಅಭೂತಪೂರ್ವ ಶಾಂತಿಯ ಯುಗಕ್ಕೆ ನಾಂದಿ ಹಾಡಿದೆ. ಬಾಂಗ್ಲಾದೇಶದೊಂದಿಗಿನ ದಶಕಗಳ ಗಡಿ ವಿವಾದವನ್ನು ಸಹ ಪರಿಹರಿಸಲಾಗಿದೆ. ಸ್ವಾವಲಂಬನೆಯನ್ನು ಸಾಧಿಸದೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಾಧ್ಯವಿಲ್ಲ ಎಂದು ಪ್ರಧಾನ ಮಂತ್ರಿ ದೃಢವಾಗಿ ನಂಬುತ್ತಾರೆ. ಈ ಸ್ಫೂರ್ತಿಯೊಂದಿಗೆ, ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ್ ಅಭಿಯಾನಗಳು ವೇಗವನ್ನು ಪಡೆದುಕೊಂಡಿವೆ.



ಪ್ರಧಾನಮಂತ್ರಿಯವರ ನಾಯಕತ್ವದಲ್ಲಿ, ಭಾರತವು ಹವಾಮಾನ ಬದಲಾವಣೆ ಮತ್ತು ಸುಸ್ಥಿರ ಅಭಿವೃದ್ಧಿ ಕ್ಷೇತ್ರದಲ್ಲಿ ಜವಾಬ್ದಾರಿಯುತ ಮತ್ತು ಸ್ಫೂರ್ತಿದಾಯಕ ಮಾದರಿಯನ್ನು ಜಗತ್ತಿಗೆ ಪ್ರಸ್ತುತಪಡಿಸಿದೆ. ಭಾರತವು ಅಂತಾರಾಷ್ಟ್ರೀಯ ಸೌರ ಒಕ್ಕೂಟ, ವಿಪತ್ತು ತಾಳಿಕೊಳ್ಳುವ ಮೂಲಸೌಕರ್ಯ ಸಹಯೋಗ ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟದಂತಹ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಮಿಷನ್ ಲೈಫ್ ಮತ್ತು 'ಏಕ್ ಪೇಡ್ ಮಾ ಕೆ ನಾಮ್' (ತಾಯಿಯ ಹೆಸರಿನಲ್ಲಿ ಒಂದು ಗಿಡ) ನಂತಹ ಜನಾಂದೋಲನಗಳನ್ನು ಜಾಗತಿಕ ವೇದಿಕೆಗಳಲ್ಲಿ ಭಾರತದ ಕೊಡುಗೆಯಾಗಿ ಪ್ರಧಾನಮಂತ್ರಿಯವರು ಸ್ಥಾಪಿಸಿದ್ದಾರೆ. 'ಕ್ಯಾಚ್ ದಿ ರೈನ್' ಮತ್ತು ಅಮೃತ್ ಸರೋವರದಂತಹ ಅಭಿಯಾನಗಳು ನೀರಿನ ಸಂರಕ್ಷಣೆಗೆ ಸಹಾಯ ಮಾಡಿವೆ ಮಾತ್ರವಲ್ಲದೆ ಯುವ ಪೀಳಿಗೆಗೆ ಈ ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸಿವೆ.

ಇಂದು, ಭಾರತವು ರಕ್ಷಣೆ, ಎಲೆಕ್ಟ್ರಾನಿಕ್ಸ್, ವಾಹನಗಳು ಮತ್ತು ಔಷಧಗಳಂತಹ ವಿವಿಧ ಕ್ಷೇತ್ರಗಳಲ್ಲಿ ಉತ್ಪಾದನೆ ಮತ್ತು ರಫ್ತಿನಲ್ಲಿ ಹೊಸ ದಾಖಲೆಗಳನ್ನು ನಿರ್ಮಿಸುತ್ತಿದೆ. ಇದಲ್ಲದೆ, ಇದು ಸೆಮಿಕಂಡಕ್ಟರ್ ಗಳು, ಹಸಿರು ಇಂಧನ, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಶ್ಲಾಘನೀಯ ಕೆಲಸ ಮಾಡುತ್ತಿದೆ. ಪ್ರಧಾನಮಂತ್ರಿಯವರ ನಾಯಕತ್ವದಲ್ಲಿ ಭಾರತದ ಜಾಗತಿಕ ಪಾತ್ರವೂ ಅಭೂತಪೂರ್ವವಾಗಿ ಬಲಗೊಂಡಿದೆ. ಜಾಗತಿಕ ವೇದಿಕೆಗಳಲ್ಲಿ ಭಾರತದ ಧ್ವನಿಗೆ ಹೊಸ ಪ್ರತಿಷ್ಠೆ ಲಭಿಸಿದೆ. ಜಿ-20 ರ ಭಾರತದ ಯಶಸ್ವಿ ಅಧ್ಯಕ್ಷತೆ, ಜಾಗತಿಕ ದಕ್ಷಿಣದ ಆಕಾಂಕ್ಷೆಗಳಿಗೆ ಧ್ವನಿ ನೀಡುವುದು ಮತ್ತು ವಿವಿಧ ಜಾಗತಿಕ ಉಪಕ್ರಮಗಳಲ್ಲಿ ಪ್ರಮುಖ ಪಾತ್ರವು ದೇಶದ ಅಂತಾರಾಷ್ಟ್ರೀಯ ಪ್ರತಿಷ್ಠೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದಿದೆ. ಪ್ರಧಾನಮಂತ್ರಿಯವರ ಪ್ರಯತ್ನದಿಂದಾಗಿ, 170 ಕ್ಕೂ ಹೆಚ್ಚು ದೇಶಗಳು ಒಂದುಗೂಡಿದವು ಮತ್ತು ವಿಶ್ವಸಂಸ್ಥೆಯು ಜೂನ್ 21 ಅನ್ನು ಅಂತಾರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿತು.



ಭಾರತದ ಇತಿಹಾಸದಲ್ಲಿ ಅಭಿವೃದ್ಧಿ ಮತ್ತು ಪರಂಪರೆಯನ್ನು ಒಟ್ಟಿಗೆ ಮುಂದಕ್ಕೆ ಕೊಂಡೊಯ್ಯುತ್ತಿರುವುದು ಇದೇ ಮೊದಲು. ಇದು ಭಾರತದ ಸಾಂಸ್ಕೃತಿಕ ಪ್ರಜ್ಞೆಯ ಪುನರುಜ್ಜೀವಕ್ಕೆ ಕಾರಣವಾಗಿದೆ. ಗುಲಾಮಗಿರಿಯ ಮನಸ್ಥಿತಿಯಿಂದ ಮುಕ್ತರಾಗಲು, ರಾಷ್ಟ್ರೀಯ ಹೆಮ್ಮೆಯನ್ನು ಪುನಃಸ್ಥಾಪಿಸಲು ಮತ್ತು ಅದರ ನಾಗರಿಕತೆಯ ಪರಂಪರೆಯ ಬಗ್ಗೆ ಹೆಮ್ಮೆಪಡುವಂತೆ ಗೌರವಾನ್ವಿತ ಪ್ರಧಾನಮಂತ್ರಿಯವರು ದೇಶಕ್ಕೆ ಕರೆ ನೀಡಿದರು. ಇಂದು ದೇಶವು ಇದರ ಫಲಿತಾಂಶಗಳನ್ನು ಸಹ ನೋಡುತ್ತಿದೆ. ಹೊಸ ಸಂಸತ್ ಭವನ, ಸೇವಾ ತೀರ್ಥ, ಕರ್ತವ್ಯ ಪಥ ಮತ್ತು ಕರ್ತವ್ಯ ಭವನದಂತಹ ಅನೇಕ ನಿರ್ಮಾಣಗಳು ನವ ಭಾರತದ ಹೊಸ ಆತ್ಮವಿಶ್ವಾಸದ ಸಂಕೇತಗಳಾಗಿವೆ. ಪ್ರಧಾನಮಂತ್ರಿಯವರು ಸಾರ್ವಜನಿಕ ಸಹಭಾಗಿತ್ವವನ್ನು ಬದಲಾವಣೆಯ ಮಾಧ್ಯಮವನ್ನಾಗಿ ಮಾಡಿದ್ದಾರೆ. ಅದು ಸ್ವಚ್ಛ ಭಾರತ ಅಭಿಯಾನವಾಗಿರಲಿ, ಬೇಟಿ ಬಚಾವೋ ಬೇಟಿ ಪಡಾವೋ ಅಭಿಯಾನವಾಗಿರಲಿ ಅಥವಾ ಎಲ್ಪಿಜಿ ಸಬ್ಸಿಡಿಯನ್ನು ತ್ಯಜಿಸಲು ಪ್ರೋತ್ಸಾಹ ನೀಡುವುದಾಗಲಿ, ಇವು ವರ್ಷಗಳಿಂದ ಜನರ ಸಾಮೂಹಿಕ ಪ್ರಯತ್ನಗಳಿಗೆ ಪ್ರಮುಖ ಮಾಧ್ಯಮವಾಗಿವೆ. ಸಾರ್ವಜನಿಕ ಸಹಭಾಗಿತ್ವದ ಮೂಲಕ ಬದಲಾವಣೆಯ ಈ ಪ್ರೇರಣೆಯೊಂದಿಗೆ, ದೇಶವು ಕೊರೊನಾದಂತಹ ಸಾಂಕ್ರಾಮಿಕ ರೋಗವನ್ನು ಯಶಸ್ವಿಯಾಗಿ ಎದುರಿಸಿತು. ಮತ್ತು ಇಂದಿಗೂ 140 ಕೋಟಿ ದೇಶವಾಸಿಗಳು ಒಟ್ಟಾಗಿ ದೊಡ್ಡ ಜಾಗತಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಕಳೆದ 12 ವರ್ಷಗಳಲ್ಲಿ ದೇಶವು ಅನುಭವಿಸಿದ ರಾಜಕೀಯ ಸ್ಥಿರತೆಯು ಅಭಿವೃದ್ಧಿಯ ವೇಗಕ್ಕೆ ಅಭೂತಪೂರ್ವ ವೇಗವನ್ನು ನೀಡಿದೆ ಎಂದು ಕೇಂದ್ರ ಸಚಿವ ಸಂಪುಟ ಒತ್ತಿ ಹೇಳುತ್ತದೆ. ಕಳೆದ ವರ್ಷಗಳಲ್ಲಿ ಭಾರತದ ಮೂಲಸೌಕರ್ಯ ಭೂರಮೆ ಬದಲಾಗಿರುವ ವೇಗವು ಸ್ವತಃ ಒಂದು ಉದಾಹರಣೆಯಾಗಿದೆ. ಭಾರತದ ರಾಜಕೀಯ ಸ್ಥಿರತೆಯು ದೇಶದ ಜಾಗತಿಕ ಪ್ರಭಾವ ಮತ್ತು ಜಾಗತಿಕ ಹೂಡಿಕೆದಾರರ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ. ಕಳೆದ 12 ವರ್ಷಗಳಲ್ಲಿ, ಪ್ರಧಾನಮಂತ್ರಿಯವರ ನಾಯಕತ್ವವು ಆಡಳಿತದಲ್ಲಿ ಚಲನಶೀಲತೆ, ನಿರ್ಧಾರ ತೆಗೆದುಕೊಳ್ಳುವಲ್ಲಿ ಪಾರದರ್ಶಕತೆ ಮತ್ತು ನೀತಿಗಳಲ್ಲಿನ ದೃಷ್ಟಿಕೋನದಿಂದ ನಿರೂಪಿಸಲ್ಪಟ್ಟಿದೆ. ಇದು ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಲು ಅನುವು ಮಾಡಿಕೊಟ್ಟಿದೆ.

ಅಲ್ಲದೆ, ಕೇಂದ್ರ ಸಚಿವ ಸಂಪುಟವು ಗೌರವಾನ್ವಿತ ಪ್ರಧಾನ ಮಂತ್ರಿಯವರ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ಶುಭ ಹಾರೈಸುತ್ತದೆ. ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತವು ಸ್ವಾವಲಂಬಿ, ಸುರಕ್ಷಿತ, ಸಮೃದ್ಧ ಮತ್ತು ಹೆಮ್ಮೆಯ ರಾಷ್ಟ್ರವಾಗಿ ಹೊಸ ಎತ್ತರಕ್ಕೆ ಏರುವುದನ್ನು ಮುಂದುವರಿಸುತ್ತದೆ ಮತ್ತು 2047 ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಹಾದಿಯನ್ನು ಬಲಪಡಿಸುತ್ತದೆ ಎಂದು ಕೇಂದ್ರ ಸಚಿವ ಸಂಪುಟ ವಿಶ್ವಾಸ ವ್ಯಕ್ತಪಡಿಸಿದೆ.

## ಕೇಂದ್ರ ಸಚಿವ ಸಂಪುಟ

1. ಈ ಐತಿಹಾಸಿಕ ಸಾಧನೆಗಾಗಿ ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳನ್ನು ಸಲ್ಲಿಸುತ್ತದೆ.
2. ಬಡವರ ಕಲ್ಯಾಣಕ್ಕಾಗಿ ಮತ್ತು ಸಮಾಜದ ವಂಚಿತ ವರ್ಗಗಳ ಸಬಲೀಕರಣಕ್ಕಾಗಿ ಅವರ ನಾಯಕತ್ವದಲ್ಲಿ ಮಾಡಿದ ಕಾರ್ಯಗಳಿಗೆ ಕೃತಜ್ಞತೆ ಸಲ್ಲಿಸಿದೆ.
3. ಗೌರವಾನ್ವಿತ ಪ್ರಧಾನಮಂತ್ರಿಯವರ ನಾಯಕತ್ವದಲ್ಲಿ ಭಾರತದ 25 ಕೋಟಿಗೂ ಹೆಚ್ಚು ಬಡ ಜನರು ಬಡತನದಿಂದ ಹೊರಬಂದಿದ್ದಾರೆ.
4. ರಾಷ್ಟ್ರ ಸೇವೆಗಾಗಿ ಅವರ ಸಾಟಿಯಿಲ್ಲದ ಸಮರ್ಪಣೆ ಮತ್ತು ದಣಿವರಿಯದ ಕಠಿಣ ಪರಿಶ್ರಮಕ್ಕೆ ಕೃತಜ್ಞತೆ ಸಲ್ಲಿಸುತ್ತದೆ.
5. ಸಮಗ್ರ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದತ್ತ ಅವರ ಪ್ರಯತ್ನಗಳನ್ನು ಶ್ಲಾಘಿಸಿದೆ.
6. ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವಲ್ಲಿ ಮತ್ತು ಭಾರತದ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಅವರ ನಾಯಕತ್ವವನ್ನು ಶ್ಲಾಘಿಸಿದೆ.
7. ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ಅವರ ದೂರದೃಷ್ಟಿಯ ಸಂಕಲ್ಪ ಮತ್ತು ನಾಯಕತ್ವಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತದೆ.

# ಐತಿಹಾಸಿಕ ನಾಯಕತ್ವ, ಜಾಗತಿಕ ಮೆಚ್ಚುಗೆ

# ನವ ಭಾರತ, ಸಶಕ್ತ ಭಾರತ

*ಪ್ರಜಾಪ್ರಭುತ್ವ ನಾಯಕತ್ವದಲ್ಲಿ ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಭಾರತದ ಚುನಾಯಿತ ಪ್ರಧಾನ ಮಂತ್ರಿಯಾಗಿ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಈ ಮಹತ್ವದ ಸಂದರ್ಭದಲ್ಲಿ, ಜಾಗತಿಕ ನಾಯಕರು ಅವರ ಪರಿವರ್ತಕ ಆಡಳಿತ, ಅಂತರ್ಗತ ಮತ್ತು ಸಶಕ್ತ ಭಾರತಕ್ಕಾಗಿ ಅವರ ದೃಷ್ಟಿಕೋನ ಮತ್ತು ಅಂತಾರಾಷ್ಟ್ರೀಯ ವೇದಿಕೆಯಲ್ಲಿ 'ಜಾಗತಿಕ ದಕ್ಷಿಣ'ದ ಧ್ವನಿಯಾಗಿ ಅವರ ಪಾತ್ರವನ್ನು ಅಂಗೀಕರಿಸಿ ಅಭಿನಂದನಾ ಸಂದೇಶಗಳನ್ನು ಕಳುಹಿಸಿದ್ದಾರೆ.*

ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಭಾರತದ ಅತಿ ದೀರ್ಘ ಕಾಲ ಸೇವೆ ಸಲ್ಲಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿಶ್ವದಾದ್ಯಂತದ ನಾಯಕರಿಂದ ಅಭಿನಂದನೆಗಳನ್ನು ಸ್ವೀಕರಿಸಿದರು. ಭೂತಾನ್ ಪ್ರಧಾನ ಮಂತ್ರಿ ಶೆರಿಂಗ್ ಟೊಬ್ಗೆ ಅವರನ್ನು ಸ್ನೇಹಿತ, ಸಹೋದರ ಮತ್ತು ಮಾರ್ಗದರ್ಶಕ ಎಂದು ಬಣ್ಣಿಸಿದರು, ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ ಅವರು ಆತ್ಮೀಯ ಅಭಿನಂದನೆಗಳನ್ನು ಸಲ್ಲಿಸಿದರು ಮತ್ತು ಉಭಯ ರಾಷ್ಟ್ರಗಳ ನಡುವಿನ ದೀರ್ಘಕಾಲೀನ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಶ್ರೀಲಂಕಾದ ಬದ್ಧತೆಯನ್ನು ಪುನರುಚ್ಚರಿಸಿದರು.



**ಮಲೇಷ್ಯಾದ ಪ್ರಧಾನ ಮಂತ್ರಿ ಅನ್ವರ್ ಇಬ್ರಾಹಿಂ ಕೂಡ ಈ ಐತಿಹಾಸಿಕ ಸಾಧನೆಗಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಅಭಿನಂದಿಸಿದ್ದು, ಇದು ಅವರ ಹಲವು ವರ್ಷಗಳ ಸಮರ್ಪಿತ ಸಾರ್ವಜನಿಕ ಸೇವೆ ಮತ್ತು ನಾಯಕತ್ವಕ್ಕೆ ಸಾಕ್ಷಿಯಾಗಿದೆ ಎಂದು ಬಣ್ಣಿಸಿದ್ದಾರೆ. ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಮತ್ತು ಎರಡೂ ರಾಷ್ಟ್ರಗಳ ಜನರಿಗೆ ಅವಕಾಶಗಳನ್ನು ವಿಸ್ತರಿಸುವ ಮಲೇಷ್ಯಾದ ಬದ್ಧತೆಯನ್ನು ಅವರು ಪುನರುಚ್ಚರಿಸಿದ್ದಾರೆ.**



**ನೈಜೀರಿಯಾದ ಅಧ್ಯಕ್ಷ ಬೋಲಾ ಅಹ್ಮದ್ ಟಿನುಬು ಅವರು ಈ ಸಾಧನೆಗಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿ, ಸತತ ಮೂರು ಅವಧಿಗಳಲ್ಲಿ ಭಾರತದ ಜನರು ಅವರ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸವನ್ನು ಉಲ್ಲೇಖಿಸಿದರು. ಕೀನ್ಯಾ ಅಧ್ಯಕ್ಷ ವಿಲಿಯಂ ಸಮೋೕಯಿ ರುಟೊ ಕೂಡ ಈ ಐತಿಹಾಸಿಕ ಮೈಲಿಗಲ್ಲು ಸಾಧಿಸಿದ್ದಕ್ಕಾಗಿ ಪ್ರಧಾನ ಮಂತ್ರಿ ಮೋದಿಯವರನ್ನು ಅಭಿನಂದಿಸಿದ್ದಾರೆ.**

**ಇಟಲಿಯ ಪ್ರಧಾನಮಂತ್ರಿ ಜಾರ್ಜಿಯಾ ಮೆಲೋನಿ ಅವರು ಭಾರತದ ಇತಿಹಾಸದಲ್ಲಿ ಅತಿ ಹೆಚ್ಚು ಕಾಲ ಆಡಳಿತ ನಡೆಸಿದ ಚುನಾಯಿತ ಪ್ರಧಾನ ಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದ್ದಾರೆ. ಅವರು ಇತ್ತೀಚೆಗೆ ರೋಮ್ ನಲ್ಲಿ ನಡೆದ ಭೇಟಿಯನ್ನು ನೆನಪಿಸಿಕೊಂಡಿದ್ದು, ಎರಡೂ ರಾಷ್ಟ್ರಗಳು ಮತ್ತು ಅವರ ಜನರ ಅನುಕೂಲಕ್ಕಾಗಿ ಭಾರತ ಮತ್ತು ಇಟಲಿ ನಡುವಿನ ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಮುಂದುವರಿಸುವ ಬದ್ಧತೆಯನ್ನು ವ್ಯಕ್ತಪಡಿಸಿದ್ದಾರೆ.**



- ದಕ್ಷಿಣ ಕೊರಿಯಾ ಅಧ್ಯಕ್ಷ ಲೀ ಜೇ-ಮ್ಯುಂಗ್, ಭಾರತದ ಇತಿಹಾಸದಲ್ಲಿ ಅತಿ ದೀರ್ಘ ಕಾಲ ಸೇವೆ ಸಲ್ಲಿಸಿದ ಪ್ರಧಾನ ಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದ್ದಾರೆ.
- ಪ್ರಜಾಸತ್ತಾತ್ಮಕವಾಗಿ ಚುನಾಯಿತರಾಗಿ ಭಾರತದ ಅತಿ ದೀರ್ಘಾವಧಿ ಸೇವೆ ಸಲ್ಲಿಸಿದ ಪ್ರಧಾನ ಮಂತ್ರಿಯ ಸಾಧನೆಗಾಗಿ ಡ್ಯಾನಿಶ್ ಪ್ರಧಾನ ಮಂತ್ರಿ ಮೆಟ್ಟೆ ಫ್ರೆಡೆರಿಕ್ಸನ್ ಪ್ರಧಾನ ಮಂತ್ರಿ ಮೋದಿ ಅವರನ್ನು ಅಭಿನಂದಿಸಿದ್ದಾರೆ.



- ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಅತಿ ದೀರ್ಘ ಕಾಲ ಚುನಾಯಿತ ಪ್ರಧಾನ ಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದ್ದಾರೆ.



**ಭಾರತದ ಇತಿಹಾಸದಲ್ಲಿ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಪ್ರಧಾನ ಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲಿಡ್ಸ್ ಅಭಿನಂದಿಸಿದರು. ಈ ಸಾಧನೆಯು ವರ್ಷಗಳ ಸಮರ್ಪಣಾ ಮನೋಭಾವದ ಸೇವೆ ಮತ್ತು ನಾಯಕತ್ವದ ಫಲಿತಾಂಶವಾಗಿದೆ ಎಂದು ಅವರು ಬಣ್ಣಿಸಿದರು.**

- ಗ್ರೀಕ್ ಪ್ರಧಾನ ಮಂತ್ರಿ ಕಿರಿಯಾಕೋಸ್ ಮಿಟ್ಸೊಟಾಕಿಸ್, ಜರ್ಮನ್ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಮತ್ತು ಪಪುವಾ ನ್ಯೂಗಿನಿಯಾ ಪ್ರಧಾನ ಮಂತ್ರಿ ಜೇಮ್ಸ್ ಮರಪೆ ಕೂಡ ಈ ಐತಿಹಾಸಿಕ ಸಾಧನೆಗಾಗಿ ಪ್ರಧಾನ ಮಂತ್ರಿ ಮೋದಿ ಅವರನ್ನು ಅಭಿನಂದಿಸಿದರು. ಅವರು ಪ್ರಧಾನ ಮಂತ್ರಿ ಮೋದಿಯವರನ್ನು "ರೋಲ್ ಮಾಡೆಲ್ ಮತ್ತು ನಾಯಕತ್ವದ ನಿದರ್ಶನ" ಎಂದು ಬಣ್ಣಿಸಿದ್ದಾರೆ.



- ಪ್ರಧಾನ ಮಂತ್ರಿ ಮೋದಿಯವರ ನಾಯಕತ್ವದಲ್ಲಿ ಭಾರತವು ಜಾಗತಿಕ ವ್ಯವಹಾರಗಳಲ್ಲಿ ಪ್ರಮುಖ ಧ್ವನಿಯಾಗಿ ಹೊರಹೊಮ್ಮಿದೆ ಎಂದು ಟ್ರಿನಿಡಾಡ್ ಮತ್ತು ಟೊಬಾಗೊ ಪ್ರಧಾನ ಮಂತ್ರಿ ಕಮಲಾ ಪೆರ್ಸಾದ್-ಬಿಸ್ಸೆಸರ್ ಹೇಳಿದ್ದಾರೆ.




ಕೇಂದ್ರ ಸಚಿವ ಸಂಪುಟದ ನಿರ್ಣಯ

# ಅಹಮದಾಬಾದ್ ಮೆಟ್ರೊ ಮೂಲಸೌಕರ್ಯಕ್ಕೆ ಅನುಮೋದನೆ

*ಎನ್.ಡಿ.ಎ ಸರ್ಕಾರದ 12 ವರ್ಷಗಳನ್ನು ಪೂರೈಸಿದ ಅಂಗವಾಗಿ ಜೂನ್ 10 ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಶ್ಲಾಘಿಸಿ ನಿರ್ಣಯವನ್ನು ಅಂಗೀಕರಿಸಲಾಯಿತು. ಹೆಚ್ಚುವರಿಯಾಗಿ, ಅಹಮದಾಬಾದ್ ಮೆಟ್ರೋ ರೈಲು ಯೋಜನೆಯ ವಿಸ್ತರಣೆ ಸೇರಿದಂತೆ ಹಲವಾರು ಮಹತ್ವದ ಮೂಲಸೌಕರ್ಯ ಸಂಬಂಧಿತ ಪ್ರಸ್ತಾಪಗಳಿಗೆ ಸಂಪುಟ ಅನುಮೋದನೆ ನೀಡಿತು.*

**ನಿರ್ಣಯ: ಅಹ್ಮದಾಬಾದ್ ಮೆಟ್ರೋ ರೈಲು ಯೋಜನೆಯ (ಕೋಟೇಶ್ವರ ರಸ್ತೆಯಿಂದ ವಿಮಾನ ನಿಲ್ದಾಣ ಕಾರಿಡಾರ್) ಹಂತ 2ಎ ಗೆ ಅನುಮೋದನೆ ನೀಡಲಾಗಿದೆ.**

**ಪರಿಣಾಮ:** ಈ ಕಾರಿಡಾರ್ 6.032 ಕಿ.ಮೀ ಉದ್ದವನ್ನು ವ್ಯಾಪಿಸಿದ್ದು, 5 ನಿಲ್ದಾಣಗಳನ್ನು ಒಳಗೊಂಡಿದೆ (4 ಎತ್ತರದ ಮತ್ತು 1 ಭೂಗತ). ಹಂತ 2 (ಎ) ಅನುಷ್ಠಾನದ ನಂತರ, ಅಹಮದಾಬಾದ್-ಗಾಂಧಿನಗರ ಕಾರಿಡಾರ್ 77.63 ಕಿಲೋಮೀಟರ್ ವ್ಯಾಪಿಸಿರುವ ಕಾರ್ಯಾಚರಣಾ ಮೆಟ್ರೋ ರೈಲು ಜಾಲವನ್ನು ಹೊಂದಿರುತ್ತದೆ. ಯೋಜನೆಯ ಒಟ್ಟು ವೆಚ್ಚ 2,169.04 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಈ ಕಾರಿಡಾರ್ ವಿಮಾನ ನಿಲ್ದಾಣಕ್ಕೆ ತಡೆರಹಿತ ಸಂಪರ್ಕವನ್ನು ಒದಗಿಸುವ ಮತ್ತು ಪ್ರಮುಖ ವಸತಿ ಮತ್ತು ವಾಣಿಜ್ಯ ಪ್ರದೇಶಗಳನ್ನು ಸಂಪರ್ಕಿಸುವ ಮೂಲಕ ಸಾರ್ವಜನಿಕ ಸಾರಿಗೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯು ಸುಧಾರಿತ ಸಂಪರ್ಕ, ಸಂಚಾರ ದಟ್ಟಣೆಯಿಂದ ಪರಿಹಾರ, ಪರಿಸರ ಪ್ರಯೋಜನಗಳು, ಆರ್ಥಿಕ ಬೆಳವಣಿಗೆ ಮತ್ತು ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಭರವಸೆ ನೀಡುತ್ತದೆ.

**ನಿರ್ಣಯ: ಆಂಧ್ರಪ್ರದೇಶದ ಹೊಸ ರಾಜಧಾನಿ ಅಮರಾವತಿಯಲ್ಲಿ ಜನರಲ್ ಪೂಲ್ ರೆಸಿಡೆನ್ಷಿಯಲ್ ಅಕಾಮೊಡೇಶನ್ (ಜಿ.ಪಿ.ಆರ್.ಎ) ನಿರ್ಮಾಣಕ್ಕೆ ಅನುಮೋದನೆ.**

**ಪರಿಣಾಮ:** ರಾಜಧಾನಿ ಅಮರಾವತಿ ಮತ್ತು ಆಂಧ್ರಪ್ರದೇಶದ ಮೊದಲ ಜಿ.ಪಿ.ಆರ್.ಎ ಯೋಜನೆ ಇದಾಗಿದೆ. ಈ ಪ್ರಸ್ತಾಪವು ಕೇಂದ್ರ ಸರ್ಕಾರಿ ನೌಕರರ ಮೇಲಿನ ಆರ್ಥಿಕ ಹೊರೆಯನ್ನು ತಗ್ಗಿಸುವ ಮೂಲಕ ಸಾಕಷ್ಟು ವಸತಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರ ನೈತಿಕ ಸ್ಥೈರ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಇದಲ್ಲದೆ, ಉದ್ಯೋಗಿಗಳು ತಮ್ಮ ಕೆಲಸದ ಸ್ಥಳಗಳಿಗೆ ಹತ್ತಿರದಲ್ಲಿ ವಾಸಿಸಲು ಅನುವು ಮಾಡಿಕೊಡುವ ಮೂಲಕ, ಯೋಜನೆಯು ಸರ್ಕಾರದ ದಕ್ಷ ಕಾರ್ಯನಿರ್ವಹಣೆಯನ್ನು ಸುಗಮಗೊಳಿಸುತ್ತದೆ ಮತ್ತು ಅಧಿಕೃತ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅವರ ಲಭ್ಯತೆಯನ್ನು ಖಚಿತಪಡಿಸುತ್ತದೆ. ಯೋಜನೆಯ ಅಂದಾಜು ವೆಚ್ಚ 1,234.91 ಕೋಟಿ ರೂ. ನಿರ್ಮಾಣ ಹಂತವು ವಾರ್ಷಿಕವಾಗಿ ಸುಮಾರು 7 ಲಕ್ಷ ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿಸುತ್ತದೆ ಎಂದು ಅಂದಾಜಿಸಲಾಗಿದೆ.

**ನಿರ್ಣಯ: ಆಂಧ್ರಪ್ರದೇಶದ ನೂತನ ರಾಜಧಾನಿ ಅಮರಾವತಿಯಲ್ಲಿ ಕೇಂದ್ರ ಸರ್ಕಾರದ ನೂತನ ಜನರಲ್ ಪೂಲ್ ಕಚೇರಿ ಸಂಕೀರ್ಣ ನಿರ್ಮಾಣಕ್ಕೆ ಅನುಮೋದನೆ.**

**ಪರಿಣಾಮ:** ಈ ಯೋಜನೆಯು ಹೊಸ ಹಸಿರು ವಲಯ ನಗರ ಅಮರಾವತಿಗೆ ಒಂದು ಹೆಗ್ಗುರುತಿನ ಉಪಕ್ರಮವಾಗಿದೆ, ಇದನ್ನು ವಿಶ್ವದರ್ಜೆಯ ನಗರ ಕೇಂದ್ರವಾಗಿ ರೂಪಿಸಲಾಗಿದೆ. ಈ ಪ್ರಸ್ತಾಪವು ವಿವಿಧ ಕೇಂದ್ರ ಸರ್ಕಾರಿ ಕಚೇರಿಗಳನ್ನು ಒಂದೇ ಸೂರಿನಡಿ ತರುವ ಮೂಲಕ ಕಚೇರಿ ಸ್ಥಳಾವಕಾಶದ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವ ಗುರಿಯನ್ನು ಹೊಂದಿದೆ. ಈ ಕ್ರೋಡೀಕರಣವು ಅಂತರ-ಇಲಾಖೆಗಳ ಸಮನ್ವಯವನ್ನು ಹೆಚ್ಚಿಸುತ್ತದೆ ಮತ್ತು ಕೇಂದ್ರ ಸರ್ಕಾರವು ಆಂಧ್ರಪ್ರದೇಶಕ್ಕೆ ಒದಗಿಸುವ ಸೇವೆಗಳ ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಸುಧಾರಿಸುತ್ತದೆ. ನಿರ್ಮಾಣ ಹಂತವು ವಾರ್ಷಿಕವಾಗಿ ಸುಮಾರು 7 ಲಕ್ಷ ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿಸುತ್ತದೆ ಎಂದು ಅಂದಾಜಿಸಲಾಗಿದೆ. ಯೋಜನೆಯ ಅಂದಾಜು ವೆಚ್ಚ 1,299.08 ಕೋಟಿ ರೂ.

ಮುಖಪುಟ ಲೇಖನ

ನ್ಯಾಯ ಸಂಹಿತೆಯ 2 ವರ್ಷಗಳು

# ಸ್ವದೇಶಿ ನ್ಯಾಯ ವ್ಯವಸ್ಥೆ

# ಹೊಸ ಆರಂಭದ ಎರಡು ವರ್ಷಗಳು, ಒಂದು ಹೊಸ ಹಾದಿ



***ಒಂದು ನಾಗರಿಕ ಸಮಾಜಕ್ಕೆ ಸದೃಢ ನ್ಯಾಯ ವಿತರಣಾ ವ್ಯವಸ್ಥೆಯೇ ಅಡಿಪಾಯವಾಗಿದ್ದು, ಇದು ಅಪಾರ ಪ್ರಾಮುಖ್ಯತೆಯನ್ನು ಒಳಗೊಂಡಿದೆ. ಇದೇ ದೃಷ್ಟಿಕೋನದೊಂದಿಗೆ, ಜುಲೈ 1, 2024 ರಂದು ಭಾರತವು, ಒಂದೂವರೆ ಶತಮಾನಕ್ಕೂ ಹೆಚ್ಚು ಕಾಲ ಕೇವಲ ಶಿಕ್ಷೆಯ ತತ್ವವನ್ನೇ ನೆಚ್ಚಿಕೊಂಡಿದ್ದ ಮತ್ತು ದಾಸ್ಯದ ಮನೋಭಾವದಲ್ಲಿ ಬೇರೂರಿದ್ದ ವಸಾಹತುಶಾಹಿ ಕಾಲದ ಮೂರು ಕಾಯ್ದೆಗಳನ್ನು ಬದಲಾಯಿಸಿತು. ಎರಡು ವರ್ಷಗಳ ಹಿಂದೆ, ಸಂಪೂರ್ಣ ಸ್ವದೇಶಿ ಪ್ರಕ್ರಿಯೆಯ ಮೂಲಕ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮಗಳು ಶಿಕ್ಷೆಯ ಬದಲು ನ್ಯಾಯ ಒದಗಿಸುವುದರ ಕಡೆಗೆ ಗಮನಹರಿಸಿ ಒಂದು ಹೊಸ ಯುಗಕ್ಕೆ ನಾಂದಿ ಹಾಡಿದವು. ಎರಡು ಶತಮಾನಗಳ ನಂತರ, ಭಾರತವು ವಸಾಹತುಶಾಹಿ ದಾಸ್ಯದ ನೆರಳಿನಿಂದ ಮುಕ್ತವಾಗಿ, 21ನೇ ಶತಮಾನದಲ್ಲಿ ಕೊನೆಗೂ ತನ್ನದೇ ಆದ ಕಾನೂನುಗಳನ್ನು ಪಡೆದುಕೊಂಡಿತು. ಪರಿಣಾಮವಾಗಿ, ಕಳೆದ ಎರಡು ವರ್ಷಗಳಲ್ಲಿ ನಾಗರಿಕರು, ಪೊಲೀಸ್ ಮತ್ತು ನ್ಯಾಯಾಲಯಗಳು ಸೇರಿದಂತೆ ಎಲ್ಲರಿಗೂ ನ್ಯಾಯದ ಭಾಷೆ ಮತ್ತು ಚೌಕಟ್ಟೇ ಬದಲಾಗಿದೆ. ಈ ಬದಲಾವಣೆಯ ಮೂಲಕ ಭಾರತದ ಜನರು ದೇಶೀಯ ನ್ಯಾಯ ವ್ಯವಸ್ಥೆಯ ಹೊಸ ಆರಂಭವನ್ನು ಕಣ್ಣಾರೆ ಕಾಣುತ್ತಿದ್ದಾರೆ...***



**1** *ಚಂಡೀಗಢದ ವಾಹನ ಕಳವು ಪ್ರಕರಣವೊಂದರಲ್ಲಿ, ಎಫ್ ಐ ಆರ್ ದಾಖಲಾದ ಕೇವಲ 14 ದಿನಗಳಲ್ಲಿ ನ್ಯಾಯಾಲಯವು ತೀರ್ಪು ಪ್ರಕಟಿಸಿತು. ಮತ್ತೊಂದು ಘಟನೆಯಲ್ಲಿ, ಗಲಭೆಗೆ ಪ್ರಚೋದಿಸಿದ ಆರೋಪ ಹೊತ್ತಿದ್ದ ವ್ಯಕ್ತಿಗೆ ಕೇವಲ 20 ದಿನಗಳಲ್ಲಿ ಪೂರ್ಣ ವಿಚಾರಣೆ ಮುಗಿಸಿ ಶಿಕ್ಷೆ ವಿಧಿಸಲಾಯಿತು.*

**2** *ದೆಹಲಿಯ ಒಂದು ಐತಿಹಾಸಿಕ ಪ್ರಕರಣದಲ್ಲಿ, ಎಫ್ ಐ ಆರ್ ನಿಂದ ಅಂತಿಮ ತೀರ್ಪಿನವರೆಗಿನ ಪ್ರಕ್ರಿಯೆಯು ಕೇವಲ 60 ದಿನಗಳಲ್ಲಿ ಅತ್ಯಂತ ವೇಗವಾಗಿ ಮುಕ್ತಾಯಗೊಂಡು, ಆರೋಪಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆಯಾಯಿತು.*

**3** *ಬಿಹಾರದ ಛಪ್ರಾದಲ್ಲಿಯೂ ಸಹ, ಕೊಲೆ ಪ್ರಕರಣವೊಂದರಲ್ಲಿ ಎಫ್ ಐ ಆರ್ ದಾಖಲಾದಾಗಿನಿಂದ ಹಿಡಿದು ದೋಷಾರೋಪಣೆ ಪಟ್ಟಿ ಸಲ್ಲಿಕೆಯಾಗುವವರೆಗಿನ ಪ್ರಕ್ರಿಯೆಗೆ ತೆಗೆದುಕೊಂಡಿದ್ದು ಕೇವಲ ಎರಡು ತಿಂಗಳು ಮತ್ತು ಹನ್ನೊಂದು ದಿನಗಳು ಮಾತ್ರ. ತ್ವರಿತ ನ್ಯಾಯವನ್ನು ಖಚಿತಪಡಿಸುವ ನಿಟ್ಟಿನಲ್ಲಿ ಇದು ಒಂದು ಮಹತ್ವದ ಹೆಜ್ಜೆಯಾಗಿದೆ.*

ಎಲ್ಲಾ ರಾಜ್ಯಗಳಲ್ಲಿ ಹೊಸ ಕಾನೂನುಗಳನ್ನು ಪೂರ್ತಿಯಾಗಿ ಜಾರಿಗೆ ತರಲು ಮೂರು ವರ್ಷಗಳ ಸಮಯ ನೀಡಲಾಗಿದ್ದರೂ, ಕಳೆದ ಕೇವಲ ಎರಡು ವರ್ಷಗಳಲ್ಲಿ ಸಿಕ್ಕಿರುವ ಯಶಸ್ಸು ತುಂಬಾ ದೊಡ್ಡದಾಗಿದೆ. ಈ ಕೆಲವು ಉದಾಹರಣೆಗಳು ಭಾರತೀಯ ನ್ಯಾಯ ಸಂಹಿತೆಯ ಶಕ್ತಿ ಮತ್ತು ಪ್ರಭಾವವನ್ನು ತೋರಿಸುತ್ತವೆ. ಒಂದು ಸರ್ಕಾರವು ಸಾಮಾನ್ಯ ಜನರ ಹಿತಕ್ಕಾಗಿ ಕೆಲಸ ಮಾಡಿದಾಗ ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಶ್ರಮಿಸಿದಾಗ, ಒಳ್ಳೆಯ ಫಲಿತಾಂಶಗಳು ಸಿಗುತ್ತವೆ ಎಂಬುದಕ್ಕೆ ಈ ಬದಲಾವಣೆಯೇ ಸಾಕ್ಷಿ. ಇದೇ ಆಲೋಚನೆಯ ಫಲವಾಗಿ ಇಂದು 'ನವ ಭಾರತ'ವು ನ್ಯಾಯದ ಒಂದು ಹೊಸ ಯುಗವನ್ನು ಕಾಣುತ್ತಿದೆ. ಜನರು ಈಗ 'ಶಿಕ್ಷೆಯಲ್ಲ, ನ್ಯಾಯವೇ ಮುಖ್ಯ' ಎಂದು ಮತ್ತು ಈ ನವ ಭಾರತದ ಹೊಸ ಕಾನೂನುಗಳು ತಮಗೆ ನ್ಯಾಯ ಕೊಡಿಸಲೆಂದೇ ಇವೆ ಎಂದು ನಂಬುತ್ತಿದ್ದಾರೆ. ಸ್ವತಂತ್ರ ಭಾರತದ ಈ ಮೂರು ಐತಿಹಾಸಿಕ ಕಾನೂನುಗಳು ನ್ಯಾಯದ ಸ್ವರೂಪವನ್ನೇ ಬದಲಾಯಿಸಿದ್ದು, 'ನಾಗರಿಕ ಮೊದಲು, ನ್ಯಾಯ ಮೊದಲು' ಎಂಬ ತತ್ವದ ಮೇಲೆ ನಿಂತಿವೆ. ಇವು ಪೂರ್ತಿಯಾಗಿ ಜನಸ್ನೇಹಿಯಾಗಿದ್ದು, ಸುಲಭವಾಗಿ ಸಿಗುವಂತಹ ಮತ್ತು ಭಾರತೀಯ ಮೌಲ್ಯಗಳನ್ನು ಒಳಗೊಂಡಿರುವ ಕಾನೂನುಗಳಾಗಿವೆ.

ಭಾರತೀಯತೆಯ ಭಾವನೆ ಹೊಂದಿರುವ ಈ ಮೂರು ಹೊಸ ಕಾನೂನುಗಳು, ಡಿಜಿಟಲ್ ವ್ಯವಸ್ಥೆಯ ಮೂಲಕ ಸಕಾಲದಲ್ಲಿ ನ್ಯಾಯ ಒದಗಿಸುವ ಸಂಕೇತಗಳಾಗಿವೆ. ಕಳೆದ ಎರಡು ವರ್ಷಗಳ ಸಾಧನೆಗಳನ್ನು ನೋಡಿದರೆ, ಭಾರತೀಯ ನ್ಯಾಯ ಸಂಹಿತೆಯ ಅಡಿಯಲ್ಲಿ 63 ಲಕ್ಷಕ್ಕೂ ಹೆಚ್ಚು ಎಫ್ ಐ ಆರ್ ಗಳು ದಾಖಲಾಗಿವೆ; ಇವುಗಳಲ್ಲಿ ಸುಮಾರು 52 ಲಕ್ಷ ಪ್ರಕರಣಗಳಲ್ಲಿ ದೋಷಾರೋಪಣೆ ಪಟ್ಟಿ ಅಥವಾ ಅಂತಿಮ ವರದಿಗಳನ್ನು ಸಲ್ಲಿಸಲಾಗಿದೆ. ಅಷ್ಟೇ ಅಲ್ಲ, ಹಳೆಯ ಕಾನೂನಿನಲ್ಲಿದ್ದಾಗ 60 ದಿನಗಳ ಒಳಗೆ ದೋಷಾರೋಪಣೆ ಪಟ್ಟಿ ಸಲ್ಲಿಸುವ ಪ್ರಮಾಣ ಶೇಕಡಾ 50 ರಷ್ಟಿತ್ತು, ಆದರೆ ಹೊಸ ಕಾನೂನುಗಳು ಬಂದ ಮೇಲೆ ಕಳೆದ ಎರಡು ವರ್ಷಗಳಲ್ಲಿ ಇದು ಶೇಕಡಾ 61 ಕ್ಕೂ ಹೆಚ್ಚಾಗಿದೆ. ಹಾಗೆಯೇ, 90 ದಿನಗಳ ಒಳಗೆ ದೋಷಾರೋಪಣೆ ಪಟ್ಟಿ ಸಲ್ಲಿಸಬೇಕಾದ ಪ್ರಕರಣಗಳಲ್ಲಿ, ಕೆಲಸ ಮುಗಿಸುವ ಪ್ರಮಾಣವು ಹಳೆಯ ಕಾನೂನಿನಲ್ಲಿದ್ದ ಶೇಕಡಾ 39 ರಿಂದ ಈಗ ಶೇಕಡಾ 51 ಕ್ಕಿಂತ ಹೆಚ್ಚಾಗಿದೆ. ಈ ಎರಡು ವರ್ಷಗಳಲ್ಲಿ 'ಶೂನ್ಯ ಎಫ್ ಐ ಆರ್ ಗಳ' ಸಂಖ್ಯೆಯೂ ಸುಮಾರು 60,000 ಕ್ಕೆ ತಲುಪಿದೆ. ಈ ಕಾನೂನು ಬದಲಾವಣೆಗಳ ಪ್ರಭಾವವು ಲೈಂಗಿಕ ಅಪರಾಧಗಳಂತಹ ಸೂಕ್ಷ್ಮ ವಿಷಯಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ; ಇಂತಹ ಪ್ರಕರಣಗಳಲ್ಲಿ ಎರಡು ತಿಂಗಳೊಳಗೆ ದೋಷಾರೋಪಣೆ ಪಟ್ಟಿ ಸಲ್ಲಿಸುವ ಪ್ರಮಾಣವು 2018 ರಲ್ಲಿ (ಹಳೆಯ ಕಾನೂನಿನಲ್ಲಿ) ಶೇಕಡಾ 44 ರಷ್ಟಿತ್ತು, ಅದು ಇಂದು ಶೇಕಡಾ 71 ಕ್ಕೆ ಏರಿದೆ. ವಿಧಿವಿಜ್ಞಾನ (ಫೋರೆನ್ಸಿಕ್) ಸೌಲಭ್ಯಗಳು ಕೂಡ ವೇಗವಾಗಿ ಬೆಳೆದಿವೆ.




**ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023, ಭಾರತೀಯ ನ್ಯಾಯ ಸಂಹಿತೆ, 2023, ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ, 2023 ನಮ್ಮ ಇತಿಹಾಸದ ಒಂದು ಪ್ರಮುಖ ಘಟ್ಟವಾಗಿವೆ. ಇವು ವಸಾಹತುಶಾಹಿ ಕಾಲದ ಕಾನೂನುಗಳನ್ನು ಕೊನೆಗಾಣಿಸಿ, ಸಾರ್ವಜನಿಕ ಸೇವೆ ಮತ್ತು ಜನರ ಕಲ್ಯಾಣಕ್ಕಾಗಿಯೇ ಇರುವ ಹೊಸ ಕಾನೂನುಗಳ ಯುಗವನ್ನು ಆರಂಭಿಸಿವೆ. ಇದು ಸುಧಾರಣೆಯ ಕಡೆಗಿನ ಭಾರತದ ಬದ್ಧತೆಗೆ ಒಂದು ಸಾಕ್ಷಿಯಾಗಿದೆ.**

*ನರೇಂದ್ರ ಮೋದಿ, ಪ್ರಧಾನಮಂತ್ರಿ*

## ಸಕಾಲದಲ್ಲಿ ನ್ಯಾಯ: ಮುಖ್ಯ ಮಾನದಂಡ

ನ್ಯಾಯದ ಮುಖ್ಯ ಮಾನದಂಡವೆಂದರೆ ಅದನ್ನು ಸರಿಯಾದ ಸಮಯಕ್ಕೆ ಒದಗಿಸುವುದು. "ವಿಳಂಬವಾದ ನ್ಯಾಯವು ನ್ಯಾಯ



ನಿರಾಕರಿಸಿದಂತೆ" ಎಂಬ ಮಾತಿದೆ. ಆದ್ದರಿಂದ, ಭಾರತೀಯ ನ್ಯಾಯ ಸಂಹಿತೆ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಮೂಲಕ ತ್ವರಿತ ನ್ಯಾಯವನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡಲಾಗಿದೆ. ದೋಷಾರೋಪಣೆ ಪಟ್ಟಿಗಳನ್ನು ತಕ್ಷಣವೇ ದಾಖಲಿಸಲು ಮತ್ತು ತೀರ್ಪುಗಳನ್ನು ಶೀಘ್ರವಾಗಿ ನೀಡಲು ಆದ್ಯತೆ ನೀಡಲಾಗಿದೆ. ಪ್ರಕರಣದ ಪ್ರತಿಯೊಂದು ಹಂತವನ್ನು ಪೂರ್ಣಗೊಳಿಸಲು ಸಮಯದ ಚೌಕಟ್ಟುಗಳನ್ನು ನಿಗದಿಪಡಿಸಲಾಗಿದೆ, ಇದು ಭಾರತೀಯ ನ್ಯಾಯ ಸಂಹಿತೆಯ ಮೂಲ ತತ್ವವಾದ: ನಾಗರಿಕನೇ ಮೊದಲು ಎಂಬುದನ್ನು ಪ್ರತಿಬಿಂಬಿಸುತ್ತದೆ. "ಶೂನ್ಯ ಎಫ್ ಐ ಆರ್" ಪರಿಕಲ್ಪನೆಗೆ ಬಲವಾದ ಕಾನೂನು ಬೆಂಬಲವನ್ನು ನೀಡಲಾಗಿದೆ. ಈ ಹೊಸ ಕಾನೂನಿನ ಮತ್ತೊಂದು ಮಾನವೀಯ ಅಂಶವೆಂದರೆ, ಅಪರಾಧ ಸಾಬೀತಾಗದ ವ್ಯಕ್ತಿಗಳನ್ನು ದೀರ್ಘಕಾಲದವರೆಗೆ ಜೈಲಿನಲ್ಲಿ ಇಡಲು ಸಾಧ್ಯವಿಲ್ಲ. ಮೂರು ವರ್ಷಗಳಿಗಿಂತ ಕಡಿಮೆ ಜೈಲು ಶಿಕ್ಷೆ ವಿಧಿಸಬಹುದಾದ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಬಂಧನಕ್ಕೆ ಈಗ ಹಿರಿಯ ಅಧಿಕಾರಿಯ ಅನುಮೋದನೆ ಅಗತ್ಯವಿದೆ. ಸಣ್ಣಪುಟ್ಟ ಅಪರಾಧಗಳಿಗಾಗಿ ಕಡ್ಡಾಯ ಜಾಮೀನಿನ ನಿಬಂಧನೆಗಳನ್ನು ಪರಿಚಯಿಸಲಾಗಿದೆ. ಸಣ್ಣ ಅಪರಾಧಗಳಿಗಾಗಿ ಸಮುದಾಯ ಸೇವೆಯ ಆಯ್ಕೆಯನ್ನು ಸಹ ಸೇರಿಸಲಾಗಿದೆ, ಇದು ಆರೋಪಿಗೆ ಸಮಾಜದ ಹಿತದೃಷ್ಟಿಯಿಂದ ಸಕಾರಾತ್ಮಕವಾಗಿ ಮುನ್ನಡೆಯಲು ಹೊಸ ಅವಕಾಶವನ್ನು ನೀಡುತ್ತದೆ. ಕಾನೂನು ಸಂಹಿತೆಯು ಮೊದಲ ಬಾರಿಗೆ ಅಪರಾಧ ಮಾಡಿದವರ ಕಡೆಗೆ ಸೂಕ್ಷ್ಮತೆಯನ್ನು ಪ್ರದರ್ಶಿಸುತ್ತದೆ. ಭಾರತೀಯ ನ್ಯಾಯ ಸಂಹಿತೆ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಎರಡೂ ಪ್ರತಿಯೊಬ್ಬ ಸಂತ್ರಸ್ತರ ಕಡೆಗೆ ಸೂಕ್ಷ್ಮತೆಯಿಂದ ಕೂಡಿದ್ದು, ಕಾನೂನು ಅವರ ಪರವಾಗಿ ದೃಢವಾಗಿ ನಿಲ್ಲುವುದನ್ನು ಖಾತ್ರಿಪಡಿಸುತ್ತದೆ. ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸುವುದರಿಂದ ಹಿಡಿದು ತೀರ್ಪು ಪ್ರಕಟಿಸುವವರೆಗೆ ಪ್ರತಿಯೊಂದು ಹಂತಕ್ಕೂ ಸಮಯದ ಮಿತಿಗಳನ್ನು ನಿಗದಿಪಡಿಸಲಾಗಿದೆ. ಈ ಕಾನೂನು ಜಾರಿಗೆ ಬಂದ ನಂತರ, ಹಳೆಯ ಕಾನೂನು ಚೌಕಟ್ಟಿನಡಿಯಲ್ಲಿ ಈ ಹಿಂದೆ ಜೈಲಿನಲ್ಲಿದ್ದ ಸಾವಿರಾರು ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ. ಇದು ನಾಗರಿಕರನ್ನು ಸಬಲೀಕರಣಗೊಳಿಸಲು ಮತ್ತು ಅವರ ಹಕ್ಕುಗಳನ್ನು ಎತ್ತಿಹಿಡಿಯಲು ಹೊಸ ವ್ಯವಸ್ಥೆ ಮತ್ತು ಹೊಸ ಕಾನೂನಿನ ಅಪಾರ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ.

## ಪ್ರಜಾಪ್ರಭುತ್ವದ ನಿಜವಾದ ಉತ್ಸಾಹವನ್ನು ಮರುಸ್ಥಾಪಿಸುವುದು

'ವಿಕಸಿತ ಭಾರತ'ದ ಸಂಕಲ್ಪದತ್ತ ಮುನ್ನಡೆಯುತ್ತಿರುವ ರಾಷ್ಟ್ರಕ್ಕೆ ಈ ಕಾನೂನುಗಳ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂದರೂ, ಬ್ರಿಟಿಷರ ಕಾಲದಲ್ಲಿ ಜಾರಿಗೆ ತರಲಾದ ಕಾನೂನುಗಳು ಜಾರಿಯಲ್ಲಿದ್ದವು. ಆದರೆ ಆ ಕಾನೂನುಗಳು ಮೂಲತಃ ಭಾರತೀಯರನ್ನು ಹತ್ತಿಕ್ಕಲು ಮತ್ತು ಶೋಷಿಸಲು ಬ್ರಿಟಿಷರು ಬಳಸುತ್ತಿದ್ದ ಆಯುಧಗಳಾಗಿದ್ದವು. ಇವು ಬ್ರಿಟಿಷರ ದಬ್ಬಾಳಿಕೆ ಮತ್ತು ಶೋಷಣೆಯ ಸಾಧನಗಳಾಗಿ ಕಾರ್ಯನಿರ್ವಹಿಸಿದ್ದವು. ಬ್ರಿಟಿಷ್ ಅಧಿಕಾರಿಗಳು ಭಾರತದ ಮೇಲಿನ ತಮ್ಮ ಹಿಡಿತವನ್ನು ಉಳಿಸಿಕೊಳ್ಳಲು ಯಾವುದೇ ಮಟ್ಟಕ್ಕಾದರೂ ಹೋಗಲು ಸಿದ್ಧರಾಗಿದ್ದ ಸಮಯದಲ್ಲಿ ಈ ಕಾನೂನುಗಳನ್ನು ರೂಪಿಸಲಾಗಿತ್ತು, ವಿಶೇಷವಾಗಿ 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ, ಇದು ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯವನ್ನು ಅಲ್ಲಾಡಿಸಿತು ಮತ್ತು ದೇಶದ ಪ್ರತಿಯೊಂದು ಮೂಲೆಯಲ್ಲೂ ಸವಾಲುಗಳನ್ನು ಒಡ್ಡಿತು.

# ನ್ಯಾಯದ ಲಭ್ಯತೆಯಲ್ಲಿ ಒಂದು ಹೊಸ ಯುಗ




*19ನೇ ಶತಮಾನದಲ್ಲಿ ಜಾರಿಗೆ ತಂದಿದ್ದ ಬ್ರಿಟಿಷರ ಕಾಲದ ಕಾನೂನುಗಳಿಂದ ನಾವೀಗ ಮುಕ್ತರಾಗಿದ್ದೇವೆ. 21ನೇ ಶತಮಾನದ ಅತ್ಯಂತ ಮಹತ್ವದ ಸುಧಾರಣೆಯ ನಂತರ, ಭಾರತವು ಈಗ ತನ್ನದೇ ಆದ ಕಾನೂನುಗಳನ್ನು ಹೊಂದಿದೆ—ಇವು ನ್ಯಾಯ, ಸಮಾನತೆ ಮತ್ತು ನಿಷ್ಪಕ್ಷಪಾತದ ಮೂಲ ತತ್ವಗಳಲ್ಲಿ ಬೇರೂರಿವೆ. ನಿಜವಾದ ಅರ್ಥದಲ್ಲಿ, ಇದು ನವ ಭಾರತದ ಚೇತನವನ್ನು ಬಿಂಬಿಸುತ್ತದೆ ಮತ್ತು ಸಂವಿಧಾನದ ಆಶಯಗಳನ್ನು ಪ್ರತಿಫಲಿಸುತ್ತದೆ.*

## ಧ್ಯೇಯೋದ್ದೇಶ: ಕೇವಲ ಶಿಕ್ಷೆಯಲ್ಲ, ನ್ಯಾಯ ಒದಗಿಸುವುದು

- 150 ವರ್ಷಗಳಷ್ಟು ಹಳೆಯದಾದ ಬ್ರಿಟಿಷರ ಕಾಲದ ಕಾನೂನುಗಳಿಂದ ಮುಕ್ತಿ.
- ಈ ಕಾನೂನುಗಳು ಸಂಪೂರ್ಣವಾಗಿ ಜಾರಿಗೆ ಬಂದ ನಂತರ, ಆರಂಭಿಕ ಎಫ್ ಐ ಆರ್ ಹಂತದಿಂದ ಹಿಡಿದು ಸುಪ್ರೀಂ ಕೋರ್ಟ್‌ವರೆಗಿನ ನ್ಯಾಯದಾನ ಪ್ರಕ್ರಿಯೆಯು ಸರಿಸುಮಾರು ಮೂರು ವರ್ಷಗಳಲ್ಲೇ ಪೂರ್ಣಗೊಳ್ಳಲಿದೆ.
- ಈ ಹೊಸ ಕಾನೂನುಗಳು ತನಿಖೆಯನ್ನು ಪೂರ್ಣಗೊಳಿಸಲು, ದೋಷಾರೋಪಣೆ ಪಟ್ಟಿ ಸಲ್ಲಿಸಲು, ಆರೋಪ ಹೊರಿಸಲು ಮತ್ತು ತೀರ್ಪುಗಳನ್ನು ನೀಡಲು ನಿರ್ದಿಷ್ಟ ಸಮಯದ ಚೌಕಟ್ಟನ್ನು ಕಡ್ಡಾಯಗೊಳಿಸಿವೆ.
- ಏಳು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಜೈಲು ಶಿಕ್ಷೆ ವಿಧಿಸಬಹುದಾದ ಎಲ್ಲಾ ಅಪರಾಧಗಳಿಗೆ ವಿಧಿವಿಜ್ಞಾನ ತನಿಖೆಯನ್ನು ಕಡ್ಡಾಯಗೊಳಿಸಲಾಗಿದೆ.

**ಭಯೋತ್ಪಾದನೆ ಮತ್ತು ಸಂಘಟಿತ ಅಪರಾಧಗಳ ವಿರುದ್ಧ ಕಠಿಣ ನಿಲುವು**

'ಭಾರತೀಯ ನ್ಯಾಯ ಸಂಹಿತೆ, 2023' ಸಂಘಟಿತ ಅಪರಾಧಗಳು ಮತ್ತು ಭಯೋತ್ಪಾದನೆಯನ್ನು ಹತ್ತಿಕ್ಕಲು ಕಟ್ಟುನಿಟ್ಟಾದ ನಿಬಂಧನೆಗಳನ್ನು ಪರಿಚಯಿಸಿದೆ.



ಇದಕ್ಕೆ ಪ್ರತಿಕ್ರಿಯೆಯಾಗಿ, ಬ್ರಿಟಿಷರು 1860 ರಲ್ಲಿ ಐಪಿಸಿ ಮತ್ತು ಕೆಲವು ವರ್ಷಗಳ ನಂತರ ಸಿ ಆರ್ ಪಿ ಸಿ ಯನ್ನು ಜಾರಿಗೆ ತಂದರು. ಈ ಕಾನೂನುಗಳನ್ನು ನಾಗರಿಕರ ಕಲ್ಯಾಣಕ್ಕಾಗಿ ರೂಪಿಸಿರಲಿಲ್ಲ, ಬದಲಿಗೆ ಬ್ರಿಟಿಷ್ ಆಡಳಿತವನ್ನು ರಕ್ಷಿಸಲು ರೂಪಿಸಲಾಗಿತ್ತು. ಅವರ ಈ ಮನಸ್ಥಿತಿಯು ಕಾನೂನಿನ ರಚನೆಯಲ್ಲೇ ಸ್ಪಷ್ಟವಾಗಿ ಗೋಚರಿಸುತ್ತಿತ್ತು: ಕೊಲೆ ಅಥವಾ ಮಹಿಳೆಯರ ಮೇಲಿನ ದೌರ್ಜನ್ಯಗಳಂತಹ ಘೋರ ಅಪರಾಧಗಳಿಗಿಂತ, ಬ್ರಿಟಿಷ್ ಸರ್ಕಾರದ ಖಜಾನೆಯನ್ನು ಲೂಟಿ ಮಾಡುವುದು, ರೈಲು ಹಳಿಗಳನ್ನು ಧ್ವಂಸಗೊಳಿಸುವುದು ಅಥವಾ ಬ್ರಿಟಿಷ್ ರಾಜಪ್ರಭುತ್ವವನ್ನು ಅವಮಾನಿಸುವಂತಹ ಅಪರಾಧಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.

ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ, ಭಾರತೀಯ ಕಾನೂನುಗಳು ಅದೇ ಹಳೆಯ ದಂಡ ಸಂಹಿತೆಯ ಸುತ್ತಲೇ ಸುತ್ತುತ್ತಿದ್ದುದು ಒಂದು ದುರದೃಷ್ಟಕರ ವಾಸ್ತವವಾಗಿತ್ತು. ಕಾಲಕಾಲಕ್ಕೆ ತಿದ್ದುಪಡಿಗಳನ್ನು ತರಲಾಗಿದ್ದರೂ, ಕಾನೂನುಗಳ ಮೂಲ ಸ್ವರೂಪ ಮಾತ್ರ ಬದಲಾಗದೆ ಹಾಗೇ ಉಳಿದಿತ್ತು. ಬ್ರಿಟಿಷರ ಕಾಲದ ಈ ಕಾನೂನುಗಳ ಆತ್ಮ ಮತ್ತು ಉದ್ದೇಶವು ಬ್ರಿಟಿಷ್ ಆಡಳಿತವನ್ನು ಬಲಪಡಿಸುವುದು ಹಾಗೂ ನ್ಯಾಯ ಒದಗಿಸುವುದಕ್ಕಿಂತ ಹೆಚ್ಚಾಗಿ ಶಿಕ್ಷಿಸುವುದನ್ನೇ ತನ್ನ ಮುಖ್ಯ ಗುರಿಯಾಗಿಸಿಕೊಂಡಿದ್ದ ವಸಾಹತುಶಾಹಿ ವ್ಯವಸ್ಥೆಯನ್ನು ರಕ್ಷಿಸುವುದಾಗಿತ್ತು. ಈ ಹಿನ್ನೆಲೆಯಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕೆಂಪುಕೋಟೆಯ ಬುರುಜಿನಿಂದ 'ದಾಸ್ಯದ ಮನಸ್ಥಿತಿ'ಯಿಂದ ಮುಕ್ತರಾಗುವುದಾಗಿ ಪಣತೊಟ್ಟಾಗ, ದಂಡ ಸಂಹಿತೆಯ ಸಂಪೂರ್ಣ ಸುಧಾರಣೆಯು ಆ ನಿಟ್ಟಿನಲ್ಲಿ ಇಟ್ಟ ಅತ್ಯಂತ ನಿರ್ಣಾಯಕ ಹೆಜ್ಜೆಯಾಯಿತು. ದೇಶವು ವಸಾಹತುಶಾಹಿ ದಾಸ್ಯದ ಎಲ್ಲಾ ಕುರುಹುಗಳನ್ನು ತೊಡೆದುಹಾಕಲು ಮುಂದಾಗುತ್ತಿದ್ದಂತೆ—ಮತ್ತು 'ಅಮೃತ ಕಾಲ'ದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ತನ್ನ ಭವ್ಯ ಸಂಕಲ್ಪದೊಂದಿಗೆ—ಜುಲೈ 2024 ರಲ್ಲಿ 'ಭಾರತೀಯ ನ್ಯಾಯ ಸಂಹಿತೆ'ಯನ್ನು ಜಾರಿಗೆ ತರುವ ಮೂಲಕ ಒಂದು ದೂರಗಾಮಿ ಉಪಕ್ರಮವನ್ನು ಕೈಗೊಂಡಿತು. ಇಂಡಿಯನ್ ಪೀನಲ್ ಕೋಡ್ (1860), ಕ್ರಿಮಿನಲ್ ಪ್ರೊಸೀಜರ್ ಕೋಡ್ (1898), ಮತ್ತು ಇಂಡಿಯನ್ ಎವಿಡೆನ್ಸ್ ಆಕ್ಟ್ (1872) ಇವುಗಳನ್ನು ಮೂಲತಃ ಬ್ರಿಟಿಷ್ ಪಾರ್ಲಿಮೆಂಟ್ ಅಂಗೀಕರಿಸಿತ್ತು. ಈಗ ಇಂಡಿಯನ್ ಪೀನಲ್ ಕೋಡ್ (1860) ಸ್ಥಾನಕ್ಕೆ 'ಭಾರತೀಯ ನ್ಯಾಯ ಸಂಹಿತೆ', ಕ್ರಿಮಿನಲ್ ಪ್ರೊಸೀಜರ್ ಕೋಡ್ (1898) ಸ್ಥಾನಕ್ಕೆ 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ', ಮತ್ತು ಇಂಡಿಯನ್ ಎವಿಡೆನ್ಸ್ ಆಕ್ಟ್ (1872) ಸ್ಥಾನಕ್ಕೆ 'ಭಾರತೀಯ ಸಾಕ್ಷ್ಯ ಅಧಿನಿಯಮ' ಬಂದಿವೆ. ಈ ಮೂರು ಹೊಸ ಕಾನೂನುಗಳು ಕೇವಲ ಶಿಕ್ಷೆ ನೀಡುವುದಕ್ಕಿಂತ ಹೆಚ್ಚಾಗಿ ನ್ಯಾಯ ಒದಗಿಸುವುದನ್ನೇ ಕೇಂದ್ರವಾಗಿಟ್ಟುಕೊಂಡಿರುವ ಅಪರಾಧ ನ್ಯಾಯ ವ್ಯವಸ್ಥೆಗೆ ಭದ್ರವಾದ ಅಡಿಪಾಯ ಹಾಕಿವೆ. ಈಗ, ಸರಳ, ಸುಲಭ, ಪಾರದರ್ಶಕ ಮತ್ತು ಜವಾಬ್ದಾರಿಯುತ ಪ್ರಕ್ರಿಯೆಗಳ ಮೂಲಕ 'ಸುಲಭ ನ್ಯಾಯದಾನ' ಪರಿಕಲ್ಪನೆಯು ಸಾಕಾರಗೊಂಡಿದೆ. ಈ ಮೂರು ಹೊಸ ಕಾನೂನುಗಳು ಭಾರತೀಯ ನ್ಯಾಯದ ನಿಜವಾದ ಉತ್ಸಾಹವನ್ನು ಒಳಗೊಂಡಿವೆ. ಸರಿಯಾದ ಅರ್ಥದಲ್ಲಿ ಹೇಳಬೇಕೆಂದರೆ, ಸ್ವಾತಂತ್ರ್ಯ ಬಂದ ದಶಕಗಳ ನಂತರ, ಈ ಮೂರು ಕ್ರಿಮಿನಲ್ ಕಾನೂನುಗಳು ಮೊದಲ ಬಾರಿಗೆ ನ್ಯಾಯಾಂಗ ವ್ಯವಸ್ಥೆಗೆ ಮಾನವೀಯ ಮುಖವನ್ನು ನೀಡಿವೆ. ಈ ಕಾನೂನು ಸಂಹಿತೆಯು "ಜನರಿಗಾಗಿ, ಜನರಿಂದ, ಜನರಿಗೋಸ್ಕರ" ಎಂಬ ನೈಜ ಪ್ರಜಾಪ್ರಭುತ್ವದ ತತ್ವವನ್ನು ಮತ್ತಷ್ಟು ಬಲಪಡಿಸುತ್ತದೆ.



ಕರ್ತವ್ಯ ಪಥದಲ್ಲಿ ಸ್ತಬ್ಧಚಿತ್ರ... ಶಿಕ್ಷೆಯಿಂದ ನ್ಯಾಯದ ಕಡೆಗೆ

**ನಮ್ಮ ಅಪರಾಧ ನ್ಯಾಯ ವ್ಯವಸ್ಥೆಯನ್ನು ನಿಯಂತ್ರಿಸುವ ಈ ಮೂರು ಹೊಸ ಕಾನೂನುಗಳು 21ನೇ ಶತಮಾನದ ಅತ್ಯಂತ ಮಹತ್ವದ ಸುಧಾರಣೆಯನ್ನು ಪ್ರತಿನಿಧಿಸುತ್ತವೆ. 'ನಾಗರಿಕ ಮೊದಲು', 'ಗೌರವ ಮೊದಲು' ಮತ್ತು 'ನ್ಯಾಯ ಮೊದಲು' ಎಂಬ ಮಾರ್ಗದರ್ಶಿ ತತ್ವಗಳು ಈ ಹೊಸ ಕ್ರಿಮಿನಲ್ ಕಾನೂನುಗಳ ಅಡಿಪಾಯವಾಗಿವೆ. ಇಂದು, ನಮ್ಮ ಪೊಲೀಸ್ ಪಡೆ ಲಾಠಿಯ ಬದಲಾಗಿ ಡೇಟಾ ಮೇಲೆ ಮತ್ತು 'ಥರ್ಡ್-ಡಿಗ್ರಿ' ವಿಚಾರಣಾ ವಿಧಾನಗಳ ಬದಲಿಗೆ ವೈಜ್ಞಾನಿಕ ಪುರಾವೆಗಳ ಮೇಲೆ ಅವಲಂಬಿತವಾಗಿದೆ.**

*ಅಮಿತ್ ಶಾ, ಕೇಂದ್ರ ಗೃಹ ಮತ್ತು ಸಹಕಾರ ಸಚಿವರು*

ಸ್ವತಂತ್ರ ಭಾರತದ ನ್ಯಾಯ ಸಂಹಿತೆಯು ಸಮಾನತೆ, ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯದ ಆದರ್ಶಗಳೊಂದಿಗೆ ಹೆಣೆಯಲ್ಪಟ್ಟಿದೆ. ಕಾನೂನಿನ ಕಣ್ಣಿನಲ್ಲಿ ಎಲ್ಲರೂ ಸಮಾನರು ಎಂದು ಅನೇಕ ಬಾರಿ ಹೇಳಲಾಗುತ್ತದೆ, ಆದರೆ ವಾಸ್ತವವು ಸಾಕಷ್ಟು ಭಿನ್ನವಾಗಿತ್ತು; ಬಡವರು ಮತ್ತು ದುರ್ಬಲರು ಕಾನೂನಿಗೆ ಹೆದರುತ್ತಿದ್ದರು ಹಾಗೂ ನ್ಯಾಯಾಲಯಗಳು ಅಥವಾ ಪೊಲೀಸ್ ಠಾಣೆಗಳಿಗೆ ಕಾಲಿಡಲು ಹಿಂಜರಿಯುತ್ತಿದ್ದರು. ಆದರೆ ಈಗ, 'ಭಾರತೀಯ ನ್ಯಾಯ ಸಂಹಿತೆ'ಯು ಈ ಸಾಮಾಜಿಕ ಮನಸ್ಥಿತಿಯನ್ನು ಬದಲಾಯಿಸುತ್ತಿದೆ. ದೇಶದ ಕಾನೂನುಗಳು ತಮಗೆ ಸಮಾನತೆಯನ್ನು ಖಾತರಿಪಡಿಸುತ್ತವೆ ಎಂಬ ನಂಬಿಕೆ ಸಾರ್ವಜನಿಕರಲ್ಲಿ ಮೂಡಲಾರಂಭಿಸಿದೆ. ಇದು ಸಂವಿಧಾನವು ಭರವಸೆ ನೀಡಿದ ನಿಜವಾದ ಸಾಮಾಜಿಕ ನ್ಯಾಯವಾಗಿದೆ.

## ಜನರಲ್ಲಿ ಬಲವರ್ಧನೆಗೊಂಡ ಸುರಕ್ಷತೆಯ ಭಾವನೆ

ಯಾವುದೇ ರಾಷ್ಟ್ರದ ನಿಜವಾದ ಶಕ್ತಿ ಇರುವುದು ಅಲ್ಲಿನ ಜನರಲ್ಲಿ, ಮತ್ತು ಜನರು ತಮ್ಮ ಶಕ್ತಿಯನ್ನು ದೇಶದ ಕಾನೂನುಗಳಿಂದ ಪಡೆದುಕೊಳ್ಳುತ್ತಾರೆ. ಅದಕ್ಕಾಗಿಯೇ ನಾಗರಿಕರು ತಾವು ಕಾನೂನನ್ನು ಪಾಲಿಸುವುದಾಗಿ ಹೆಮ್ಮೆಯಿಂದ ಘೋಷಿಸುತ್ತಾರೆ. ಕಾನೂನಿನೆಡೆಗಿನ ನಾಗರಿಕರ ಈ ನಿಷ್ಠೆಯೇ ರಾಷ್ಟ್ರದ ಅತ್ಯಂತ ದೊಡ್ಡ ಆಸ್ತಿಯಾಗಿದೆ. ನಿಯಮಗಳು ಮತ್ತು ಕಾನೂನುಗಳು ಪ್ರಸ್ತುತ ಕಾಲಕ್ಕೆ ತಕ್ಕಂತೆ ಇದ್ದಾಗ ಮಾತ್ರ ಪರಿಣಾಮಕಾರಿಯಾಗಿರುತ್ತವೆ. ಇಂದು ಜಗತ್ತು ಅತ್ಯಂತ ವೇಗವಾಗಿ ಬದಲಾಗುತ್ತಿದೆ; ಅಪರಾಧದ ಸ್ವರೂಪ ಮತ್ತು ಅಪರಾಧಿಗಳು ಬಳಸುವ ಹೊಸ ವಿಧಾನಗಳು ವಿಕಸನಗೊಂಡಿವೆ. ಇಂತಹ ಸನ್ನಿವೇಶದಲ್ಲಿ, 19ನೇ ಶತಮಾನದ ವ್ಯವಸ್ಥೆಗಳು ಪ್ರಾಯೋಗಿಕವಾಗಿರಲಿಲ್ಲ. ಪರಿಣಾಮವಾಗಿ, ಈ ಕಾನೂನುಗಳನ್ನು ಆಧುನೀಕರಿಸಲಾಗಿದೆ ಮತ್ತು ಅವುಗಳಿಗೆ ನಿಜವಾದ ಭಾರತೀಯ ಸ್ವರೂಪವನ್ನು ನೀಡಲಾಗಿದೆ.

# ಡಿಜಿಟಲ್ ಪ್ರಕ್ರಿಯೆಗಳ ಮೂಲಕ ಸಕಾಲಿಕ

## ಹೊಸ ಕಾನೂನುಗಳ 2 ವರ್ಷಗಳು: ಸಾಧನೆಗಳು

**ಕಾಲಮಿತಿಯ ಪ್ರಕ್ರಿಯೆ + ತಂತ್ರಜ್ಞಾನ = ವಿಶ್ವಾಸ**

60 ದಿನಗಳೊಳಗಾಗಿ ಚಾರ್ಜ್ ಶೀಟ್/ ಅಂತಿಮ ವರದಿ ಸಲ್ಲಿಕೆಯ ಅನುಸರಣೆ ಪ್ರಮಾಣ

50.92% 2024

61.11% 2026

39.56% 2024

51.28% 2026

90 ದಿನಗಳೊಳಗಾಗಿ ಚಾರ್ಜ್ ಶೀಟ್/ ಅಂತಿಮ ವರದಿ ಸಲ್ಲಿಕೆಯ ಅನುಸರಣೆ ಪ್ರಮಾಣ




ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ದಾಖಲಾದ ಒಟ್ಟು ಎಫ್ ಐ ಆರ್ ಗಳು

**63.08** ಲಕ್ಷ



ದಾಖಲಾದ ಒಟ್ಟು ಚಾರ್ಜ್ ಶೀಟ್/ ಅಂತಿಮ ವರದಿಗಳು

**51.95** ಲಕ್ಷ

ಇ-ಎವಿಡೆನ್ಸ್ ಮೂಲಕ ಸೃಜಿಸಲಾದ ಒಟ್ಟು ಸಾಕ್ಷ್ಯಗಳ ಐಡಿಗಳು

**35.06** ಲಕ್ಷ

ದಾಖಲಾದ ಒಟ್ಟು ಶೂನ್ಯ ಎಫ್ ಐ ಆರ್ ಗಳು

**59,572**





ಡಿಜಿಟಲ್ ಪುರಾವೆಗಳನ್ನು ಈಗ ಸಾಕ್ಷ್ಯವೆಂದು ಗುರುತಿಸಲಾಗಿದೆ. ತನಿಖೆಯ ಸಮಯದಲ್ಲಿ ಸಾಕ್ಷ್ಯಗಳನ್ನು ತಿರುಚುವುದನ್ನು ತಡೆಯಲು ಇಡೀ ಪ್ರಕ್ರಿಯೆಯ ವೀಡಿಯೊಗ್ರಫಿಯನ್ನು ಕಡ್ಡಾಯಗೊಳಿಸಲಾಗಿದೆ. ನ್ಯಾಯಾಲಯಗಳು ಮತ್ತು ಪೊಲೀಸರು ಈಗ ನೇರವಾಗಿ ಫೋನ್ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಸಮನ್ಸ್ ಜಾರಿ ಮಾಡಬಹುದು. ಸಾಕ್ಷಿಗಳ ಹೇಳಿಕೆಗಳನ್ನು ಆಡಿಯೋ-ವಿಡಿಯೋ ರೆಕಾರ್ಡಿಂಗ್ ಮಾಡಲು ಅನುಮತಿ ನೀಡಲಾಗಿದೆ. ಡಿಜಿಟಲ್ ಪುರಾವೆಗಳು ನ್ಯಾಯಾಲಯದಲ್ಲಿ ಮಾನ್ಯತೆ ಪಡೆದಿದ್ದು, ನ್ಯಾಯದಾನಕ್ಕೆ ಭದ್ರವಾದ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತವೆ. ಇದು ಅಪರಾಧಿಗಳನ್ನು ಹಿಡಿಯುವಲ್ಲಿ ಉಂಟಾಗುತ್ತಿದ್ದ ಅನಗತ್ಯ ವಿಳಂಬವನ್ನು ನಿವಾರಿಸುತ್ತದೆ. ಈ ಬದಲಾವಣೆಗಳು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದಲೂ ಅತ್ಯಗತ್ಯವಾಗಿದ್ದವು. ಡಿಜಿಟಲ್ ಪುರಾವೆ ಮತ್ತು ತಂತ್ರಜ್ಞಾನದ ಮುನ್ನಡೆಯು ಭಯೋತ್ಪಾದನೆಯ ವಿರುದ್ಧದ ಹೋರಾಟಕ್ಕೆ ಹೆಚ್ಚಿನ ನೆರವು ನೀಡುತ್ತಿದೆ. ಹೊಸ ಕಾನೂನುಗಳ ಅಡಿಯಲ್ಲಿ, ಭಯೋತ್ಪಾದಕರು ಮತ್ತು ಭಯೋತ್ಪಾದಕ ಸಂಘಟನೆಗಳು ಇನ್ನು ಮುಂದೆ ಕಾನೂನಿನ ಸಂಕೀರ್ಣತೆಗಳನ್ನು ತಮಗೆ ಅನುಕೂಲಕರವಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲ.

ಈ ಕಾನೂನುಗಳು ಪ್ರತಿಯೊಂದು ಇಲಾಖೆಯ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಿವೆ ಮತ್ತು ದೇಶದ ಪ್ರಗತಿಯನ್ನು ವೇಗಗೊಳಿಸಿವೆ. ಕಾನೂನು ಅಡೆತಡೆಗಳ ನಿವಾರಣೆಯು ಭ್ರಷ್ಟಾಚಾರಕ್ಕೆ ಮುಕ್ತಿ ಹಾಡಿದ್ದು, ಹೂಡಿಕೆಯ ಮೇಲೂ ಸಕಾರಾತ್ಮಕ ಪರಿಣಾಮ ಬೀರಿದೆ. ಈ ಹಿಂದೆ,

ಲೈಂಗಿಕ ಅಪರಾಧ ಪ್ರಕರಣಗಳಲ್ಲಿ ಎರಡು ತಿಂಗಳೊಳಗೆ ಚಾರ್ಜ್ ಶೀಟ್ ಸಲ್ಲಿಸುವ ಅನುಸರಣೆ ಪ್ರಮಾಣ




## ವಿಧಿವಿಜ್ಞಾನ ಸಾಮರ್ಥ್ಯದ ವಿಸ್ತರಣೆ

**16**
ಎನ್ ಎಫ್ ಎಸ್ ಯು (ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ) ಪ್ರಸ್ತಾವಿತ/ಕಾರ್ಯನಿರತವಾಗಿವೆ

9 ಸ್ಥಾಪಿಸಲಾಗಿದೆ + 7 ಹೆಚ್ಚುವರಿಯಾಗಿ ಮಂಜೂರಾಗಿದೆ

**15**
ಸಿ ಎಫ್ ಎಸ್ ಎಲ್ (ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯ) ಪ್ರಸ್ತಾವಿತ/ ಕಾರ್ಯನಿರತವಾಗಿವೆ

7 ಸ್ಥಾಪಿಸಲಾಗಿದೆ + 8 ಹೆಚ್ಚುವರಿಯಾಗಿ ಮಂಜೂರಾಗಿದೆ

**7+**
ವರ್ಷ ಅವಧಿಯ ಶಿಕ್ಷೆ ಇರುವ ಅಪರಾಧಗಳ ತನಿಖೆಯ ಸಮಯದಲ್ಲಿ ಕಡ್ಡಾಯ ವಿಧಿವಿಜ್ಞಾನ ಪರೀಕ್ಷೆ ಮತ್ತು ತಜ್ಞರ ಪಾಲ್ಗೊಳ್ಳುವಿಕೆ ಅಗತ್ಯವಾಗಿದೆ.



ನ್ಯಾಯಾಲಯದ ವ್ಯಾಜ್ಯಗಳು ವರ್ಷಗಟ್ಟಲೆ ಎಳೆಯಬಹುದು ಎಂಬ ಭೀತಿಯಿಂದ ಹೂಡಿಕೆದಾರರು ಭಾರತದಲ್ಲಿ ಹೂಡಿಕೆ ಮಾಡಲು ಹಿಂಜರಿಯುತ್ತಿದ್ದರು; ಆ ಆತಂಕ ಈಗ ದೂರವಾಗಿದೆ. ಇದು ದೇಶದ ಆರ್ಥಿಕತೆಯನ್ನು ಬಲಪಡಿಸುತ್ತಿದೆ.

## ವ್ಯಾಪಕ ಸಮಾಲೋಚನೆಯಿಂದ ಮೂಡಿಬಂದ ಸ್ವತಂತ್ರ ಭಾರತದ ಸ್ವಂತ ನ್ಯಾಯ ಸಂಹಿತೆ

ಸಂವಿಧಾನದ ಆಶಯದಿಂದ ಪ್ರೇರಿತಗೊಂಡು ಮತ್ತು ಸಂವಿಧಾನದ 75ನೇ ವರ್ಷದ ಸಂದರ್ಭಕ್ಕೆ ಹೊಂದಿಕೆಯಾಗುವಂತೆ, ಜುಲೈ 1, 2024 ರಂದು 'ಭಾರತೀಯ ನ್ಯಾಯ ಸಂಹಿತೆ'ಯನ್ನು ಜಾರಿಗೆ ತಂದಿದ್ದು ಒಂದು ಮಹತ್ವದ ಮೈಲಿಗಲ್ಲಾಗಿದೆ. ಇದು ಸಂವಿಧಾನದಲ್ಲಿ ಅಡಕವಾಗಿರುವ ಆದರ್ಶಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಇಟ್ಟ ಒಂದು ದೃಢವಾದ ಹೆಜ್ಜೆಯಾಗಿದೆ. ದೇಶದ ಈ ಹೊಸ ನ್ಯಾಯ ಸಂಹಿತೆಯು ತನ್ನದೇ ಆದ ಸಮಗ್ರ ದಾಖಲೆಯಾಗಿರುವಂತೆಯೇ, ಇದನ್ನು ರೂಪಿಸುವ ಪ್ರಕ್ರಿಯೆಯೂ ಅಷ್ಟೇ ವ್ಯಾಪಕವಾಗಿತ್ತು. ಇದು ದೇಶದ ಪ್ರಖ್ಯಾತ ಸಂವಿಧಾನ ತಜ್ಞರು ಮತ್ತು ನ್ಯಾಯಶಾಸ್ತ್ರಜ್ಞರ ಸಮರ್ಪಿತ ಪ್ರಯತ್ನಗಳನ್ನು ಒಳಗೊಂಡಿದೆ.

ಈ ಕಾನೂನಿನಲ್ಲಿ ಭಾರತೀಯತೆಯ ಮನೋಭಾವವನ್ನು ತುಂಬಲು, ಕೇಂದ್ರ ಸರ್ಕಾರವು 2019 ರಿಂದಲೇ ವ್ಯಾಪಕವಾದ ಸಮಾಲೋಚನಾ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು, ಸುಪ್ರೀಂ ಕೋರ್ಟ್ ನ್ಯಾಯಾಧೀಶರು, ಕಾನೂನು ವಿಶ್ವವಿದ್ಯಾಲಯಗಳು, ಸಂಸತ್ ಸದಸ್ಯರು, ಮುಖ್ಯಮಂತ್ರಿಗಳು, ರಾಜ್ಯಪಾಲರು, ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿಕಾರಿಗಳು, ಕಾನೂನು ತಜ್ಞರು ಮತ್ತು ಸಾಮಾನ್ಯ ನಾಗರಿಕರು ಸೇರಿದಂತೆ ವ್ಯಾಪಕ ಶ್ರೇಣಿಯ ಪಾಲುದಾರರೊಂದಿಗೆ ಚರ್ಚೆಗಳನ್ನು ನಡೆಸಲಾಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ವೈಯಕ್ತಿಕವಾಗಿ ಪ್ರತಿಯೊಂದು ಸಾಲನ್ನೂ ಪರಿಶೀಲಿಸಿದರು—ಬೆಜ್‌ಬರುವಾ, ವಿಶ್ವನಾಥನ್, ಮಳಿಮಠ್‌ಮತ್ತುಮಾಧವಮೆನನ್‌ಸಮಿತಿಗಳಶಿಫಾರಸುಗಳನ್ನು, ಹಾಗೆಯೇ ಗೃಹ ವ್ಯವಹಾರಗಳ ಸಂಸದೀಯ ಸ್ಥಾಯೀ ಸಮಿತಿಯ 111ನೇ, 110ನೇ ಮತ್ತು 146ನೇ ವರದಿಗಳನ್ನು (2005, 2006 ಮತ್ತು 2011 ರ) ಹಾಗೂ ರಾಜ್ಯಪಾಲರು, ಮುಖ್ಯಮಂತ್ರಿಗಳು, ಶಾಸಕರು, ನ್ಯಾಯಾಧೀಶರು, ನ್ಯಾಯಾಂಗ ಮತ್ತು ಕಾನೂನು ವಿಶ್ವವಿದ್ಯಾಲಯಗಳ ಸಲಹೆಗಳನ್ನು ಪರಿಗಣನೆಗೆ ತೆಗೆದುಕೊಂಡು ಈ ಕಾನೂನಿನ ಚೌಕಟ್ಟನ್ನು ನಿರ್ಮಿಸಲಾಯಿತು. ಸಂಸತ್ತಿನಲ್ಲಿ ಇದು ಅಂಗೀಕಾರಗೊಂಡು ಮತ್ತು ರಾಷ್ಟ್ರಪತಿಗಳ ಒಪ್ಪಿಗೆ

> **ಹೊಸ ಅಪರಾಧ ಕಾನೂನುಗಳಲ್ಲಿ ಮೊದಲ ಬಾರಿಗೆ ಭಯೋತ್ಪಾದನೆ, ಸಂಘಟಿತ ಅಪರಾಧ ಮತ್ತು ಗುಂಪು ಹಲ್ಲೆಯನ್ನು ವ್ಯಾಖ್ಯಾನಿಸಲಾಗಿದೆ. ಹೆಚ್ಚುವರಿಯಾಗಿ, ಪೊಲೀಸ್, ನ್ಯಾಯಾಂಗ ಮತ್ತು ಪ್ರಾಸಿಕ್ಯೂಷನ್ ಗೆ ಸಮಯದ ಮಿತಿಗಳನ್ನು ನಿಗದಿಪಡಿಸಲಾಗಿದೆ - ಈ ನಿಟ್ಟಿನಲ್ಲಿ ಇದು ಮೊದಲನೆಯದಾಗಿದೆ. ಪೊಲೀಸ್, ಜೈಲುಗಳು, ನ್ಯಾಯಾಂಗ, ಪ್ರಾಸಿಕ್ಯೂಷನ್ ಮತ್ತು ವಿಧಿವಿಜ್ಞಾನ - ಈ ಐದು ಸ್ತಂಭಗಳನ್ನು ಡಿಜಿಟಲ್ ರೂಪದಲ್ಲಿ ಪರಸ್ಪರ ಸಂಪರ್ಕ ಕಲ್ಪಿಸಲಾಗಿದೆ.**
>
> *ಅಮಿತ್ ಶಾ, ಕೇಂದ್ರ ಗೃಹ ಮತ್ತು ಸಹಕಾರ ಸಚಿವರು*



# ಕಾನೂನುಗಳ ಪರಿಷ್ಕರಣೆ: ಹೊಸ ಕಾನೂನುಗಳಲ್ಲಿ ಕೆಲವು ಸೆಕ್ಷನ್ ಗಳ ಕಡಿತ, ಇನ್ನು ಕೆಲವಕ್ಕೆ ತಿದ್ದುಪಡಿ

*ಹೊಸ ಅಪರಾಧ ನ್ಯಾಯ ಸುಧಾರಣಾ ಕಾನೂನುಗಳಲ್ಲಿ ಆದ್ಯತೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮಹತ್ವದ ಬದಲಾವಣೆಗಳನ್ನು ಮಾಡಿದೆ. ಇದು ಅತ್ಯಗತ್ಯವಾಗಿತ್ತು ಏಕೆಂದರೆ ಇಡೀ ವ್ಯವಸ್ಥೆಯು ಮೂಲತಃ ಬ್ರಿಟಿಷ್ ಪಾರ್ಲಿಮೆಂಟ್ ಜಾರಿಗೆ ತಂದಿದ್ದ ಐಪಿಸಿ (163 ವರ್ಷ ಹಳೆಯದು), ಸಿ ಆರ್ ಪಿ ಸಿ (125 ವರ್ಷ ಹಳೆಯದು) ಮತ್ತು ಎವಿಡೆನ್ಸ್ ಆಕ್ಟ್ (150 ವರ್ಷ ಹಳೆಯದು) ಆಧರಿಸಿ ಕಾರ್ಯನಿರ್ವಹಿಸುತ್ತಿತ್ತು. ವಸಾಹತುಶಾಹಿ ಕಾಲದ ಕಾನೂನುಗಳಿಗಿಂತ ಭಿನ್ನವಾಗಿ, 'ಭಾರತೀಯ ನ್ಯಾಯ ಸಂಹಿತೆ'ಯಲ್ಲಿ ಮಹಿಳೆಯರು, ಮಕ್ಕಳು ಮತ್ತು ರಾಷ್ಟ್ರದ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದ ಸೆಕ್ಷನ್ ಗಳಿಗೆ ಮೊದಲ ಆದ್ಯತೆ ನೀಡಲಾಗಿದೆ. ಹಳೆಯ ಕಾನೂನುಗಳ ಅಡಿಯಲ್ಲಿ, ಮಹಿಳೆಯರು, ಮಕ್ಕಳು ಮತ್ತು ರಾಷ್ಟ್ರದ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದ ಸೆಕ್ಷನ್ ಗಳಿಗಿಂತ ರಾಜದ್ರೋಹ, ಸರ್ಕಾರಿ ಖಜಾನೆ ಲೂಟಿ ಮತ್ತು ಸರ್ಕಾರಿ ಅಧಿಕಾರಿಗಳ ಮೇಲಿನ ದಾಳಿಗೆ ಸಂಬಂಧಿಸಿದ ನಿಬಂಧನೆಗಳೇ ಮೇಲುಗೈ ಸಾಧಿಸಿದ್ದವು.*




**358** ಸೆಕ್ಷನ್ ಗಳನ್ನು ಈಗ ಭಾರತೀಯ ನ್ಯಾಯ ಸಂಹಿತೆಯಲ್ಲಿ ಸೇರಿಸಲಾಗಿದೆ; ಈ ಹಿಂದೆ, ಇಂಡಿಯನ್ ಪೀನಲ್ ಕೋಡ್ (1860) 511 ಸೆಕ್ಷನ್ ಗಳನ್ನು ಒಳಗೊಂಡಿತ್ತು.

**21** ಅಪರಾಧಗಳನ್ನು ವ್ಯಾಖ್ಯಾನಿಸುವ ಹೊಸ ಸೆಕ್ಷನ್ ಗಳನ್ನು ಸೇರಿಸಲಾಗಿದೆ.



**41** ಸೆಕ್ಷನ್ ಗಳು ಈಗ ಹೆಚ್ಚಿನ ಅವಧಿಯ ಜೈಲು ಶಿಕ್ಷೆಯನ್ನು ಒಳಗೊಂಡಿವೆ.

**82** ಅಪರಾಧಗಳಿಗೆ ವಿಧಿಸುವ ದಂಡದ ಮೊತ್ತವನ್ನು ಹೆಚ್ಚಿಸಲಾಗಿದೆ, ಮತ್ತು 25 ಅಪರಾಧಗಳಿಗೆ ಕಡ್ಡಾಯ ಕನಿಷ್ಠ ಶಿಕ್ಷೆಯನ್ನು ಪರಿಚಯಿಸಲಾಗಿದೆ.

**19** ಸೆಕ್ಷನ್ ಗಳನ್ನು ರದ್ದುಗೊಳಿಸಲಾಗಿದೆ. ಆರು ಅಪರಾಧಗಳಿಗೆ 'ಸಮುದಾಯ ಸೇವೆ'ಯನ್ನು ಶಿಕ್ಷೆಯ ರೂಪವಾಗಿ ಪರಿಚಯಿಸಲಾಗಿದೆ.

ದೊರೆತ ನಂತರ, ಪ್ರತಿಯೊಬ್ಬ ನಾಗರಿಕನು ಸ್ವತಂತ್ರ ಭಾರತದ ಕಾನೂನುಗಳೊಂದಿಗೆ ಪರಿಚಿತನಾಗುವುದನ್ನು ಖಚಿತಪಡಿಸಿಕೊಳ್ಳಲು ದೊಡ್ಡ ಪ್ರಮಾಣದ ಸಾರ್ವಜನಿಕ ಜಾಗೃತಿ ಅಭಿಯಾನಗಳನ್ನು ಪ್ರಾರಂಭಿಸಲಾಯಿತು. ಸ್ವಾತಂತ್ರ್ಯ ಬಂದ ನಂತರದ ಏಳು ದಶಕಗಳಲ್ಲಿ ನ್ಯಾಯಾಂಗ ವ್ಯವಸ್ಥೆಯು ಎದುರಿಸಿದ ಸವಾಲುಗಳ ಕುರಿತು ಆಳವಾದ ಚರ್ಚೆಗಳನ್ನು ನಡೆಸಲಾಯಿತು. ಕಾನೂನಿನ ಪ್ರತಿಯೊಂದು ಆಯಾಮವನ್ನು ಅದರ ಪ್ರಾಯೋಗಿಕ ಅನ್ವಯಿಕೆ ಮತ್ತು ಭವಿಷ್ಯದ ಪ್ರಸ್ತುತತೆಗಾಗಿ ಸೂಕ್ಷ್ಮವಾಗಿ ಪರಿಶೀಲಿಸಲಾಯಿತು. 'ಸಮುದ್ರ ಮಂಥನ'ದಂತಿದ್ದ ಈ ಕಠಿಣ, ಮಂಥನ ಪ್ರಕ್ರಿಯೆಯಿಂದಲೇ - ಅಮೃತ ಕಾಲಕ್ಕಾಗಿ 'ಅಮೃತ' ಧಾರೆಯಂತೆ ಈ ಭಾರತೀಯ ನ್ಯಾಯ ಸಂಹಿತೆಯು ಹೊರಹೊಮ್ಮಿತು. ಇಂತಹ ಅಪಾರ ಸಹಯೋಗದಿಂದ ಮೂಡಿಬಂದ ಭಾರತದ ಈ ಹೊಸ ನ್ಯಾಯ ಸಂಹಿತೆಯು, ದೇಶದ ನ್ಯಾಯದಾನದ ಪಯಣದಲ್ಲಿ ಒಂದು ಮೈಲಿಗಲ್ಲಾಗಿದೆ ಎಂದು ಸಾಬೀತಾಗುತ್ತಿದೆ. ಜುಲೈ 1, 2024 ರಂದು ಈ ಕಾನೂನುಗಳ ಅನುಷ್ಠಾನದೊಂದಿಗೆ, ಬ್ರಿಟಿಷ್ ರಾಜ್ ಮತ್ತು ವಸಾಹತುಶಾಹಿ




**531** ಸೆಕ್ಷನ್ ಗಳು ಈಗ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯಲ್ಲಿವೆ; ಆದರೆ ಹಳೆಯ ಕ್ರಿಮಿನಲ್ ಪ್ರೊಸೀಜರ್ ಕೋಡ್, 1973 ರಲ್ಲಿ 484 ಸೆಕ್ಷನ್ ಗಳಿದ್ದವು. ಇದರಲ್ಲಿ 14 ಸೆಕ್ಷನ್‌ಗಳನ್ನು ರದ್ದುಗೊಳಿಸಲಾಗಿದೆ.

**177** ನಿಬಂಧನೆಗಳನ್ನು ತಿದ್ದುಪಡಿ ಮಾಡಲಾಗಿದೆ. ಒಂಬತ್ತು ಹೊಸ ಸೆಕ್ಷನ್ ಗಳು ಮತ್ತು 39 ಹೊಸ ಉಪ-ಸೆಕ್ಷನ್ ಗಳನ್ನು ಸೇರಿಸಲಾಗಿದೆ.

**44** ಹೊಸ ಸ್ಪಷ್ಟೀಕರಣಗಳು ಮತ್ತು ವಿವರಣೆಗಳನ್ನು ಸೇರಿಸಲಾಗಿದೆ.

**35** ಸೆಕ್ಷನ್ ಗಳು ಈಗ ನಿರ್ದಿಷ್ಟ ಸಮಯದ ಮಿತಿಗಳನ್ನು ಒಳಗೊಂಡಿವೆ.




**35** ಆಡಿಯೋ-ವಿಡಿಯೋ ನಿಬಂಧನೆಗಳನ್ನು ಪರಿಚಯಿಸಲಾಗಿದೆ.




**170** ನಿಬಂಧನೆಗಳು ಈಗ ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿವೆ. ಮೂಲ ಇಂಡಿಯನ್ ಎವಿಡೆನ್ಸ್ ಆಕ್ಟ್, 1872 ರಲ್ಲಿ 167 ಸೆಕ್ಷನ್ ಗಳಿದ್ದವು.

**24** ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಎರಡು ಹೊಸ ಸೆಕ್ಷನ್ ಗಳು ಮತ್ತು ಆರು ಉಪ-ಸೆಕ್ಷನ್ ಗಳನ್ನು ಸೇರಿಸಲಾಗಿದ್ದು, ಆರು ಸೆಕ್ಷನ್ ಗಳನ್ನು ತೆಗೆದುಹಾಕಲಾಗಿದೆ.

## ಕಾನೂನಿನಲ್ಲಿದ್ದ ಆಕ್ಷೇಪಾರ್ಹ ಪದಾವಳಿಗಳು

ಜೂನ್ 30, 2024 ರವರೆಗೆ ದೇಶದಲ್ಲಿ ಜಾರಿಯಲ್ಲಿದ್ದ ಕಾನೂನುಗಳು ಸ್ವತಂತ್ರ ಭಾರತದ ಮನೋಭಾವಕ್ಕೆ ಧಕ್ಕೆ ತರುವಂತಹ ಪದಾವಳಿಗಳನ್ನು ಹೊಂದಿದ್ದವು; ಆದರೂ, ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ಇದೇ ಕಾನೂನುಗಳು ಅನ್ವಯವಾಗುತ್ತಿದ್ದವು. ಈ ಹಳೆಯ ಕಾನೂನಿನಲ್ಲಿದ್ದ ಪದಾವಳಿಗಳೆಂದರೆ: 'ಯುನೈಟೆಡ್ ಕಿಂಗ್‌ಡಮ್'ನ ಸಂಸತ್ತು, ಪ್ರಾಂತೀಯ ಶಾಸನಸಭೆಗಳು, 'ಬ್ರಿಟಿಷ್ ರಾಜಪ್ರಭುತ್ವದ' ಪ್ರತಿನಿಧಿಗಳು, 'ಲಂಡನ್ ಗೆಜೆಟ್', 'ಜೂರಿ', 'ಯುನೈಟೆಡ್ ಕಿಂಗ್‌ಡಮ್ ಆಫ್ ಗ್ರೇಟ್ ಬ್ರಿಟನ್ ಅಂಡ್ ಐರ್ಲೆಂಡ್', 'ಹರ್ ಮೆಜೆಸ್ಟಿಸ್ ಗೌರ್ನಮೆಂಟ್', ಲಂಡನ್ ಗೆಜೆಟ್ ಸೂಚಿಸಿದ ಪ್ರಕ್ರಿಯೆಗಳು, 'ಬ್ರಿಟಿಷ್ ಕ್ರೌನ್', 'ಇಂಗ್ಲೆಂಡ್' ನ್ಯಾಯಾಲಯಗಳ ಸಂಪ್ರದಾಯಗಳು ಮತ್ತು 'ಬ್ಯಾರಿಸ್ಟರ್' ಎಂಬ ಪದಗಳು.



ಯುಗದ ಗುಲಾಮಗಿರಿಯ ಎಲ್ಲಾ ಕುರುಹುಗಳನ್ನು ತೆಗೆದುಹಾಕಲಾಯಿತು, ಸಂಪೂರ್ಣವಾಗಿ ಸ್ಥಳೀಯ ಕಾನೂನು ಚೌಕಟ್ಟನ್ನು ಜಾರಿಗೆ ತರಲಾಯಿತು. ಇದು ಭಾರತದ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಹೊಸ ಯುಗದ ಆರಂಭವನ್ನು ಸಾರಿತು. ಈ ಕಾನೂನಿನ ಸಂಪೂರ್ಣ ಅನುಷ್ಠಾನದೊಂದಿಗೆ, 'ತಾರೀಖ್ ಪೇ ತಾರೀಖ್' (ಮುಂದೂಡಿಕೆಯ ಮೇಲೆ ಮುಂದೂಡಿಕೆ) ಎಂದು ಪ್ರಸಿದ್ಧವಾಗಿದ್ದ ಅಂತ್ಯವಿಲ್ಲದ ನ್ಯಾಯಾಲಯದ ಮುಂದೂಡಿಕೆಗಳ ಯುಗಕ್ಕೆ ಮುಕ್ತಿ ಸಿಕ್ಕಿದೆ. ಯಾವುದೇ ಸಂತ್ರಸ್ತರಿಗೆ ಮೂರು ವರ್ಷಗಳ ಒಳಗಾಗಿ ನ್ಯಾಯ ಸಿಗುವುದನ್ನು ಖಾತ್ರಿಪಡಿಸುವ ನ್ಯಾಯಾಂಗ ವ್ಯವಸ್ಥೆಯನ್ನು ಈಗ ದೇಶದಲ್ಲಿ ಸ್ಥಾಪಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ, ಭಾರತದ ಈ ಹೊಸ ಕಾನೂನುಗಳು ನ್ಯಾಯದಾನದ ಇಡೀ ಸ್ವರೂಪವನ್ನೇ ಬದಲಾಯಿಸಿದ್ದು - ಈ ಬದಲಾವಣೆಯನ್ನು ಈಗ ಪ್ರತಿಯೊಬ್ಬ ನಾಗರಿಕನೂ ನೇರವಾಗಿ ಅನುಭವಿಸುತ್ತಿದ್ದಾನೆ. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಪರಿಚಯಿಸಲಾದ 'ಭಾರತೀಯ ನ್ಯಾಯ ಸಂಹಿತೆ'ಯು, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಭಾರತದ ಹೊಸ ಮನಸ್ಥಿತಿಯನ್ನು ಪ್ರತಿಬಿಂಬಿಸುವ ಮೂಲಕ ನ್ಯಾಯದಾನ ಪ್ರಕ್ರಿಯೆಯಲ್ಲಿ ಒಂದು ಹೊಸ ಆರಂಭವನ್ನು ಸೃಷ್ಟಿಸಿದೆ.

**ಜುಲೈ 1, 2026 ರಿಂದ 'ವಿಕಸಿತ ಭಾರತ - ಜಿ-ರಾಮ್-ಜಿ' ಜಾರಿ**

# ಗ್ರಾಮೀಣ ಭಾರತದಲ್ಲಿ ಈಗ 125 ದಿನಗಳ ಉದ್ಯೋಗ ಖಾತರಿ

*ಯಾವುದೇ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ - ವಿಶೇಷವಾಗಿ ಗ್ರಾಮೀಣ ಭಾರತದಲ್ಲಿ - ಜೀವನೋಪಾಯವನ್ನು ಭದ್ರಪಡಿಸಿಕೊಳ್ಳಲು ಕನಿಷ್ಠ 125 ದಿನಗಳ ಉದ್ಯೋಗದ ಲಭ್ಯತೆ ಅತ್ಯಗತ್ಯವಾಗಿದೆ. ಈ ದೃಷ್ಟಿಕೋನದಿಂದ ಪ್ರೇರಿತರಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಈ ಹಿಂದೆ ಕೋವಿಡ್-19 ಬಿಕ್ಕಟ್ಟಿನ ಸಂದರ್ಭದಲ್ಲಿ 125 ದಿನಗಳ ಅವಧಿಗಾಗಿ 'ಗರೀಬ್ ಕಲ್ಯಾಣ್ ರೋಜಗಾರ್ ಗ್ಯಾರಂಟಿ ಅಭಿಯಾನ'ವನ್ನು ಜಾರಿಗೊಳಿಸಿದ್ದರು. ಇದೇ ದೂರದೃಷ್ಟಿಯೊಂದಿಗೆ ರೂಪಿಸಲಾದ 'ವಿಕಸಿತ ಭಾರತ - ಜಿ-ರಾಮ್-ಜಿ' ಕಾಯ್ದೆಯು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಬದಲಾಯಿಸಿ, ಜುಲೈ 1 ರಿಂದ ಜಾರಿಗೆ ಬಂದಿದೆ. ಜಿ-ರಾಮ್-ಜಿ ಅಡಿಯಲ್ಲಿ, ಕೌಶಲರಹಿತ ದೈಹಿಕ ಶ್ರಮದ ಕೆಲಸವನ್ನು ಬಯಸುವ ವಯಸ್ಕ ಸದಸ್ಯರಿರುವ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೂ ಪ್ರತಿ ಹಣಕಾಸು ವರ್ಷದಲ್ಲಿ ಕಡ್ಡಾಯವಾಗಿ 125 ದಿನಗಳ ಕೂಲಿ ಆಧಾರಿತ ಉದ್ಯೋಗವನ್ನು ಖಾತರಿಪಡಿಸಲಾಗುತ್ತದೆ.*

ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ, ಗ್ರಾಮೀಣ ಭಾರತದ ಅಭಿವೃದ್ಧಿಯಿಲ್ಲದೆ 'ವಿಕಸಿತ ಭಾರತ'ದ ಕನಸನ್ನು ಸಾಕಾರಗೊಳಿಸಲು ಸಾಧ್ಯವಿಲ್ಲ. ಇದೇ ಕಾರಣಕ್ಕಾಗಿ, ದೇಶದಲ್ಲಿ ಸುದೀರ್ಘ ಅವಧಿಗೆ ಚುನಾಯಿತ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ ದಾಖಲೆ ಹೊಂದಿರುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಕಳೆದ 12 ವರ್ಷಗಳಿಂದ ಗ್ರಾಮೀಣ ಅಭಿವೃದ್ಧಿಗಾಗಿ ಸರಣಿ ಯೋಜನೆಗಳನ್ನು ನಿರಂತರವಾಗಿ ಜಾರಿಗೊಳಿಸುತ್ತಾ ಬಂದಿದ್ದಾರೆ. ಜಾಗತಿಕ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಮಾರ್ಚ್ 2020 ರಲ್ಲಿ ಲಾಕ್‌ಡೌನ್ ಘೋಷಿಸಿದಾಗ, ಅವರು ₹1.75 ಲಕ್ಷ ಕೋಟಿ ಮೌಲ್ಯದ ವಿಶೇಷ 'ಗರೀಬ್ ಕಲ್ಯಾಣ್' ಪ್ಯಾಕೇಜ್ ಅನ್ನು ಪ್ರಕಟಿಸಿದ್ದರು. ತದನಂತರ, ತಮ್ಮ ಹಳ್ಳಿಗಳಿಗೆ ಮರಳಿದ ವಲಸೆ ಕಾರ್ಮಿಕರಿಗೆ ಸಾಕಷ್ಟು ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ಒದಗಿಸಲು, ಅವರು 'ಗರೀಬ್ ಕಲ್ಯಾಣ್ ರೋಜಗಾರ್ ಅಭಿಯಾನ'ವನ್ನು ಪ್ರಾರಂಭಿಸಿ ₹50,000 ಕೋಟಿ ಮೌಲ್ಯದ ಯೋಜನೆಗಳನ್ನು ಜಾರಿಗೆ ತಂದರು. ಬಡವರಿಗೆ ಗುಣಮಟ್ಟದ ಜೀವನಶೈಲಿಯನ್ನು ಖಾತ್ರಿಪಡಿಸುವ ಅವರ ದೂರದೃಷ್ಟಿಯ ಫಲವಾಗಿಯೇ, ಇಂದು 'ವಿಕಸಿತ ಭಾರತ - ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಆಜೀವಿಕಾ ಮಿಷನ್ ಗ್ರಾಮೀಣ್' ಯೋಜನೆ ಅಡಿಯಲ್ಲಿ ಬೇಡಿಕೆ ಆಧಾರಿತ 125 ದಿನಗಳ ಉದ್ಯೋಗದ ಖಾತರಿ ಸಿಗುವಂತಾಗಿದೆ. ಈ ಹೊಸ ಕಾಯ್ದೆಯು ಗ್ರಾಮೀಣ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಒಂದು ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುತ್ತದೆ.

'ವಿಕಸಿತ ಭಾರತ - ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಆಜೀವಿಕಾ ಮಿಷನ್ ಗ್ರಾಮೀಣ್'—ಅಥವಾ 'ವಿಬಿ ಜಿ-ರಾಮ್-ಜಿ ಕಾಯ್ದೆ'ಯು—ಭಾರತದ ಗ್ರಾಮೀಣ ಉದ್ಯೋಗ ನೀತಿಯಲ್ಲಿ ಒಂದು ನಿರ್ಣಾಯಕ ಬದಲಾವಣೆಯನ್ನು ಸಾರುತ್ತದೆ. ಈ ಕಾಯ್ದೆಯು ಆಧುನಿಕ, ಜವಾಬ್ದಾರಿಯುತ ಮತ್ತು ಮೂಲಸೌಕರ್ಯ



# ‘ವಿಕಸಿತ ಭಾರತ-ಜಿ ರಾಮ್-ಜಿ’ ಉಪಕ್ರಮದ ಮುಖ್ಯಾಂಶಗಳು...

- ಹೊಸ ಕಾನೂನಿನ ಅಡಿಯಲ್ಲಿ, ಗ್ರಾಮೀಣ ಕುಟುಂಬಗಳಿಗೆ ನೀಡಲಾಗುವ ಉದ್ಯೋಗ ಖಾತರಿಯನ್ನು ನರೇಗಾ ಯೋಜನೆಗೆ ಹೋಲಿಸಿದರೆ ಪ್ರತಿ ಹಣಕಾಸು ವರ್ಷದಲ್ಲಿ 100 ದಿನಗಳಿಂದ 125 ದಿನಗಳಿಗೆ ಹೆಚ್ಚಿಸಲಾಗಿದೆ.
- ಜವಾಬ್ದಾರಿ, ಮೂಲಸೌಕರ್ಯಗಳ ಫಲಿತಾಂಶ ಹಾಗೂ ಆದಾಯದ ಭದ್ರತೆಯನ್ನು ಬಲಪಡಿಸುವ ಸಲುವಾಗಿ, ಸಮಗ್ರ ಶಾಸನಬದ್ಧ ತಿದ್ದುಪಡಿಗಳ ಮೂಲಕ ಪ್ರಸ್ತುತ ಇರುವ ನರೇಗಾ ಚೌಕಟ್ಟನ್ನು ಬದಲಾಯಿಸಲಾಗಿದೆ.
- ಈ ಕಾಯ್ದೆಯಡಿ ಕೈಗೊಳ್ಳಲಾಗುವ ಎಲ್ಲಾ ಕಾಮಗಾರಿಗಳನ್ನು ಗ್ರಾಮ ಸಭೆಯು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಈ ಉದ್ದೇಶಕ್ಕಾಗಿ ಗ್ರಾಮ ಪಂಚಾಯಿತಿಯು ಎಲ್ಲಾ ಸಂಬಂಧಿತ ದಾಖಲೆಗಳನ್ನು ಒದಗಿಸುತ್ತದೆ.
- ನಿಗದಿತ ಕಾಲಮಿತಿಯೊಳಗೆ ಕೆಲಸವನ್ನು ಒದಗಿಸಲಾಗುವುದು; ಹಾಗೆ ಮಾಡಲು ವಿಫಲವಾದರೆ ಕಾರ್ಮಿಕರು ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.
- ಮಸ್ಟರ್ ರೋಲ್ ಮುಕ್ತಾಯಗೊಂಡ ವಾರದೊಳಗೆ ಅಥವಾ 15 ದಿನಗಳ ಒಳಗಾಗಿ ಡಿಬಿಟಿ ಮೂಲಕ ನೇರವಾಗಿ ಕಾರ್ಮಿಕರ ಖಾತೆಗಳಿಗೆ ವೇತನವನ್ನು ಪಾವತಿಸಲಾಗುವುದು.
- ವೇತನವನ್ನು ಸಮಯಕ್ಕೆ ಸರಿಯಾಗಿ ಪಾವತಿಸದಿದ್ದರೆ, ಕಾರ್ಮಿಕರು ಕಾಯ್ದೆಯ ನಿಬಂಧನೆಗಳ ಪ್ರಕಾರ ವಿಳಂಬ ಪರಿಹಾರಕ್ಕೆ ಅರ್ಹರಾಗಿರುತ್ತಾರೆ.
- ಜಲ ಭದ್ರತೆ ಮತ್ತು ನೀರಾವರಿ, ಜಲಮೂಲಗಳ ಪುನಶ್ಚೇತನ, ತೋಟಗಾರಿಕೆ/ಸಸಿ ನೆಡುವುದು, ಕಾಲುವೆಗಳು, ಪ್ರವಾಹದ ನೀರಾವರಿ ಮಾರ್ಗಗಳು, ಚೆಕ್ ಡ್ಯಾಂ ನಿರ್ಮಾಣ, ಕೆರೆ ಮತ್ತು ಬಾವಿಗಳ ನಿರ್ಮಾಣ, ಹಾಗೂ ಸಮುದಾಯದ ಜೌಗು ಭೂಮಿಯ ಸುಧಾರಣೆ ಸೇರಿದಂತೆ ನೀರಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
- ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ, ನವೀಕರಿಸಬಹುದಾದ ಇಂಧನ ಮತ್ತು ಸಮುದಾಯ ಸೌಲಭ್ಯಗಳಂತಹ ವಲಯಗಳನ್ನು ಒಳಗೊಂಡ ಪ್ರಮುಖ ಗ್ರಾಮೀಣ ಮೂಲಸೌಕರ್ಯಗಳಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
- ಜೀವನೋಪಾಯಕ್ಕೆ ಸಂಬಂಧಿಸಿದ ಮೂಲಸೌಕರ್ಯ ಕಾಮಗಾರಿಗಳು ಕೃಷಿ, ಜಾನುವಾರು, ಮೀನುಗಾರಿಕೆ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆಯ ಅಭಿವೃದ್ಧಿಯನ್ನು ಒಳಗೊಂಡಿರುತ್ತವೆ. ಇವುಗಳಲ್ಲಿ ಗ್ರಾಮೀಣ ಹಾಟ್ ಗಳು, ವಾರದ ಸಂತೆಗಳು, ಆಹಾರ ಮತ್ತು ಕೃಷಿ ದಾಸ್ತಾನು ಮಳಿಗೆಗಳು, ನರ್ಸರಿ ಬೇಸಾಯದ ವಿಸ್ತರಣೆ ಮತ್ತು ಕಟ್ಟಡ ಸಾಮಗ್ರಿಗಳ ಉತ್ಪಾದನೆ ಮುಂತಾದ ಚಟುವಟಿಕೆಗಳು ಸೇರಿವೆ.
- ಬಯೋಮೆಟ್ರಿಕ್ ದೃಢೀಕರಣ, ಜಿಯೋ-ರೆಫರೆನ್ಸಿಂಗ್, ಉಪಗ್ರಹ ಚಿತ್ರಣ ಮತ್ತು ಕಾಮಗಾರಿಗಳ ಡಿಜಿಟಲ್ ಮ್ಯಾಪಿಂಗ್ ಬಳಸಿ ನಿರಂತರ ಮೇಲ್ವಿಚಾರಣೆ ನಡೆಸಲಾಗುವುದು. ಬೇಡಿಕೆ, ಕಾಮಗಾರಿ ಅನುಷ್ಠಾನ, ಕಾರ್ಮಿಕರ ನಿಯೋಜನೆ ಮತ್ತು ಒಟ್ಟಾರೆ ಪ್ರಗತಿಯನ್ನು ನೈಜ ಸಮಯದಲ್ಲಿ ಪತ್ತೆಹಚ್ಚಲು ಡ್ಯಾಶ್‌ಬೋರ್ಡ್ ಆಧಾರಿತ ಮೊಬೈಲ್ ಅಪ್ಲಿಕೇಶನ್ ಅನ್ನು ಬಳಸಲಾಗುತ್ತದೆ.
- ಪ್ರಸ್ತುತ ಇರುವ ಇ-ಕೆವೈಸಿ ಪರಿಶೀಲನೆ ಮುಗಿದ ನರೇಗಾ ಜಾಬ್ ಕಾರ್ಡ್‌ಗಳು, ಹೊಸ ಗ್ರಾಮೀಣ ಉದ್ಯೋಗ ಖಾತರಿ ಕಾರ್ಡ್ ಗಳನ್ನು ನೀಡುವವರೆಗೆ 'ವಿಕಸಿತ ಭಾರತ-ಜಿ ರಾಮ್ ಜಿ' ಅಡಿಯಲ್ಲೂ ಮಾನ್ಯತೆಯನ್ನು ಹೊಂದಿರುತ್ತವೆ.
- ಕೇವಲ ಇ-ಕೆವೈಸಿ ಪರಿಶೀಲನೆ ಬಾಕಿ ಇದೆ ಎಂಬ ಕಾರಣಕ್ಕಾಗಿ ಯಾವುದೇ ಕಾರ್ಮಿಕನಿಗೆ ಉದ್ಯೋಗವನ್ನು ನಿರಾಕರಿಸುವಂತಿಲ್ಲ.
- ಪ್ರಸ್ತುತ ಹಣಕಾಸು ವರ್ಷದಲ್ಲಿ, ಈ ಹೊಸ ಕಾನೂನಿನ ಅಡಿಯಲ್ಲಿ ಉದ್ಯೋಗಕ್ಕಾಗಿ ₹1,51,282 ಕೋಟಿಗೂ ಅಧಿಕ ಮೊತ್ತವನ್ನು ವಿನಿಯೋಗಿಸಲಾಗುವುದು, ಅದರಲ್ಲಿ ಕೇಂದ್ರದ ಪಾಲಿನ ರೂಪದಲ್ಲಿ 2026-27ರ ಬಜೆಟ್ ನಲ್ಲಿ ₹95,692 ಕೋಟಿ ನಿಬಂಧನೆ ಮಾಡಲಾಗಿದೆ. ಬಜೆಟ್ ಅಂದಾಜು ಹಂತದಲ್ಲಿ ಗ್ರಾಮೀಣ ಉದ್ಯೋಗಕ್ಕಾಗಿ ನೀಡಲಾದ ಅತ್ಯಂತ ದೊಡ್ಡ ಮೊತ್ತದ ಅನುದಾನ ಇದಾಗಿದೆ.



ಕೇಂದ್ರಿತ ಚೌಕಟ್ಟಿನ ಮೂಲಕ ನರೇಗಾ ಯೋಜನೆಯಲ್ಲಿದ್ದ ಲೋಪದೋಷಗಳನ್ನು ಪರಿಹರಿಸುತ್ತದೆ. ವಿಬಿ-ಜಿ-ರಾಮ್-ಜಿ ಕಾಯ್ದೆಯು ಗ್ರಾಮೀಣ ಭಾರತದಲ್ಲಿ ಖಾತರಿ ಉದ್ಯೋಗವನ್ನು ವಿಸ್ತರಿಸುವುದಲ್ಲದೆ, ಬಲಿಷ್ಠ ಡಿಜಿಟಲ್ ಆಡಳಿತ ವ್ಯವಸ್ಥೆಯನ್ನು ಸಂಯೋಜಿಸುವ ಮೂಲಕ ರಾಷ್ಟ್ರೀಯ ಅಭಿವೃದ್ಧಿಯ ಆದ್ಯತೆಗಳನ್ನು ಕಾರ್ಯಾಚರಣೆಯ ಕಾಮಗಾರಿಗಳೊಂದಿಗೆ ಜೋಡಿಸುತ್ತದೆ. ಇದು ಗ್ರಾಮೀಣ ಉದ್ಯೋಗ ಸೃಜನೆ, ಗ್ರಾಮೀಣ ಅಭಿವೃದ್ಧಿ ಮತ್ತು ಹಳ್ಳಿಗಳ ಸ್ವಾವಲಂಬನೆಗೆ ಹೊಸ ವೇಗವನ್ನು ನೀಡುತ್ತದೆ. ಗ್ರಾಮೀಣ ಪರಿವರ್ತನೆಯ ಕೇಂದ್ರ ಬಿಂದುಗಳನ್ನಾಗಿ ಗ್ರಾಮ ಪಂಚಾಯಿತಿಗಳನ್ನು ರೂಪಿಸುವ ಮೂಲಕ, ಈ ಕಾಯ್ದೆಯು ಬಲಿಷ್ಠ, ಸಮೃದ್ಧ ಮತ್ತು ಅಭಿವೃದ್ಧಿ ಹೊಂದಿದ ಗ್ರಾಮೀಣ ಭಾರತವನ್ನು ನಿರ್ಮಿಸುವಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಲಿದೆ. ಈ ಹೊಸ ಗ್ರಾಮೀಣ ಉದ್ಯೋಗ ಖಾತರಿಯು, 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತದ ಒಟ್ಟಾರೆ ದೃಷ್ಟಿಕೋನದ ಭಾಗವಾಗಿ ಅಭಿವೃದ್ಧಿ ಹೊಂದಿದ ಗ್ರಾಮೀಣ ಭಾರತದ ಕನಸನ್ನು ನನಸಾಗಿಸಲು ಒಂದು ಪ್ರೇರಕ ಶಕ್ತಿಯಾಗಿ ಕಾರ್ಯನಿರ್ವಹಿಸಲಿದೆ.



# ಕೌಶಲ್ಯಯುತ ಭಾರತದತ್ತ ದೈತ್ಯ ಹೆಜ್ಜೆ

***ಪ್ರತಿಯೊಂದು ರಾಷ್ಟ್ರವು ವಿಶಿಷ್ಟ ಸಾಮರ್ಥ್ಯವನ್ನು ಹೊಂದಿದ್ದು ಅದರ ಸಮರ್ಥ ಬಳಕೆಗೆ ಯುವಶಕ್ತಿ ಅಗತ್ಯ. ಯುವಕರು ಹೆಚ್ಚು ಸಬಲರಾದಷ್ಟೂ, ದೇಶದ ಪ್ರಗತಿ ವರ್ಧಿಸಲಿದೆ. ಈ ನಿಟ್ಟಿನಲ್ಲಿ, ಕೌಶಲ್ಯ ಭಾರತ ಮಿಷನ್ ದೃಢ ಆಧಾರಸ್ತಂಭವಾಗಿ ಹೊರಹೊಮ್ಮಿದ್ದು ತಳಮಟ್ಟದಲ್ಲಿ ಯುವಸಮೂಹವನ್ನು ಗಮನಾರ್ಹವಾಗಿ ಸಬಲಗೊಳಿಸುತ್ತಿದೆ. 2015ರ ಜುಲೈ 15 ರಂದು ಪ್ರಾರಂಭವಾದ ಈ ಮಿಷನ್ ಕಳೆದ 11 ವರ್ಷಗಳಲ್ಲಿ ದೇಶಾದ್ಯಂತ ಲಕ್ಷಾಂತರ ಜನರನ್ನು ಕೌಶಲ್ಯಯುತರಾಗಿಸುತ್ತಾ ಮತ್ತು ಸಬಲರಾಗಿಸುತ್ತಾ ಪರಿವರ್ತನಾತ್ಮಕ ಉಪಕ್ರಮವಾಗಿ ಮಾರ್ಪಟ್ಟಿದೆ.***

ತ್ರಿಪುರಾದ ದೂರದ ಹಳ್ಳಿಯ ಬುಡಕಟ್ಟು ಮಹಿಳೆ ನಿತ್ಯಾ ದೇವಿ ನಿಹೋತಿಯಾ, ಕೌಶಲ್ಯ ಭಾರತ ಮಿಷನ್ ಮೂಲಕ ರಬ್ಬರ್ ತೋಟಗಾರಿಕೆ ಕೆಲಸದಲ್ಲಿ ತರಬೇತಿ ಪಡೆದು ನರ್ಸರಿಯನ್ನು ಪ್ರಾರಂಭಿಸಿದರು. ಈಗ ಅವರು ಈ ಉದ್ಯಮದಿಂದ ಮಾಸಿಕ ₹4,000 ಲಾಭ ಗಳಿಸುತ್ತಿದ್ದಾರೆ. ಈ ಯೋಜನೆಯ ಫಲಾನುಭವಿಯಾಗಿ ನಿಹೋತಿಯಾ ಅವರು, ಸೂಕ್ತ ಸಮಯದಲ್ಲಿ ಸರಿಯಾದ ಮಾಹಿತಿ ದೊರೆತರೆ ಅನೇಕ ಸವಾಲುಗಳನ್ನು ಪರಿಹರಿಸಬಹುದು ಎಂದು ನಂಬಿದ್ದಾರೆ. ಅಂತಹ ಇನ್ನೊಂದು ಕಥೆ ಪೂನಂ ಮತ್ತು ಕೋಮಲ್ ಎಂಬ ಇಬ್ಬರು ಸಹೋದರಿಯರದ್ದು. ಆರ್ಥಿಕ ಸಂಕಷ್ಟದ ಪರಿಸ್ಥಿತಿಯಿಂದಾಗಿ ಅವರು ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಇಂತಹ ಕಠಿಣ ಸನ್ನಿವೇಶದಲ್ಲಿ, ಕೌಶಲ್ಯ ಭಾರತ ಉಪಕ್ರಮವು ಅವರಿಗೆ ಆಶಾಕಿರಣವಾಗಿ ಹೊರಹೊಮ್ಮಿತು. ಇಬ್ಬರೂ ಸಹೋದರಿಯರು ಕೌಶಲ್ಯ ತರಬೇತಿಯನ್ನು ಪಡೆದು, ಈಗ ಜವಳಿ ಕಂಪನಿಯಲ್ಲಿ ಉದ್ಯೋಗಿಗಳಾಗಿದ್ದಾರೆ. ಅವರು ತಮ್ಮ ಕುಟುಂಬಗಳಿಗೆ ಆಧಾರವಾಗಿರುವ ಜೊತೆಗೆ ತಮ್ಮ ಕೌಶಲ್ಯದ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು ಬಯಸುವ ಹೆಣ್ಣು ಮಕ್ಕಳಿಗೆ ಮಾದರಿಯೂ ಆಗಿದ್ದಾರೆ. ಇಂದು, ನಿತ್ಯಾ ದೇವಿ, ಪೂನಂ ಮತ್ತು ಕೋಮಲ್ ವಿವಿಧ ಕೌಶಲ್ಯ ಭಾರತ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅಡಿಯಲ್ಲಿ ತರಬೇತಿಯನ್ನು ಪೂರ್ಣಗೊಳಿಸಿದವರ ಪೈಕಿ ಸೇರಿದ್ದು ತಮ್ಮ ಕನಸುಗಳಿಗೆ ಹೊಸ ರೆಕ್ಕೆ ನೀಡಿದ್ದಾರೆ.

ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವು 2015ರ ಜುಲೈ 15, ರಂದು ಕೌಶಲ್ಯ ಭಾರತ ಮಿಷನ್ ಅನ್ನು ಪ್ರಾರಂಭಿಸಿತು. ಈ ಮಿಷನ್ ಭಾರತೀಯ ಯುವಕರಿಗೆ ತಮ್ಮ ವೃತ್ತಿಪರ ಕೌಶಲ್ಯಗಳನ್ನು ವರ್ಧಿಸಿಕೊಳ್ಳಲು ಅತ್ಯುತ್ತಮ ವೇದಿಕೆಯನ್ನು ಒದಗಿಸಿತು. ದೇಶಾದ್ಯಂತ ವೃತ್ತಿಪರ ತರಬೇತಿ ನೀಡುತ್ತಾ ಯುವಜನರನ್ನು ಅಗತ್ಯ ಕೌಶಲ್ಯಗಳೊಂದಿಗೆ ಸಜ್ಜುಗೊಳಿಸುವುದು ಇದರ ಉದ್ದೇಶವಾಗಿದೆ. ಲಕ್ಷಾಂತರ ಭಾರತೀಯ ಯುವಜನರಿಗೆ ಉದ್ಯಮ-ಸಂಬಂಧಿತ ಕೌಶಲ್ಯ



ನಿತ್ಯಾ ದೇವಿ ನಿಹೋತಿಯಾ



ಪೂನಂ ಮತ್ತು ಕೋಮಲ್

ತರಬೇತಿ ನೀಡುವ ಮೂಲಕ ಅವರನ್ನು ಸಬಲಗೊಳಿಸಲು ಪೂರಕವಾಗಿರುವ ಭಾರತ ಸರ್ಕಾರದ ಈ ಉಪಕ್ರಮವು ಒಂದು ಮೈಲಿಗಲ್ಲು ಎಂಬುದು ಸಾಬೀತಾಗಿದೆ. ಇದಲ್ಲದೆ, ಈ ತರಬೇತಿಯು ಅವರಿಗೆ ಉತ್ತಮ ಜೀವನೋಪಾಯಕ್ಕೆ ಬಾಗಿಲು ತೆರೆದಿದೆ. ಈ ಯೋಜನೆಯಡಿಯಲ್ಲಿ ನೀಡಲಾಗುವ ಸಮರ್ಥ

### ಮಿಷನ್ ಅಡಿಯಲ್ಲಿ ಈ ಕೆಳಗಿನ ಯೋಜನೆಗಳು ಸೇರಿವೆ:

- ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆ (ಪಿ ಎಂ ಕೆ ವಿ ವೈ)
- ಜನ ಶಿಕ್ಷಣ ಸಂಸ್ಥಾನ (ಜೆ ಎಸ್ ಎಸ್)
- ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ ಉತ್ತೇಜನ ಯೋಜನೆ (ಎನ್ ಎ ಪಿ ಎಸ್)
- ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ)ಗಳಲ್ಲಿ ಕುಶಲಕರ್ಮಿ ತರಬೇತಿ ಯೋಜನೆ (ಸಿಟಿಎಸ್)

## ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆ (ಪಿಎಂಕೆವಿವೈ)

ಮಾರ್ಚ್ 2026ರ ವೇಳೆಗೆ ಪಿಎಂಕೆವಿವೈ ಅಡಿಯಲ್ಲಿ 35ಕ್ಕೂ ಹೆಚ್ಚು ವಲಯಗಳಲ್ಲಿ **1.64** ಕೋಟಿ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

- ನಿರ್ಮಾಣ, ದೂರಸಂಪರ್ಕ ಮತ್ತು ಆರೋಗ್ಯ ವಲಯಗಳಲ್ಲಿನ ವಿವಿಧ ಕೆಲಸಗಳಿಗೆ ಹಾಗೂ ವೃತ್ತಿ ಮತ್ತು ಶೈಕ್ಷಣಿಕ ಸಲಹೆಗಾರ ಹುದ್ದೆಗಳಿಗೆ 3.15 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.
- ಪಿಎಂಕೆವಿವೈ 4.0 ಅಡಿಯಲ್ಲಿ ಪ್ರಸ್ತುತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
- ಪಿಎಂಕೆವಿವೈ 4.0 ರಡಿಯಲ್ಲಿ 2026ರ ಮಾರ್ಚ್ 31ರ ವೇಳೆಗೆ 36 ರಾಜ್ಯಗಳು ಮತ್ತು 737 ಜಿಲ್ಲೆಗಳನ್ನು ಒಳಗೊಂಡ 38 ವಲಯಗಳಲ್ಲಿ 27.24 ಲಕ್ಷ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

## ಜನ ಶಿಕ್ಷಣ ಸಂಸ್ಥಾನ (ಜೆ ಎಸ್ ಎಸ್)

- ಪ್ರಸ್ತುತ, 294 ಜನ ಶಿಕ್ಷಣ ಸಂಸ್ಥಾನಗಳು (ಜೆಎಸ್ಎಸ್) ಕಾರ್ಯನಿರ್ವಹಿಸುತ್ತಿವೆ.

2018 ರಿಂದ 2026ರ ಮಾರ್ಚ್ 31 ರವರೆಗೆ **36,48,69** ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ.

- ಈ ಕೋರ್ಸ್ ಗಳು ಸ್ಥಳೀಯ ಬೇಡಿಕೆಗೆ ಅನುಗುಣವಾಗಿವೆ ಹಾಗೂ ಟೈಲರಿಂಗ್, ಕಸೂತಿ, ಕರಕುಶಲ ವಸ್ತುಗಳು, ಆಹಾರ ಸಂಸ್ಕರಣೆ ಮತ್ತು ಆರೋಗ್ಯ ಸಂಬಂಧಿತ ಸೇವೆಗಳ ತರಬೇತಿ ಒಳಗೊಂಡಿವೆ.
- 2026 ರ ಮಾರ್ಚ್ 31ರ ವೇಳೆಗೆ 26,720 ಬುಡಕಟ್ಟು ಫಲಾನುಭವಿಗಳು ತರಬೇತಿಗೆ ನೋಂದಾಯಿಸಿಕೊಂಡಿದ್ದು 26,519 ಜನರಿಗೆ ತರಬೇತಿ ನೀಡಲಾಗಿದೆ.

> **“ ಕೌಶಲ್ಯ ಭಾರತವು ನಮ್ಮ ಯುವಸಮೂಹವನ್ನು ಕೌಶಲ್ಯಪೂರ್ಣ ಮತ್ತು ಸ್ವಾವಲಂಬಿಗಳನ್ನಾಗಿ ಮಾಡುವ ಸಂಕಲ್ಪವನ್ನು ಬಲಪಡಿಸುತ್ತಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*



## ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ (ಶಿಷ್ಯವೃತ್ತಿ) ಉತ್ತೇಜನ ಯೋಜನೆ (ಎನ್ ಎ ಪಿ ಎಸ್)

- ಆಗಸ್ಟ್ 2016 ರಲ್ಲಿ ಪ್ರಾರಂಭವಾದ ಈ ಯೋಜನೆಯನ್ನು ಪ್ರಸ್ತುತ ಅದರ ಎರಡನೇ ಹಂತವಾದ ಎನ್ ಎ ಪಿ ಎಸ್ 2.0 ರಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
- ಸರ್ಕಾರವು ಎನ್ಎಪಿಎಸ್ ಪೋರ್ಟಲ್ ಮೂಲಕ ಅಪ್ರೆಂಟಿಸ್ ಮಾಡಿದವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಶೇ.25 ಪ್ರತಿರಷ್ಟು ಸ್ಟೈಫಂಡ್ ಅನ್ನು (ತಿಂಗಳಿಗೆ ₹1,500 ವರೆಗೆ) ಜಮೆ ಮಾಡುತ್ತದೆ.
- 2016 ರಿಂದ 2026ರ ಮಾರ್ಚ್ 31 ರವರೆಗೆ, 54.41 ಲಕ್ಷಕ್ಕೂ ಹೆಚ್ಚು ಅಪ್ರೆಂಟಿಸ್ ಗಳು ಆಟೋಮೋಟಿವ್, ಐಟಿ-ಐಟಿಇಎಸ್, ಎಲೆಕ್ಟ್ರಾನಿಕ್ಸ್, ಚಿಲ್ಲರೆ ವ್ಯಾಪಾರ ಮತ್ತು ಉತ್ಪಾದನೆಯಂತಹ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ.
- ಹಣಕಾಸು ವರ್ಷ 2025-26 ರಲ್ಲಿ, ಸುಮಾರು 12.35 ಲಕ್ಷ ಅಪ್ರೆಂಟಿಸ್ ಗಳು ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಅದೇ ಅವಧಿಯಲ್ಲಿ, ಹೆಚ್ಚುವರಿಯಾಗಿ ಸುಮಾರು 6.42 ಲಕ್ಷ ಅಪ್ರೆಂಟಿಸ್ ಗಳು ತಮ್ಮ ಕಾರ್ಯಸ್ಥಳ ಕೌಶಲ್ಯ ತರಬೇತಿ(ಆನ್ ದಿ ಜಾಬ್ ಟ್ರೈನಿಂಗ್) ಅನ್ನು ಪೂರ್ಣಗೊಳಿಸಿದ್ದಾರೆ.

## ಕುಶಲಕರ್ಮಿ ತರಬೇತಿ ಯೋಜನೆ (ಸಿಟಿಎಸ್)

- ದೇಶಾದ್ಯಂತ ಸಿಟಿಎಸ್ ಅಡಿಯಲ್ಲಿ 14,688 ಐಟಿಐಗಳಲ್ಲಿ (ಸರ್ಕಾರಿ: 3,345; ಖಾಸಗಿ: 11,343) 169 ಕೋರ್ಸ್ ಗಳ ಮೂಲಕ ತರಬೇತಿ ನೀಡಲಾಗುತ್ತಿದೆ.
- ಮಾರ್ಚ್ 2026 ರ ವೇಳೆಗೆ, ಒಟ್ಟು 14 ಸಿಟಿಎಸ್ ಕೋರ್ಸ್ ಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಪ್ರಸ್ತುತ ನಡೆಸಲಾಗುತ್ತಿರುವ 22 ಕೋರ್ಸ್ ಗಳನ್ನು ಮೂರು ವರ್ಷಗಳಲ್ಲಿ ಪರಿಷ್ಕರಿಸಲಾಗಿದೆ.
- ಐಟಿಐಗಳಲ್ಲಿ ದಾಖಲಾತಿ ಹಣಕಾಸು ವರ್ಷ 2022-23ರಲ್ಲಿ 12.51 ಲಕ್ಷದಷ್ಟಿದ್ದು ಹಣಕಾಸು ವರ್ಷ 2025-26ರಲ್ಲಿ 14.70 ಲಕ್ಷಕ್ಕೆ ಏರಿಕೆಯಾಗಿದೆ.

ಕೌಶಲ್ಯ ಅಭಿವೃದ್ಧಿ ಕೋರ್ಸ್ ಗಳು ಜೀವನೋಪಾಯಕ್ಕೆ ತರಬೇತಿ ಮೂಲಕ ಮಹಿಳೆಯರಿಗೆ ಅದ್ಭುತಗಳನ್ನು ನೀಡಬಲ್ಲದಾಗಿದೆ. ಈ ಕಿರು ತರಬೇತಿಯು ಅವರ ಜೀವನವನ್ನು ಪರಿವರ್ತಿಸಿದ್ದು ನಿಜಕ್ಕೂ, ಈ ಸಾಮಾನ್ಯ ಮಹಿಳೆಯರು ಈಗ ತಮ್ಮದೇ ವಿಧದಲ್ಲಿ ವೀರರು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

**ಡಿಜಿಟಲ್ ಇಂಡಿಯಾ ಕಾರ್ಯಕ್ರಮದ 11 ವರ್ಷಗಳು**

# ತಂತ್ರಜ್ಞಾನ ಚಾಲಿತ ಪರಿವರ್ತನೆಯ ಹೊಸ ಯುಗ



*ಇಂದು ತಂತ್ರಜ್ಞಾನವು ಪ್ರತಿಯೊಬ್ಬ ನಾಗರಿಕನ ಜೀವನದ ಅವಿಭಾಜ್ಯ ಅಂಗವಾಗಿದೆ. ಸಾಮಾಜಿಕ ಸಬಲೀಕರಣ, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಕೃಷಿ, ಆರೋಗ್ಯ, ರಕ್ಷಣೆ ಅಥವಾ ಸಾರಿಗೆ ಮತ್ತು ಸಾಗಣೆ, ಹೀಗೆ ಯಾವುದೇ ಆಗಿರಲಿ, ಕಳೆದ ದಶಕದಲ್ಲಿ ಡಿಜಿಟಲೀಕರಣವು ದೇಶದ ಎಲ್ಲಾ ಹಂತಗಳಲ್ಲಿ ವಿಸ್ತರಿಸಿದೆ. ಈ ರೂಪಾಂತರದ ಹಿಂದೆ ತಂತ್ರಜ್ಞಾನವನ್ನು ಎಲ್ಲಾ ಜನರಿಗೆ ಲಭ್ಯವಂತಾಗಿಸುವ ಮತ್ತು ನಾಗರಿಕರನ್ನು ಸಬಲಗೊಳಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದೃಷ್ಟಿಕೋನವಿದೆ. ಈ ದೂರದೃಷ್ಟಿಯೊಂದಿಗೆ, 2015ರ ಜುಲೈ 1 ರಂದು ಪ್ರಾರಂಭಿಸಲಾದ ಡಿಜಿಟಲ್ ಇಂಡಿಯಾ ಉಪಕ್ರಮವು ನಾಗರಿಕರ ಜೀವನವನ್ನು ಸುಲಭಗೊಳಿಸುವ ಜೊತೆಗೆ ಡಿಜಿಟಲ್ ಆರ್ಥಿಕತೆಯ ತ್ವರಿತ ಬೆಳವಣಿಗೆ ಸಾಧ್ಯವಾಗಿಸಿದೆ. ಕಾರ್ಯಕ್ರಮದ 11 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಅದರ ಪ್ರಗತಿ ಮತ್ತು ಸಾಧನೆಗಳನ್ನು ನೋಡೋಣ.*

ಭಾರತದಲ್ಲಿ ಡಿಜಿಟಲ್ ಸೇರ್ಪಡೆಯು ಸಾಧನಗಳು ಮತ್ತು ಡಾಟಾ ಮೀರಿ ವಿಸ್ತರಿಸಿದ್ದು ಸಾಮರ್ಥ್ಯ ನಿರ್ಮಾಣ, ಅವಕಾಶಗಳ ಸೃಜನೆ ಮತ್ತು ಪ್ರತಿಯೊಂದು ಹಳ್ಳಿ ಮತ್ತು ಪಟ್ಟಣಕ್ಕೂ ಅಭಿವೃದ್ಧಿ ವಿಸ್ತರಣೆಗೆ ಸೇತುವೆಯಾಗಿದೆ. ಡಿಜಿಟಲ್ ಇಂಡಿಯಾ ಕಾರ್ಯಕ್ರಮ ಪ್ರಾರಂಭವಾದಾಗಿನಿಂದ ಕೌಶಲ್ಯ ಅಭಿವೃದ್ಧಿ, ಪ್ಲಾಟ್ ಫಾರ್ಮ್ಗಳು ಮತ್ತು ಸ್ಟಾರ್ಟ್ ಅಪ್ ಗಳೊಂದಿಗೆ ಸಂಪರ್ಕವನ್ನು ಸಂಯೋಜಿಸುವ ಮೂಲಕ ದೇಶದಲ್ಲಿ ಒಳಗೊಂಡ ಡಿಜಿಟಲ್ ಪರಿಸರ ವ್ಯವಸ್ಥೆಯನ್ನು ಸೃಜಿಸಿದೆ. ಡಿಜಿಟಲ್ ಆಡಳಿತವನ್ನು ಡಿಜಿಟಲ್ ಇಂಡಿಯಾ ಉಪಕ್ರಮವು ಬಲಪಡಿಸಿದ್ದು, ಇದು ಸುಲಲಿತ ಜೀವನ ಸಾಧ್ಯವಾಗಿಸಿದೆ ಜೊತೆಗೆ ವ್ಯಾಪಾರ - ವ್ಯವಹಾರ ಕೂಡ ಸುಲಭಗೊಳಿಸಿದೆ. ಭಾರತವನ್ನು ಡಿಜಿಟಲ್ ಸಬಲೀಕರಣಗೊಂಡ ಸಮಾಜ ಮತ್ತು ಜ್ಞಾನ ಆರ್ಥಿಕತೆಯಾಗಿ ಪರಿವರ್ತಿಸುವ ಮುನ್ನೋಟದೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಡಿಜಿಟಲ್ ಇಂಡಿಯಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ. ಡಿಜಿಟಲ್ ಇಂಡಿಯಾ ಕಾರ್ಯಕ್ರಮವು ಹಲವಾರು ಮೈಲಿಗಲ್ಲುಗಳನ್ನು ದಾಟಿದೆ ಮತ್ತು ಗಮನಾರ್ಹ ಯಶಸ್ಸನ್ನು ಸಾಧಿಸಿದೆ; ಪ್ರಸ್ತುತ, ಭಾರತವು ಆರ್ಥಿಕ ಡಿಜಿಟಲೀಕರಣದಲ್ಲಿ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ. ಭಾರತದ ಬಲಿಷ್ಠ ಡಿಜಿಟಲ್ ಮೂಲಸೌಕರ್ಯ ಇದರ ಹಿಂದಿರುವ ಪ್ರಮುಖ ಅಂಶವಾಗಿದೆ.

ದೇಶ ಮಾತ್ರವಲ್ಲ, ಇಡೀ ಜಗತ್ತು ಜನ್ ಧನ್, ಆಧಾರ್ ಮತ್ತು ಮೊಬೈಲ್ ನ 'ತ್ರಿಶಕ್ತಿ'ಗೆ ಸಾಕ್ಷಿಯಾಗಿದೆ. ಇದು ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಸ ಎತ್ತರಕ್ಕೆ ಏರಿಸಿದ್ದು, 'ಡಿಜಿಟಲ್ ಇಂಡಿಯಾ'ದ ಬಲವು ಸರ್ಕಾರಿ ಖಜಾನೆಯಲ್ಲಿ ₹4 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತದ ಸೋರಿಕೆಯನ್ನು ತಡೆಯುವಲ್ಲಿ ಯಶಸ್ವಿಯಾಗಿದೆ.

> **ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಇಂದು ಜಗತ್ತಿನಾದ್ಯಂತ ಚರ್ಚೆಯ ವಿಷಯವಾಗಿದೆ. ನಾವು ಮುಂದಿನ ಪೀಳಿಗೆಯ ಡಿಜಿಟಲ್ ಮೂಲಸೌಕರ್ಯದತ್ತ ಸಾಗುತ್ತಿದ್ದೇವೆ. ಡಿಜಿಟಲ್ ಪಾವತಿಗಳನ್ನು ಮುಂದಿನ ಹಂತಕ್ಕೆ ಯುಪಿಐ ಮುನ್ನಡೆಸಿದೆ. ಇಂದು, ಭಾರತವು ನೈಜ-ಸಮಯದ ಡಿಜಿಟಲ್ ಪಾವತಿಗಳ ವಿಶ್ವದ ಅತ್ಯಂತ ವೇಗದ ರಾಷ್ಟ್ರವಾಗಿ ಹೊರಹೊಮ್ಮಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಅದೇ ರೀತಿ, ಭಾರತದ ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ)ಯು ಈಗ ವಿಶ್ವದ ನೈಜ-ಸಮಯದ ಪಾವತಿಗಳ ಶೇ.49% ರಷ್ಟಿದೆ.

ಈ ಭಾರತೀಯ ವ್ಯವಸ್ಥೆಯನ್ನು ಒಂಭತ್ತು ದೇಶಗಳು ಅಳವಡಿಸಿಕೊಳ್ಳುತ್ತಿವೆ. ಅದು ಸಾಮಾನ್ಯ ಸೇವಾ ಕೇಂದ್ರಗಳಾಗಿರಬಹುದು ಅಥವಾ ಡಿಜಿಟಲ್ ಸೇವೆಗಳಿಗೆ ಹೆಚ್ಚುತ್ತಿರುವ ಬೇಡಿಕೆಯಾಗಿರಬಹುದು, ಈ ರೂಪಾಂತರವು ಉದ್ಯೋಗ ಮತ್ತು ಹೂಡಿಕೆಗೆ ಹೊಸ ಅವಕಾಶಗಳನ್ನು ಸೃಷ್ಟಿಸಿದೆ. ಭಾರತದ ಡಿಜಿಟಲ್ ಆರ್ಥಿಕತೆಯು ನಿರಂತರವಾಗಿ ವಿಸ್ತರಿಸುತ್ತಿದ್ದು 2029-30 ರ ವೇಳೆಗೆ ಇದು ರಾಷ್ಟ್ರೀಯ ಆದಾಯದ ಐದನೇ ಒಂದು ಭಾಗಕ್ಕೆ ಸಮಾನವಾದ ಮೊತ್ತವನ್ನು ಕೊಡುಗೆ ನೀಡಬಲ್ಲದು ಎಂದು ಅಂದಾಜಿಸಲಾಗಿದೆ.

# ಜೀವನವನ್ನು ಸುಲಲಿತಗೊಳಿಸುತ್ತಿದೆ ಡಿಜಿಟಲ್ ಇಂಡಿಯಾ

## ಸಾಮಾಜಿಕ ಸಬಲೀಕರಣ




**11+** ಕೋಟಿ ನೋಂದಣಿಗಳು ಉಮಾಂಗ್ ನಲ್ಲಿ ಆಗಿದ್ದು, ಇದರ ಮೂಲಕ ನಾಗರಿಕರು ಸುಮಾರು 2,400 ವಿಧದ ಸರ್ಕಾರಿ ಸೇವೆಗಳನ್ನು ಪಡೆಯಬಹುದಾಗಿದೆ.

- 6 ಕೋಟಿಗೂ ಹೆಚ್ಚು ಮೈಗೌ ಜಾಲತಾಣದ ಬಳಕೆದಾರರು.
- ಮೈಭಾರತ್ ಪೋರ್ಟಲ್ ಗೆ 2 ಕೋಟಿಗೂ ಹೆಚ್ಚು ಯುವಜನರು ಮತ್ತು ಸಂಸ್ಥೆಗಳು ಸಂಪರ್ಕಿತ; 783 ಜಿಲ್ಲೆಗಳಲ್ಲಿ ಮೈಭಾರತ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು.
- 7.22 ಲಕ್ಷ ಕಿ.ಮೀ ಆಪ್ಟಿಕಲ್ ಫೈಬರ್ ಕೇಬಲ್ ಹಾಕಲಾಗಿದೆ; ಭಾರತ್ ನೆಟ್ ಯೋಜನೆಯಡಿಯಲ್ಲಿ ದೇಶಾದ್ಯಂತ ಇಂಟರ್ನೆಟ್ ಸಂಪರ್ಕವನ್ನು ಬಲಪಡಿಸಲಾಗಿದೆ.
- ಭಾರತ್ ನೆಟ್ ಕಾರ್ಯಕ್ರಮದಡಿಯಲ್ಲಿ 2 ಲಕ್ಷಕ್ಕೂ ಹೆಚ್ಚು ಗ್ರಾಮ ಪಂಚಾಯತ್ ಗಳನ್ನು ಆಪ್ಟಿಕಲ್ ಫೈಬರ್ ಮೂಲಕ ಸಂಪರ್ಕಿಸಲಾಗಿದೆ.

## ಡಿಜಿಟಲ್ ಮೂಲಸೌಕರ್ಯ




**70+** ಕೋಟಿ ಡಿಜಿಲಾಕರ್ ಬಳಕೆದಾರರು 950 ಕೋಟಿ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿದ್ದಾರೆ.

- 16,000 ಕ್ಕೂ ಹೆಚ್ಚು ಸೇವೆಗಳನ್ನು ಸಂಯೋಜಿಸುವ 'ಮೇರಿ ಪೆಹಚಾನ್' ಜಾಲತಾಣದಲ್ಲಿ 74.4 ಕೋಟಿಗೂ ಹೆಚ್ಚು ಬಳಕೆದಾರರಿದ್ದಾರೆ; ಒಂದೇ ಸೈನ್-ಆನ್ ಮೂಲಕ ಬಹು ಸರ್ಕಾರಿ ಸೇವೆಗಳನ್ನು ಇಲ್ಲಿ ಪಡೆಯಬಹುದಾಗಿದೆ.
- ದೇಶಾದ್ಯಂತ 5 ಲಕ್ಷಕ್ಕೂ ಹೆಚ್ಚು ಸಾಮಾನ್ಯ ಸೇವಾ ಕೇಂದ್ರಗಳು (ಸಿ ಎಸ್ ಸಿಗಳು) ಕಾರ್ಯನಿರ್ವಹಿಸುತ್ತಿದ್ದು, ಡಿಜಿಟಲ್ ಸಹಾಯಕ ಮಾದರಿಯಲ್ಲಿ 800 ಕ್ಕೂ ಹೆಚ್ಚು ಸೇವೆಗಳನ್ನು ಒದಗಿಸುತ್ತಿವೆ.
- ಶೇ.90% ಕ್ಕಿಂತ ಹೆಚ್ಚು ಕಡತಗಳು ಈಗ ಇ-ಆಫೀಸ್ ಗೆ ರೂಪಾಂತರಗೊಂಡಿದ್ದು, ಸರ್ಕಾರಿ ಇಲಾಖೆಗಳಲ್ಲಿ ಕಾಗದರಹಿತ ಕಾರ್ಯನಿರ್ವಹಣೆ ಸಾಧ್ಯವಾಗಿಸಿದೆ.

## ಹಣಕಾಸು ಸೇರ್ಪಡೆ




**188+** ಕೋಟಿ ಇ-ವೇ ಬಿಲ್ ಗಳನ್ನು ಸೃಜಿಸಲಾಗಿದ್ದು ಅವು ಅನೇಕ ರಾಜ್ಯ ಮಟ್ಟದ ಪರವಾನಗಿಗಳಿಗೆ ಪರ್ಯಾಯವಾಗಿ ಸಾಗಣೆಗೆ ಏಕೀಕೃತ ವಿದ್ಯುನ್ಮಾನ ದಾಖಲೆಯಾಗಿವೆ.

- ದೇಶದ 38 ವಿಮಾನ ನಿಲ್ದಾಣಗಳಲ್ಲಿ ಡಿಜಿಯಾತ್ರೆ ಅಪ್ಲಿಕೇಷನ್ ಅನ್ನು 10 ಕೋಟಿಗೂ ಹೆಚ್ಚು ಬಾರಿ ಬಳಸಲಾಗಿದೆ.
- ಜನ್ ಧನ್-ಆಧಾರ್-ಮೊಬೈಲ್ ಗಳ 'ತ್ರಿಶಕ್ತಿ'ಯ ಸಮರ್ಥ ಬಳಕೆಯೊಂದಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ₹51 ಲಕ್ಷ ಕೋಟಿಗೂ ಹೆಚ್ಚು ಹಣವನ್ನು ವರ್ಗಾಯಿಸಲಾಗಿದೆ.
- 58 ಕೋಟಿಗೂ ಹೆಚ್ಚು ಜನ್ ಧನ್ ಖಾತೆಗಳನ್ನು ತೆರೆಯಲಾಗಿದೆ.
- 144 ಕೋಟಿಗೂ ಅಧಿಕ ಆಧಾರ್ ಸಂಖ್ಯೆಗಳನ್ನು ನೀಡಲಾಗಿದೆ – ಇದು ವಿಶ್ವದ ಅತಿದೊಡ್ಡ ಡಿಜಿಟಲ್ ಗುರುತಿನ ವ್ಯವಸ್ಥೆಯಾಗಿದ್ದು 2014 ರಲ್ಲಿ ಈ ಪ್ರಮಾಣ 61 ಕೋಟಿಯಷ್ಟಿತ್ತು.
- ಭಾರತದ ಯುಪಿಐ ವ್ಯವಸ್ಥೆಯನ್ನು 9 ದೇಶಗಳು ಅಳವಡಿಸಿಕೊಂಡಿವೆ.
- ಭಾರತದ ಯುಪಿಐ ಸಿಂಗಾಪುರ, ಯುಎಇ, ಫ್ರಾನ್ಸ್, ಮಾರಿಷಸ್, ನೇಪಾಳ, ಭೂತಾನ್, ಕತಾರ್, ಶ್ರೀಲಂಕಾ ಮತ್ತು ಈಗ ಕಾಂಬೋಡಿಯಾದಲ್ಲಿ ಮಾನ್ಯವಾಗಿದೆ.
- ಜಾಗತಿಕ ನೈಜ-ಸಮಯದ ಪಾವತಿಗಳ ಪೈಕಿ ಶೇ.49 ರಷ್ಟು ಭಾರತದಲ್ಲಿ ಯುಪಿಐ ಮೂಲಕ ಮಾಡಲಾಗುತ್ತಿದೆ.
- ಭಾರತದಲ್ಲಿನ ಎಲ್ಲಾ ಚಿಲ್ಲರೆ ಡಿಜಿಟಲ್ ವಹಿವಾಟುಗಳ ಶೇ.81% ಕ್ಕಿಂತ ಹೆಚ್ಚು ಪ್ರಮಾಣ ಯುಪಿಐ ಮೂಲಕ ನಡೆಸಲ್ಪಡುತ್ತಿವೆ.
- 64 ಕೋಟಿಗೂ ಅಧಿಕ ಜನರು ಮತ್ತು ವ್ಯಾಪಾರಿಗಳು ಯುಪಿಐ ವೇದಿಕೆಯನ್ನು ಬಳಸುತ್ತಿದ್ದಾರೆ.

## ಸಾರಿಗೆ ಮತ್ತು ಸಾಗಣೆ

**₹16+** ಲಕ್ಷ ಕೋಟಿ - ಪ್ರಧಾನಮಂತ್ರಿ ಗತಿಶಕ್ತಿ ವೇದಿಕೆಯಲ್ಲಿ ಮೌಲ್ಯಮಾಪನ ಮಾಡಲಾಗಿರುವ 352 ಯೋಜನೆಗಳ ಅಂದಾಜು ವೆಚ್ಚ

- 12 ಕೋಟಿಗೂ ಅಧಿಕ ಫಾಸ್ಟ್ ಟ್ಯಾಗ್ ಗಳ ವಿತರಣೆ; ಟೋಲ್ ಪ್ಲಾಜಾ ಗಳಲ್ಲಿ ಈಗ ವಾಹನಗಳು ಕೇವಲ ಕೆಲವೇ ಕೆಲವು ಸೆಕೆಂಡುಗಳು ಮಾತ್ರ ನಿಲ್ಲಬೇಕಿದ್ದು, ಇಂಧನ ವೆಚ್ಚ ತಗ್ಗಿದೆ, ಈ ಮೂಲಕ ಪರಿಸರಕ್ಕೂ ಅನುಕೂಲವಾಗಿದೆ
- ಡಿಜಿಟಲ್ ವೇದಿಕೆಯಾದ ಏಕೀಕೃತ ಲಾಜಿಸ್ಟಿಕ್ಸ್ ಇಂಟರ್ಫೇಸ್ ಪ್ಲಾಟ್ಫಾರ್ಮ್ (ಯು ಎಲ್ ಐ ಪಿ) ಸಾಗಣೆ ಸಂಬಂಧಿತ ಸಚಿವಾಲಯಗಳು ಮತ್ತು ಇಲಾಖೆಗಳಿಂದ ದತ್ತಾಂಶವನ್ನು ಏಕ ವೇದಿಕೆಗೆ ಸಂಯೋಜಿಸಲಿದೆ.



## ಆರೋಗ್ಯ ರಕ್ಷಣೆ ಮತ್ತು ಸೌಖ್ಯ

- ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಅಡಿಯಲ್ಲಿ 90 ಕೋಟಿಗೂ ಹೆಚ್ಚು ಆಭಾ ಖಾತೆಗಳನ್ನು ತೆರೆಯಲಾಗಿದ್ದು, 14-ಅಂಕಿಯ ಡಿಜಿಟಲ್ ಆರೋಗ್ಯ ಗುರುತಿನ ಸಂಖ್ಯೆಯ ಅಳವಡಿಕೆಯಲ್ಲಿ ದಾಖಲೆ ನಿರ್ಮಿಸಿದೆ.
- ಇ-ಸಂಜೀವಿನಿ ಮೂಲಕ 45 ಕೋಟಿಗೂ ಹೆಚ್ಚು ಇ-ಸಮಾಲೋಚನೆಗಳನ್ನು ನಡೆಸಲಾಗಿದೆ.
- 8.9 ಕೋಟಿ ಫಲಾನುಭವಿಗಳು ಮತ್ತು 14 ಲಕ್ಷಕ್ಕೂ ಹೆಚ್ಚು ಅಂಗನವಾಡಿಗಳನ್ನು ಪೋಷಣ್ ಟ್ರ್ಯಾಕರ್ ಗೆ ಸಂಪರ್ಕಿಸಲಾಗಿದೆ.
- ಕೋವಿಡ್ - 19 ಸಮಯದಲ್ಲಿ ಲಸಿಕೆ ಮತ್ತು ಸಂಪರ್ಕ ಪತ್ತೆಹಚ್ಚುವಿಕೆಯಲ್ಲಿ ಆರೋಗ್ಯ ಸೇತು ಅಪ್ಲಿಕೇಶನ್ ಮಹತ್ವದ ಪಾತ್ರ ವಹಿಸಿತ್ತು.



## ರೈತರು ಮತ್ತು ಗ್ರಾಮೀಣ ವಲಯ

# ₹4.27+

**ಲಕ್ಷ ಕೋಟಿ ಹಣವನ್ನು ಪಿಎಂ-ಕಿಸಾನ್ ಯೋಜನೆಯಡಿಯಲ್ಲಿ ವಿತರಿಸಲಾಗಿದೆ. ಇದು ಒಟಿಪಿ/ಆಧಾರ್ ಆಧಾರಿತ ಇ-ಕೆವೈಸಿ ಮತ್ತು ಬಯೋಮೆಟ್ರಿಕ್ ದೃಢೀಕರಣದೊಂದಿಗೆ ರೈತ ಕೇಂದ್ರಿತ ಡಿಜಿಟಲ್ ಮೂಲಸೌಕರ್ಯವನ್ನು ಬಳಸಿಕೊಂಡಿದೆ.**

- ಈಶಾನ್ಯ ರಾಜ್ಯಗಳ ರೈತರಿಗೆ ಮೊಬೈಲ್ ಆಧಾರಿತ ಕೃಷಿ ಸಲಹಾ ವ್ಯವಸ್ಥೆ 'm4Agri' ಮೂಲಕ ಕೃಷಿ ಮತ್ತು ತೋಟಗಾರಿಕಾ ಸಲಹೆಗಳನ್ನು ಒದಗಿಸಲಾಗುತ್ತದೆ.
- ದೇಶದ ಶೇ.97% ಕ್ಕೂ ಹೆಚ್ಚು ಪ್ರದೇಶದ ಭೂ ದಾಖಲೆ ನಕ್ಷೆಗಳ ಡಿಜಿಟಲೀಕರಣ ಪೂರ್ಣಗೊಂಡಿದೆ ಮತ್ತು 19 ರಾಜ್ಯಗಳ ನಾಗರಿಕರು ಈಗ ತಮ್ಮ ಮನೆಗಳಿಂದಲೇ ಡಿಜಿಟಲ್ ಸಹಿ ಮಾಡಿದ, ಕಾನೂನುಬದ್ಧವಾಗಿ ಮಾನ್ಯವಾದ ಭೂ ದಾಖಲೆಗಳನ್ನು ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ.
- 36 ಕೋಟಿಗೂ ಹೆಚ್ಚು ಭೂ ಭಾಗಗಳಿಗೆ ವಿಶಿಷ್ಟ ಭೂ ಭಾಗದ ಗುರುತಿನ ಸಂಖ್ಯೆಗಳನ್ನು ನೀಡಲಾಗಿದೆ, ಇದು ಬೇನಾಮಿ (ಪ್ರಾಕ್ಸಿ) ವಹಿವಾಟುಗಳನ್ನು ತಡೆಯಲು ನೆರವಾಗುವ 14-ಅಂಕಿಯ ಅಕ್ಷರ ಮತ್ತು ಸಂಖ್ಯೆ ಮಿಶ್ರಿತ ಸಂಕೇತ (ಆಲ್ಫಾನ್ಯೂಮರಿಕ್ ಕೋಡ್) ಆಗಿದೆ.

# 9+

**ಕೋಟಿ ಕೃಷಿಕರ ಗುರುತಿನ ಚೀಟಿ ಸೃಜಿಸಲಾಗಿದೆ**





## ಶಿಕ್ಷಣ ಮತ್ತು ಕೌಶಲ್ಯಗಳು

**4,000ಕ್ಕೂ ಹೆಚ್ಚಿನ ಡಿಜಿಟಲ್ ಕೋರ್ಸ್ ಗಳನ್ನು ಒದಗಿಸಿರುವ ಸಂಯೋಜಿತ ಸರ್ಕಾರಿ ಆನ್ ಲೈನ್ ತರಬೇತಿ (iGOT) ಕರ್ಮಯೋಗಿ ವೇದಿಕೆಗೆ**

**1.5 ಕೋಟಿ ಜನರು ಸೇರ್ಪಡೆಯಾಗಿದ್ದಾರೆ.**

**2 ಕೋಟಿಗೂ ಹೆಚ್ಚು ಬಳಕೆದಾರರನ್ನು ಹೊಂದಿರುವ ದೀಕ್ಷಾ ವೇದಿಕೆಯಲ್ಲಿ**

# 566+

**ಕೋಟಿ ಕಲಿಕಾ ಅವಧಿಗಳು ನಡೆದಿವೆ.**

- ಡಿಜಿಟಲ್ ಇಂಡಿಯಾ ಭಾಷಿಣಿಯೊಂದಿಗೆ 800 ಕ್ಕೂ ಹೆಚ್ಚು ಸರ್ಕಾರಿ ಜಾಲತಾಣಗಳು ಸಂಯೋಜಿಸಲ್ಪಟ್ಟಿದ್ದು, ಪ್ರತಿದಿನ 1.5 ಕೋಟಿಗೂ ಹೆಚ್ಚು ಕೃತಕ ಬುದ್ಧಿಮತ್ತೆ (ಎಐ) ಚಾಲಿತ ಕಾರ್ಯಗಳನ್ನು ನಿರ್ವಹಿಸುತ್ತವೆ.
- ಭವಿಷ್ಯದ ಕೌಶಲ್ಯಗಳ ಪ್ರಮುಖ ಕಾರ್ಯಕ್ರಮ - ಫ್ಯೂಚರ್ ಸ್ಕಿಲ್ಸ್ ಪ್ರೈಮ್ ಪ್ರೋಗ್ರಾಂ ನಿಂದ 16 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪ್ರಯೋಜನ ಪಡೆದಿದ್ದಾರೆ; ಶೇ.85 ರಷ್ಟು ಫಲಾನುಭವಿಗಳು 2ನೇ ಮತ್ತು 3ನೇ ದರ್ಜೆಯ ನಗರಗಳಿಗೆ ಸೇರಿದವರಾಗಿದ್ದಾರೆ.
- ಪ್ರಧಾನಮಂತ್ರಿ ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನ (ಪಿಎಂಜಿ ದಿಶಾ) ಅಡಿಯಲ್ಲಿ 6.39 ಕೋಟಿ ಗ್ರಾಮೀಣ ನಾಗರಿಕರಿಗೆ ತರಬೇತಿ ನೀಡಲಾಗಿದ್ದು, 6 ಕೋಟಿ ಕುಟುಂಬಗಳಾದ್ಯಂತ ಈ ಅಭಿಯಾನದಡಿ ತರಬೇತಿ ನೀಡಲಾಗಿದ್ದು, ಪ್ರತಿ ಮನೆಗೆ ಒಬ್ಬ ವ್ಯಕ್ತಿಗೆ ತರಬೇತಿ ನೀಡುವ ಗುರಿಯನ್ನು ಮೀರಿದೆ.
- ಇ-ಸಮಾಲೋಚನೆ, ಇ-ಗ್ರಂಥಾಲಯ ಮತ್ತು ರಾಷ್ಟ್ರೀಯ ಶೈಕ್ಷಣಿಕ ಸಂಗ್ರಹಾಗಾರಗಳಂತಹ ಉಪಕ್ರಮಗಳು ಸಹ ಪ್ರಕ್ರಿಯೆಗಳನ್ನು ವ್ಯವಸ್ಥಿತಗೊಳಿಸುತ್ತಿವೆ.

## ಉದ್ಯಮಶೀಲತೆ ಮತ್ತು ಉತ್ಪಾದನೆ

- 2.2 ಲಕ್ಷಕ್ಕೂ ಹೆಚ್ಚು ಸ್ಟಾರ್ಟ್ ಅಪ್ ಗಳೊಂದಿಗೆ, ಭಾರತವು ವಿಶ್ವದ ಮೂರನೇ ಅತಿದೊಡ್ಡ ನವೋದ್ಯಮ ಪರಿಸರ ವ್ಯವಸ್ಥೆಯನ್ನು ಹೊಂದಿದ್ದು, ತಂತ್ರಜ್ಞಾನವು ಜನರ ಜೀವನವನ್ನು ಸರಳಗೊಳಿಸುತ್ತಿದೆ.
- ಡಿಜಿಟಲ್ ವೇದಿಕೆಯಾಗಿರುವ ಸ್ಟಾರ್ಟ್‌ಅಪ್ ಇಂಡಿಯಾ ಹಬ್ ಉದಯೋನ್ಮುಖ ಉದ್ಯಮಿಗಳು, ಹೂಡಿಕೆದಾರರು, ಮಾರ್ಗದರ್ಶಕರು, ಇನ್ಕ್ಯುಬೇಟರ್ (ನವೋದ್ಯಮಗಳಿಗೆ ಬೆಂಬಲ ನೀಡುವ ಸಂಸ್ಥೆ) ಗಳು ಮತ್ತು ಸರ್ಕಾರಿ ಸಂಸ್ಥೆಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುತ್ತಾ ನಾವೀನ್ಯತೆ ಮತ್ತು ಉದ್ದಿಮೆ ಬೆಳವಣಿಗೆಗೆ ಉತ್ತೇಜನ ನೀಡುತ್ತಿದೆ.

## ಹೊರಹೊಮ್ಮುತ್ತಿರುವ ತಂತ್ರಜ್ಞಾನಗಳು

ದೇಶಾದ್ಯಂತ ಉದಯೋನ್ಮುಖ ತಂತ್ರಜ್ಞಾನಗಳನ್ನು ಮುನ್ನಡೆಸಲು ರಾಷ್ಟ್ರೀಯ ಕೃತಕ ಬುದ್ಧಿಮತ್ತೆ ಕಾರ್ಯಕ್ರಮ (ಇಂಡಿಯಾ ಎಐ) ಮತ್ತು ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ) ನಂತಹ ಡಿಜಿಟಲ್ ವೇದಿಕೆಗಳು ನೆರವಾಗಿವೆ.



## ಖರೀದಿ, ವ್ಯಾಪಾರ ಮತ್ತು ತೆರಿಗೆ

- ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ)ಯ ಐಸ್ ಗೇಟ್ ಪೋರ್ಟಲ್ ಅನ್ನು ಯುಎಲ್ಐಪಿ, ಮೋಟಾರು ವಾಹನ ಪರಿಸರ ವ್ಯವಸ್ಥೆ ಮತ್ತು ಬಿ ಎಸ್ ಎಫ್ ನೊಂದಿಗೆ ಸಂಯೋಜಿಸಿರುವುದು ನೈಜ-ಸಮಯದ ದತ್ತಾಂಶ-ಹಂಚಿಕೆ ಜಾಲವನ್ನು ಸೃಷ್ಟಿಸಿದ್ದು ಗಡಿ ತೆರವು ಮತ್ತು ಸರಕು ಸಾಗಣೆ ಪ್ರಕ್ರಿಯೆಗೆ ವೇಗ ನೀಡಿದೆ.

# 18+

**ಲಕ್ಷ ಕೋಟಿ – ಸರ್ಕಾರಿ ಇ-ಮಾರುಕಟ್ಟೆ ವೇದಿಕೆ (ಜಿಇಎಂ) ಆರಂಭವಾದಾಗಿನಿಂದ ಏಪ್ರಿಲ್ 2026ರವರೆಗೆ ಒಟ್ಟು ಮಾರಾಟ ಪ್ರಮಾಣ**



**ಪಿಎಂ ವಿಕಸಿತ ಭಾರತ ರೋಜ್‌ಗಾರ್ ಯೋಜನೆ**

# ನವ ಭಾರತದ ಕಾರ್ಯಪಡೆಯ ಸಬಲೀಕರಣ




*ಕಾರ್ಮಿಕ ಮಾರುಕಟ್ಟೆಯನ್ನು ಬಲಪಡಿಸಲು ಕೇಂದ್ರ ಸರ್ಕಾರವು 'ಪ್ರಧಾನ ಮಂತ್ರಿಗಳ ವಿಕಸಿತ ಭಾರತ ರೋಜ್‌ಗಾರ್' ಯೋಜನೆಯ ಮೂಲಕ ದೇಶಾದ್ಯಂತ ಉದ್ಯೋಗ ಸೃಷ್ಟಿಯಲ್ಲಿ ಹೊಸ ಅಧ್ಯಾಯ ಬರೆಯುತ್ತಿದೆ. ಮೊದಲ ಬಾರಿಗೆ, ಔಪಚಾರಿಕ ಉದ್ಯೋಗ ಪಡೆದುಕೊಂಡ ನಂತರ ನೇರ ಆರ್ಥಿಕ ನೆರವು ನೀಡಲಾಗುತ್ತಿದೆ. 2 ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಗುರಿಯತ್ತ ಸಾಗುತ್ತಿರುವ ಈ ಯೋಜನೆಯು, 2026ರ ಫೆಬ್ರವರಿ ವೇಳೆಗೆ ಸುಮಾರು 56 ಲಕ್ಷ ಉದ್ಯೋಗಿಗಳ ನೋಂದಣಿಯನ್ನು ಈಗಾಗಲೇ ಕಂಡಿದೆ... ನವ ಭಾರತದ ಕಾರ್ಯಪಡೆಯನ್ನು ರೂಪಿಸುತ್ತಿದೆ.*

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉದ್ಯೋಗವನ್ನು 'ಕಲ್ಯಾಣ ದಾನ'ದ ಕಾರ್ಯವಾಗಿ ನೋಡದೆ, ಸಬಲೀಕರಣದ ಸಾಧನವಾಗಿ ನೋಡುತ್ತಾರೆ. ಈ ದೃಷ್ಟಿಕೋನವು 'ವಿಕಸಿತ ಭಾರತ 2047' ಕನಸನ್ನು ನನಸಾಗಿಸಲು ಪ್ರಾಥಮಿಕ ಎಂಜಿನ್ ಆಗಿ ಕಾರ್ಯ ನಿರ್ವಹಿಸುತ್ತಿದೆ. ಈ ಕಾರಣಕ್ಕಾಗಿಯೇ, ಪ್ರಧಾನ ಮಂತ್ರಿಗಳ ವಿಕಸಿತ ಭಾರತ ರೋಜ್‌ಗಾರ್ ಯೋಜನೆಯಡಿ, 2026ರ ಫೆಬ್ರವರಿ ವೇಳೆಗೆ ಒಟ್ಟು 55.9 ಲಕ್ಷ ಮೊದಲ ಬಾರಿಗೆ ಉದ್ಯೋಗಿಗಳು ಮತ್ತು ಮತ್ತೆ ಕಾರ್ಯಪಡೆಗೆ ಪ್ರವೇಶಿಸುವ 1.14 ಕೋಟಿ ಉದ್ಯೋಗಿಗಳನ್ನು ನೋಂದಾಯಿಸಲಾಗಿದೆ. ಈ ಯೋಜನೆಯಡಿ, ಹೊಸ ಸಾರ್ವತ್ರಿಕ ಖಾತೆ ಸಂಖ್ಯೆಯನ್ನು ಸೃಜಿಸಿದ ಮೊದಲ ಬಾರಿಯ ಉದ್ಯೋಗಿಗಳು 15,000 ರೂ.ವರೆಗೆ ಪ್ರೋತ್ಸಾಹಧನಕ್ಕೆ ಅರ್ಹರಾಗಿದ್ದಾರೆ. ಈ ಮೊತ್ತವನ್ನು 6 ತಿಂಗಳ ಮಧ್ಯಂತರದಲ್ಲಿ 2 ಕಂತುಗಳಲ್ಲಿ ವಿತರಿಸಬೇಕಿದೆ. ಏತನ್ಮಧ್ಯೆ, ಸರ್ಕಾರವು ಪ್ರತಿ ಹೊಸ ಉದ್ಯೋಗಿಗೆ ಅನ್ವಯವಾಗುವಂತೆ, ಉದ್ಯೋಗದಾತರಿಗೆ 3,000 ರೂ.ವರೆಗೆ ಪ್ರೋತ್ಸಾಹಧನ ನೀಡುತ್ತದೆ, ಇದು ಉದ್ಯೋಗಿಯನ್ನು ಕನಿಷ್ಠ 6 ತಿಂಗಳವರೆಗೆ ಉದ್ಯೋಗದಲ್ಲಿ ಇರಿಸಿಕೊಳ್ಳಬೇಕು ಎಂಬ ಷರತ್ತಿಗೆ ಒಳಪಟ್ಟಿರುತ್ತದೆ.

2025 ಜುಲೈ 1ರಂದು ಕೇಂದ್ರ ಸಚಿವ ಸಂಪುಟವು 99,446 ಕೋಟಿ ರೂ. ಬಜೆಟ್ ಹಂಚಿಕೆಯೊಂದಿಗೆ ಉದ್ಯೋಗ-ಸಂಬಂಧಿತ ಪ್ರೋತ್ಸಾಹಕ ಯೋಜನೆಗೆ ಅನುಮೋದನೆ ನೀಡಿದೆ. ಈ ಯೋಜನೆಯು 2 ವರ್ಷಗಳಲ್ಲಿ ದೇಶದಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಪ್ರೋತ್ಸಾಹಕಗಳನ್ನು ಒದಗಿಸುವ ಗುರಿ ಹೊಂದಿದೆ. ಈ ಯೋಜನೆಯ ಪ್ರಯೋಜನಗಳು 2025 ಆಗಸ್ಟ್ 1 ರಿಂದ 2027 ಜುಲೈ 31ರ ನಡುವೆ ಸೃಜಿಸಲಾದ

> **ಇಂದು ಪ್ರತಿಯೊಬ್ಬ ಭಾರತೀಯನು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತ ನಿರ್ಮಿಸುವ ಮಹತ್ತರವಾದ ಸಂಕಲ್ಪದೊಂದಿಗೆ ಮುಂದುವರಿಯುತ್ತಿದ್ದಾನೆ. ಈ ಗುರಿ ಸಾಧಿಸಲು ದೇಶವು ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುತ್ತಿದೆ, ದೇಶದ ಯುವಕರಿಗೆ ಈ ಹೂಡಿಕೆಗಳು ಲಕ್ಷಾಂತರ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿವೆ.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*

ಉದ್ಯೋಗಗಳಿಗೆ ಅನ್ವಯಿಸುತ್ತವೆ. 1 ಲಕ್ಷ ರೂ.ವರೆಗೆ ಗಳಿಸುವ ಉದ್ಯೋಗಿಗಳು ಈ ಯೋಜನೆಗೆ ಅರ್ಹರಾಗಿರುತ್ತಾರೆ. ಹೊಸ ಉದ್ಯೋಗಗಳ ಸೃಷ್ಟಿಯು ಯುವಕರ ಭವಿಷ್ಯವನ್ನು ಸುರಕ್ಷಿತಗೊಳಿಸುವುದಲ್ಲದೆ, 'ಆತ್ಮನಿರ್ಭರ ಭಾರತ'ದ ಅಡಿಪಾಯವನ್ನು ಬಲಪಡಿಸುತ್ತದೆ. ಭಾರತ ಸರ್ಕಾರವು 2024-25ರ ಬಜೆಟ್‌ನಲ್ಲಿ 'ಪ್ರಧಾನ ಮಂತ್ರಿಗಳ ಉದ್ಯೋಗ ಮತ್ತು ಕೌಶಲ್ಯ ಪ್ಯಾಕೇಜ್' ಅಡಿ ಈ ಉದ್ಯೋಗ-ಸಂಬಂಧಿತ ಪ್ರೋತ್ಸಾಹಕ ಯೋಜನೆಯನ್ನು ಘೋಷಿಸಿದೆ. ಈ ಯೋಜನೆಯು 2 ಅಂಶಗಳನ್ನು ಹೊಂದಿದೆ: ಇದು ಉದ್ಯೋಗಿಗಳಿಗೆ ಬೆಂಬಲ ಒದಗಿಸುತ್ತದೆ ಮತ್ತು ಹೊಸ ನೇಮಕಾತಿಗಳ ಸೃಜನೆಯನ್ನು ಹೆಚ್ಚಿಸುವಲ್ಲಿ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ.



ಪ್ರಧಾನ ಮಂತ್ರಿ ಅವರ ಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

**ಸೂರತ್ ಮತ್ತು ದಮನ್‌ನಲ್ಲಿ ಸುಮಾರು 23,000 ಕೋಟಿ ರೂಪಾಯಿ ಮೌಲ್ಯದ ಯೋಜನೆಗಳಿಗೆ ಉದ್ಘಾಟನೆ ಮತ್ತು ಶಂಕುಸ್ಥಾಪನೆ**

# ಆಧುನಿಕ ಸಂಪರ್ಕ ಮತ್ತು ಅಭಿವೃದ್ಧಿಯಲ್ಲಿ ಹೊಸ ಅಧ್ಯಾಯ

*ಗುಜರಾತ್ ನ ಸೂರತ್ ಮತ್ತು ಕೇಂದ್ರಾಡಳಿತ ಪ್ರದೇಶ ದಮನ್ ನಲ್ಲಿ ಪ್ರಾದೇಶಿಕ ಅಭಿವೃದ್ಧಿ ಹಾಗೂ ಸದೃಢವಾದ ಸಂಪರ್ಕ ಒದಗಿಸುವ ಹೊಸ ಯುಗ ಆರಂಭಿಸಲು ಕೇಂದ್ರ ಸರ್ಕಾರ ದೃಢ ನಿಷ್ಠೆಯಿಂದ ಬದ್ಧವಾಗಿದೆ. ಈ ಉಪಕ್ರಮದ ಭಾಗವಾಗಿ, ಜೂನ್ 5ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೂರತ್, ದಮನ್ ಮತ್ತು ಲಕ್ಷದ್ವೀಪದಾದ್ಯಂತ ರಸ್ತೆಗಳು, ವಿಮಾನ ನಿಲ್ದಾಣಗಳು, ಆಸ್ಪತ್ರೆಗಳು, ಇಂಧನ ಮತ್ತು ಕೈಗಾರಿಕಾ ಅಭಿವೃದ್ಧಿ ಸೇರಿದಂತೆ ಸುಮಾರು 23,000 ಕೋಟಿ ರೂ. ಮೌಲ್ಯದ ವಿವಿಧ ಯೋಜನೆಗಳನ್ನು ಉದ್ಘಾಟಿಸಿದರು ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಈ ಯೋಜನೆಗಳು 'ಸುಲಭವಾಗಿ ಜೀವನ ನಡೆಸುವುದನ್ನು' ಹೆಚ್ಚಿಸುವುದಲ್ಲದೆ, ರಾಷ್ಟ್ರವು ಸ್ವಾವಲಂಬಿಯಾಗುವ ಸಂಕಲ್ಪವನ್ನು ವೇಗಗೊಳಿಸುತ್ತವೆ...*

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ 'ವಿಕಸಿತ ಭಾರತ' ಕಟ್ಟುವ ಗುರಿಯತ್ತ ದೇಶ ಸಾಗುತ್ತಿರುವ ಪ್ರಯಾಣಕ್ಕೆ ಪ್ರತಿದಿನ ಹೊಸ ಅಧ್ಯಾಯವನ್ನು ಸೇರ್ಪಡೆ ಮಾಡಲಾಗುತ್ತಿದೆ. ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವು ಅಭಿವೃದ್ಧಿಯಲ್ಲಿ ಹಿಂದುಳಿಯದಂತೆ ನೋಡಿಕೊಳ್ಳಲು ಪ್ರಧಾನ ಮಂತ್ರಿ ಮೋದಿ ಅವರು ವೈಯಕ್ತಿಕವಾಗಿ ಪ್ರಗತಿಯ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಅಭಿವೃದ್ಧಿಯ ಪ್ರಯೋಜನಗಳು ಸಮಾಜದ ನಿರ್ಲಕ್ಷಿತ ವ್ಯಕ್ತಿಗಳಿಗೂ ತಲುಪುವಂತೆ ನೋಡಿಕೊಳ್ಳಲು ಅವರು ಕೆಲಸ ಮಾಡುತ್ತಿದ್ದಾರೆ. ಈ ನಿರಂತರ ಪ್ರಯತ್ನದ ಭಾಗವಾಗಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜೂನ್ 5ರಂದು ಗುಜರಾತ್ ನ ಸೂರತ್, ಕೇಂದ್ರಾಡಳಿತ ಪ್ರದೇಶವಾದ ದಮನ್ ಮತ್ತು ಲಕ್ಷದ್ವೀಪಕ್ಕೆ ಭೇಟಿ ನೀಡಿದ್ದರು. ಸಾರ್ವಜನಿಕರಿಗೆ ಸೌಲಭ್ಯಗಳನ್ನು ಹೆಚ್ಚಿಸುವ ಗುರಿ ಹೊಂದಿರುವ ಹಲವಾರು

> **ಈ ದಶಕವು ಜಗತ್ತಿಗೆ ವಿಪತ್ತುಗಳ ದಶಕವೆಂದು ಸಾಬೀತಾಗುತ್ತಿದೆ. ಮೊದಲು ಪ್ರಮುಖವಾಗಿ ಕೊರೊನಾ ಬಿಕ್ಕಟ್ಟು ಕಾಣಿಸಿಕೊಂಡಿತು, ನಂತರ ವಿವಿಧ ಸ್ಥಳಗಳಲ್ಲಿ ಯುದ್ಧಗಳು ಸಂಭವಿಸಿದವು... ಇದೀಗ, ಒಂದು ದೊಡ್ಡ ಇಂಧನ ಬಿಕ್ಕಟ್ಟು ಎದುರಾಗಿದೆ... ಈ ಘಟನೆಗಳು ಇಡೀ ಜಗತ್ತನ್ನು ಅಸ್ತವ್ಯಸ್ತಗೊಳಿಸಿವೆ. ಆದಾಗ್ಯೂ, 1.4 ಶತಕೋಟಿ ಭಾರತೀಯರ ಸಾಮೂಹಿಕ ಪ್ರಯತ್ನಗಳ ಮೂಲಕ, ದೇಶವು ಅಂತಹ ಪ್ರತಿಯೊಂದು ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸುತ್ತಿದೆ ಎಂಬುದು ನನಗೆ ಅಪಾರ ತೃಪ್ತಿ ನೀಡುತ್ತಿದೆ.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*

## ಸೂರತ್‌ನಿಂದ ರಾಷ್ಟ್ರಕ್ಕೆ ಉಡುಗೊರೆಯಾಗಿ ಬಂದ ಅಭಿವೃದ್ಧಿ ಯೋಜನೆಗಳು

- ಉದ್ಘಾಟನೆ: ಅಷ್ಟಪಥಗಳ ಪ್ರವೇಶ-ನಿಯಂತ್ರಿತ ವಡೋದರಾ-ಮುಂಬೈ ಎಕ್ಸ್‌ಪ್ರೆಸ್‌ವೇಯ ಪ್ರಮುಖ ಪ್ಯಾಕೇಜ್ ರಾಷ್ಟ್ರಕ್ಕೆ ಸಮರ್ಪಣೆ.
- ಸೂರತ್‌ನಲ್ಲಿ 220 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆ.
- ವಿದ್ಯುತ್ ಪ್ರಸರಣ ಜಾಲ ವಿಸ್ತರಣೆ ಯೋಜನೆ.
- ರಾಸಾಯನಿಕಗಳು ಮತ್ತು ಪೆಟ್ರೋಕೆಮಿಕಲ್ಸ್ ಹೂಡಿಕೆ ಪ್ರದೇಶ.
- ಸರಿಗಮ್ ಜಿಐಡಿಸಿ(ಗುಜರಾತ್ ಕೈಗಾರಿಕಾ ಅಭಿವೃದ್ಧಿ ನಿಗಮ)ಯಲ್ಲಿ ಸುಧಾರಿತ ತ್ಯಾಜ್ಯ ವಿಲೇವಾರಿ ಸೌಲಭ್ಯ.
- ಶಿಲಾನ್ಯಾಸ: ಬುಡಕಟ್ಟು ಪ್ರದೇಶಗಳು ಮತ್ತು ಏಕತಾ ಪ್ರತಿಮೆಗೆ ಸಂಪರ್ಕ ಸುಧಾರಿಸಲು ರಾಷ್ಟ್ರೀಯ ಹೆದ್ದಾರಿ-56 ನಿರ್ಣಾಯಕ ವಿಭಾಗಗಳನ್ನು ಚತುಷ್ಪಥಗಳಾಗಿ ವಿಸ್ತರಣೆ.



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗುಜರಾತ್‌ನ ಹಜೀರಾದಲ್ಲಿರುವ ಲಾರ್ಸೆನ್ ಮತ್ತು ಟೂಬ್ರೊ ಸೌಲಭ್ಯಕ್ಕೆ ಭೇಟಿ ನೀಡಿದರು, ಅಲ್ಲಿ ಅವರು ಕಂಪನಿಯು ವಿವಿಧ ವಲಯಗಳಲ್ಲಿ ಅಭಿವೃದ್ಧಿಪಡಿಸುತ್ತಿರುವ ನಾವೀನ್ಯತೆಗಳನ್ನು ಪರಿಶೀಲಿಸಿದರು.

ಯೋಜನೆಗಳನ್ನು ಅವರು ಉದ್ಘಾಟಿಸಿದರು ಮತ್ತು ಶಿಲಾನ್ಯಾಸ ನೆರವೇರಿಸಿದರು. ಅವರು ಉದ್ಘಾಟಿಸಿದ ಯೋಜನೆಗಳು ನಾಗರಿಕರ ಜೀವನ ಗುಣಮಟ್ಟವನ್ನು ಸುಧಾರಿಸುತ್ತವೆ, ಜತೆಗೆ, ಶಂಕುಸ್ಥಾಪನೆ ನೆರವೇರಿಸಿದ ಯೋಜನೆಗಳು ಭವಿಷ್ಯದ ಪ್ರಗತಿಗೆ ದಾರಿ ಮಾಡಿಕೊಡುತ್ತವೆ. ಸೂರತ್‌ನಲ್ಲಿ 18,800 ಕೋಟಿ ರೂ., ದಮನ್‌ನಲ್ಲಿ 2,970 ಕೋಟಿ ರೂ. ಮತ್ತು ಲಕ್ಷದ್ವೀಪದಲ್ಲಿ 885 ಕೋಟಿ ರೂ. ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಅವರು ಉದ್ಘಾಟಿಸಿದರು.

ಸೂರತ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಭಾರತದ ಇಂಧನ ಸ್ವಾವಲಂಬನೆಗೆ ಗುಜರಾತ್ ನೀಡುತ್ತಿರುವ ಕೊಡುಗೆಯನ್ನು ಶ್ಲಾಘಿಸಿದರು. ದೇಶದ ಒಟ್ಟು ನವೀಕರಿಸಬಹುದಾದ ಇಂಧನ ಸಾಮರ್ಥ್ಯವಾದ 250 ಗಿಗಾ ವ್ಯಾಟ್ ಪೈಕಿ ಗುಜರಾತ್ ಒಂದೇ ಐದನೇ ಒಂದು ಭಾಗದಷ್ಟು(50 ಗಿಗಾ ವ್ಯಾಟ್) ಉತ್ಪಾದಿಸುತ್ತಿದೆ ಎಂದು ಹೇಳಿದರು. ಹಸಿರು ಹೈಡ್ರೋಜನ್ ಮತ್ತು ಹಸಿರು ಅಮೋನಿಯದಂತಹ ಉದಯೋನ್ಮುಖ ವಲಯಗಳಲ್ಲಿ ರಾಜ್ಯವು ಪ್ರಮುಖ ಪಾತ್ರ ವಹಿಸಲು ಸಜ್ಜಾಗಿದೆ. ಕಳೆದ 12 ವರ್ಷಗಳಲ್ಲಿ ಸೌರಶಕ್ತಿ, ಎಥೆನಾಲ್ ಮಿಶ್ರಣ, ರೈಲ್ವೆ ವಿದ್ಯುದೀಕರಣ, ಪರಮಾಣು ಶಕ್ತಿ, ಪ್ರಸರಣ ಜಾಲಗಳು, ಅನಿಲ ಪೈಪ್‌ಲೈನ್‌ಗಳು ಮತ್ತು ಬಂದರು ಸಂಗ್ರಹ ಸಾಮರ್ಥ್ಯಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ವಿಸ್ತರಣೆ ಕಂಡುಬಂದಿದೆ. ಇತ್ತೀಚಿನ ಜಾಗತಿಕ ಬಿಕ್ಕಟ್ಟುಗಳು ಇಂಧನ ವಲಯದಲ್ಲಿ ಸ್ವಾವಲಂಬನೆ ಸಾಧಿಸುವ ನಿರ್ಣಾಯಕ ಮಹತ್ವವನ್ನು ಒತ್ತಿಹೇಳುತ್ತಿವೆ.

ಹಜೀರಾ ಭೇಟಿಯನ್ನು ನೆನಪಿಸಿಕೊಂಡ ಪ್ರಧಾನ ಮಂತ್ರಿ ಮೋದಿ, ಈ ಪ್ರದೇಶವನ್ನು ಕೇವಲ ಕೈಗಾರಿಕಾ ವಲಯ ಎಂದು ಬಣ್ಣಿಸದೆ, ಇಂಧನ, ಉಕ್ಕು, ರಕ್ಷಣಾ ಉತ್ಪಾದನೆ ಮತ್ತು ಜಾಗತಿಕ ಕಡಲ ವ್ಯಾಪಾರವನ್ನು ಒಳಗೊಂಡ ಸಮಗ್ರ, ಅಭಿವೃದ್ಧಿ ಹೊಂದುತ್ತಿರುವ ಪರಿಸರ ವ್ಯವಸ್ಥೆಯಾಗಿದೆ ಎಂದು ಬಣ್ಣಿಸಿದರು. ಈ ಕಡಲ-ಕೈಗಾರಿಕಾ ಕೇಂದ್ರವು 'ಆತ್ಮನಿರ್ಭರ ಭಾರತ' ಉಪಕ್ರಮಕ್ಕೆ ಜೀವಂತ ಸಾಕ್ಷಿಯಾಗಿದೆ ಎಂದು ಅವರು ಶ್ಲಾಘಿಸಿದರು. ಸ್ವಾವಲಂಬನೆ ಅಭಿಯಾನವನ್ನು ಅಪಹಾಸ್ಯ ಮಾಡುವ ದೇಶದೊಳಗಿರುವ

## ಲಕ್ಷದ್ವೀಪದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಉತ್ತೇಜನ

- ಶಂಕುಸ್ಥಾಪನೆ: ಸುಮಾರು 885 ಕೋಟಿ ರೂ.ಮೌಲ್ಯದ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ.
- ಕಲ್ಪೇನಿ ಮತ್ತು ಕಡ್ಮತ್ ದ್ವೀಪಗಳ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಬಂದರು ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು.
- ಬಹುಪಯೋಗಿ ಬಂದರು ಕಾಪುಗಳ ಅಭಿವೃದ್ಧಿಯು 300 ಮೀಟರ್ ಉದ್ದದ ಕ್ರೂಸ್ ಹಡಗುಗಳು ಸೇರಿದಂತೆ ದೊಡ್ಡ ಪ್ರಯಾಣಿಕ ಹಡಗುಗಳಿಗೆ ವರ್ಷಪೂರ್ತಿ ಪ್ರವೇಶ ಸುಗಮಗೊಳಿಸುತ್ತದೆ.
- ಮೀನು ನಿರ್ವಹಣೆ, ಇಂಧನ ವಿತರಣೆ, ಐಸ್ ಪೂರೈಕೆ ಮತ್ತು ದೋಣಿ ದುರಸ್ತಿಗಾಗಿ ಸಮಗ್ರ ಸೌಲಭ್ಯಗಳನ್ನು ಒದಗಿಸಲಾಗುವುದು.
- ಈ ಉಪಕ್ರಮವು ಕಡಲ ಸಂಪರ್ಕವನ್ನು ಬಲಪಡಿಸುತ್ತದೆ, ಸ್ಥಳೀಯ ಮೀನುಗಾರರ ಜೀವನೋಪಾಯವನ್ನು ಬೆಂಬಲಿಸುತ್ತದೆ, ಪ್ರವಾಸೋದ್ಯಮವನ್ನು ಹೆಚ್ಚಿಸುತ್ತದೆ ಮತ್ತು ದ್ವೀಪಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ.






## ದಮನ್ ಅಭಿವೃದ್ಧಿಯ ಉಡುಗೊರೆಗಳನ್ನು ಪಡೆದಿದೆ

- ಉದ್ಘಾಟನಾ ಸಮಾರಂಭ: ನಮೋ ವಿಮಾನ ನಿಲ್ದಾಣ ಮತ್ತು ನಮೋ ಆಸ್ಪತ್ರೆಯ ಹೊಸ ಟರ್ಮಿನಲ್ ಕಟ್ಟಡ.
- ಶಿಲಾನ್ಯಾಸ: ಅಪ್ರತಿಮ ಸೇತುವೆ, ದಮನ್ ಕನ್ವೆನ್ಷನ್ ಸೆಂಟರ್ ಮತ್ತು ನಿಫ್ಟ್ ಕ್ಯಾಂಪಸ್.




## ಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಶಿಪ್ ಉದ್ಘಾಟನೆ

ಜೂನ್ 4ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಶಿಪ್ ಉದ್ಘಾಟಿಸಿದರು, ಇದು ಜಾಗತಿಕ ಕ್ರೀಡಾ ಪರಂಪರೆಯಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಗುರುತಿಸುತ್ತದೆ. "ಇಂದು ಅಹಮದಾಬಾದ್ ಮಣ್ಣಿನಿಂದ ವಿಶ್ವದ ಕ್ರೀಡಾ ಪರಂಪರೆಗೆ ಹೊಸ ಅಧ್ಯಾಯ ಸೇರ್ಪಡೆ ಮಾಡಲಾಗುತ್ತಿದೆ" ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು. ಅಹಮದಾಬಾದ್ ಯುನೆಸ್ಕೊ ವಿಶ್ವ ಪರಂಪರೆಯ ನಗರವಾಗಿದ್ದು, ಈ ಐತಿಹಾಸಿಕ ನಗರದಲ್ಲಿ ಈ ಕಾರ್ಯಕ್ರಮ ಆಯೋಜಿಸಿರುವುದು ಇಡೀ ರಾಷ್ಟ್ರಕ್ಕೆ ಹೆಮ್ಮೆಯ ವಿಷಯವಾಗಿದೆ. ಯೋಗಾಸನ ಕ್ರೀಡೆ ವಿಸ್ತರಿಸಿದಂತೆ, ಹೊಸ ಸಾಧ್ಯತೆಗಳು ಸಹ ಹೊರಹೊಮ್ಮುತ್ತವೆ, ಇದು ಆಟಗಾರರು, ತರಬೇತುದಾರರು, ಕ್ರೀಡಾ ವಿಜ್ಞಾನಿಗಳು, ಸಂಶೋಧಕರು ಮತ್ತು ಕಾರ್ಯಕ್ರಮ ಆಯೋಜನೆ ವ್ಯವಸ್ಥಾಪಕರಿಗೆ ವೃತ್ತಿ ಅವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು.

ನಿರಾಶಾವಾದಿ ಗುಂಪುಗಳನ್ನು ಅವರು ಟೀಕಿಸಿದರು. ಸ್ವಾವಲಂಬನೆ ಹೆಚ್ಚಿಸಲು ಆಧುನಿಕ ಸಂಪರ್ಕಕ್ಕೆ ಒತ್ತು ನೀಡಲಾಗುತ್ತಿದೆ. ಸಮರ್ಪಿತ ಸರಕು ಕಾರಿಡಾರ್, ಬುಲೆಟ್ ರೈಲು ಮತ್ತು ವಡೋದರಾ-ಮುಂಬೈ ಎಕ್ಸ್‌ಪ್ರೆಸ್‌ವೇಯಂತಹ ಬೃಹತ್ ಯೋಜನೆಗಳು ಕೈಗಾರಿಕಾ ಮತ್ತು ವಾಣಿಜ್ಯ ಬೆಳವಣಿಗೆಗೆ ನಿರ್ಣಾಯಕವಾಗಿವೆ ಎಂದು ಅವರು ತಿಳಿಸಿದರು.

ಛೋಟಾ ಉದೇಪುರ, ನರ್ಮದಾ, ಭರೂಚ್ ಮತ್ತು ಟ್ಯಾಪಿ ಬುಡಕಟ್ಟು ಪ್ರದೇಶಗಳಲ್ಲಿ ಚತುಷ್ಪಥ ಹೆದ್ದಾರಿಗಳನ್ನು ನಿರ್ಮಿಸುವ ಮೂಲಕ ಸರ್ಕಾರವು ಪ್ರಯಾಣದ ಸಮಯ ಮತ್ತು ಸರಕು ಸಾಗಣೆ ವೆಚ್ಚವನ್ನು ಕಡಿಮೆ ಮಾಡುತ್ತಿದೆ. ಬುಡಕಟ್ಟು ಮತ್ತು ಗ್ರಾಮೀಣ ಪ್ರದೇಶಗಳಿಗೆ ಆಧುನಿಕ ಸಂಪರ್ಕ ತರುವುದರಿಂದ ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಉತ್ತಮ ಆದಾಯದ ಅವಕಾಶಗಳಿಗೆ ಸೌಲಭ್ಯಗಳ ಪ್ರವೇಶವನ್ನು ಖಚಿತಪಡಿಸುತ್ತದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದಮನ್‌ನಲ್ಲಿ ಸುಮಾರು 2,970 ಕೋಟಿ ರೂ. ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಅಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಅವರು ತಮ್ಮ ಹಿಂದಿನ ಭೇಟಿಯನ್ನು ನೆನಪಿಸಿಕೊಂಡರು, ಆಗ ತಾವು ವ್ಯಕ್ತಪಡಿಸಿದ್ದ ಭಾವನೆಗಳು ಈಗ ವಾಸ್ತವವಾಗಿವೆ. ಈ ಪ್ರದೇಶವು ಈಗ ಹೆಮ್ಮೆಯಿಂದ ದೇಶದ ವೈವಿಧ್ಯತೆ ಮತ್ತು ಚೈತನ್ಯವನ್ನು ಪ್ರತಿನಿಧಿಸುತ್ತಿದೆ. "ದಮನ್ 'ಮಿನಿ ಇಂಡಿಯಾ'ದ ಒಂದು ರೋಮಾಂಚಕ ಉದಾಹರಣೆಯಾಗಿದೆ, ಇಲ್ಲಿ ವೈವಿಧ್ಯಮಯ ಪ್ರದೇಶಗಳ ಜನರ ಉಪಸ್ಥಿತಿಯು ಇಡೀ ರಾಷ್ಟ್ರದ ಸುಂದರ ನೋಟವನ್ನು ನೀಡುತ್ತಿದೆ" ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು.

ಕೇಂದ್ರಾಡಳಿತ ಪ್ರದೇಶಗಳ ಆಡಳಿತಾತ್ಮಕ ಪ್ರಗತಿಯ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ತೃಪ್ತಿ ವ್ಯಕ್ತಪಡಿಸಿದರು. ದಮನ್, ದಿಯು, ದಾದ್ರಾ ಮತ್ತು ನಗರ ಹವೇಲಿಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಲಾಗುತ್ತಿರುವ ಉತ್ತಮ ಆಡಳಿತ ಮಾದರಿಗಳನ್ನು ಅವರು ಶ್ಲಾಘಿಸಿದರು. ಸಂಪರ್ಕ, ಆರೋಗ್ಯ, ಶಿಕ್ಷಣ, ಪ್ರವಾಸೋದ್ಯಮ ಮತ್ತು ನಗರ ಮೂಲಸೌಕರ್ಯಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳನ್ನು ಉದ್ಘಾಟಿಸಿ, ಶಂಕುಸ್ಥಾಪನೆ ನೆರವೇರಿಸಿದರು. ನಂತರ ದೂರದೃಷ್ಟಿಯ ದೃಷ್ಟಿಕೋನ ಹಂಚಿಕೊಂಡ ಅವರು, ದಮನ್‌ನ ಅಭಿವೃದ್ಧಿಯನ್ನು ಸಿಂಗಾಪುರದ ಆರ್ಥಿಕ ಪ್ರಗತಿಗೆ ಹೋಲಿಸಿದರು. 'ನಮೋ ವಿಮಾನ ನಿಲ್ದಾಣ' ಮತ್ತು 'ದಮನಗಂಗಾ ಸೇತುವೆ'ಯಂತಹ ಪ್ರಮುಖ ಯೋಜನೆಗಳು ಕೇವಲ ಸ್ಥಳೀಯ ಬೆಳವಣಿಗೆಗಳಲ್ಲ, ಬದಲಾಗಿ ಜಾಗತಿಕ ವೇದಿಕೆಯಲ್ಲಿ ಈ ಪ್ರದೇಶಕ್ಕೆ ಹೊಸ ಗುರುತು ನೀಡುವ ಪ್ರಮುಖ ಮೈಲಿಗಲ್ಲುಗಳಾಗಿವೆ. ಇಂತಹ ಮೂಲಸೌಕರ್ಯ ಉಪಕ್ರಮಗಳ ಮೂಲಕ, ಭವಿಷ್ಯದ ಆಕಾಂಕ್ಷೆಗಳಿಗೆ ಬಲಿಷ್ಠ ಬುನಾದಿ ಹಾಕಲಾಗುತ್ತಿದೆ ಎಂದರು.

ಈ ಕೇಂದ್ರಾಡಳಿತ ಪ್ರದೇಶದ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಪರಿವರ್ತನೆಗಳು ನಡೆಯುತ್ತಿವೆ. ಹಿಂದೆ ಇಲ್ಲಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಬೇರೆಡೆಗೆ ವಲಸೆ ಹೋಗಬೇಕಾಗಿತ್ತು. ಆದರೆ ಈಗ ಕೇಂದ್ರಾಡಳಿತ ಪ್ರದೇಶವು ಶಿಕ್ಷಣ ಕ್ಷೇತ್ರದಲ್ಲಿ ಸ್ಥಿರವಾಗಿ ಮತ್ತು ಸದೃಢವಾಗಿ ಮುಂದುವರಿಯುತ್ತಿದೆ. 'ಸರಸ್ವತಿ ಸೈಕಲ್ ಯೋಜನೆ' ಮತ್ತು 'ಸರಸ್ವತಿ ವಿದ್ಯಾ ಯೋಜನೆ'ಯಂತಹ ಕಾರ್ಯಕ್ರಮಗಳು ಈ ಪ್ರದೇಶದ ಹೆಣ್ಣು ಮಕ್ಕಳಿಗೆ ಪ್ರಯೋಜನಕಾರಿ ಎಂಬುದು ಸಾಬೀತಾಗುತ್ತಿವೆ. 'ಖೇಲೋ ಇಂಡಿಯಾ'ದಂತಹ ಉಪಕ್ರಮಗಳಿಂದ ಕ್ರೀಡೆಗಳು ಮಹಾನಗರಗಳ ಮಿತಿ ದಾಟಿ ಹಳ್ಳಿಗಳು, ಪಟ್ಟಣಗಳು ಮತ್ತು ಸಣ್ಣ ಪ್ರದೇಶಗಳಿಗೆ ವಿಸ್ತರಿಸಿವೆ. ಡಿಯು ಪ್ರಮುಖ 'ಬೀಚ್ ಕ್ರೀಡಾ' ತಾಣವಾಗಿ ಹೊರಹೊಮ್ಮುತ್ತಿದ್ದು, ಕ್ರೀಡಾ ಪ್ರವಾಸೋದ್ಯಮಕ್ಕೆ ಹೊಸ ಗುರುತು ನೀಡುತ್ತಿದೆ ಎಂದು ಪ್ರಧಾನ ಮಂತ್ರಿ ತಿಳಿಸಿದರು.

# ಶೌರ್ಯಕ್ಕೆ ಗೌರವ...

*ಭಯೋತ್ಪಾದಕರು ಮತ್ತು ಬಂಡುಕೋರರಿಂದ ರಾಷ್ಟ್ರದ ಆಂತರಿಕ ಹಾಗೂ ಬಾಹ್ಯ ಭದ್ರತೆಗೆ ಎದುರಾಗುವ ಸವಾಲುಗಳಿಗೆ ನಮ್ಮ ಸೈನಿಕರು, ಕೇಂದ್ರ ಸಶಸ್ತ್ರ ಪಡೆಗಳ ಸಿಬ್ಬಂದಿ ಮತ್ತು ಪೊಲೀಸ್ ಅಧಿಕಾರಿಗಳು ಅಪ್ರತಿಮ ಶೌರ್ಯ, ಅದಮ್ಯ ಧೈರ್ಯ ಮತ್ತು ಅಸಾಧಾರಣ ನಾಯಕತ್ವ ತೋರುತ್ತಾ ಬಂದಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 2026 ಜೂನ್ 8ರಂದು ರಾಷ್ಟ್ರಪತಿ ಭವನದಲ್ಲಿ ನಡೆದ ರಕ್ಷಣಾ ಪಡೆಗಳ ಪ್ರಶಸ್ತಿ ಪ್ರದಾನ ಸಮಾರಂಭ 2026(ಹಂತ-I)ರಲ್ಲಿ ಅಂತಹ 51 ವೀರ ಯೋಧರನ್ನು ಸನ್ಮಾನಿಸಿದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಮಾರಂಭದಲ್ಲಿ ಭಾಗವಹಿಸಿ ಅವರ ಅದಮ್ಯ ಧೈರ್ಯ, ಅಪ್ರತಿಮ ಶೌರ್ಯ, ಕರ್ತವ್ಯ ಸಮರ್ಪಣೆ ಮತ್ತು ರಾಷ್ಟ್ರಕ್ಕೆ ನೀಡಿದ ನಿಸ್ವಾರ್ಥ ಸೇವೆಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.*

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಕ್ಷಣಾ ಪಡೆಗಳು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು ಮತ್ತು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಪೊಲೀಸ್ ಪಡೆಗಳ ವೀರರಿಗೆ ಪದಕಗಳನ್ನು ಪ್ರದಾನ ಮಾಡಿದರು. ಇದರಲ್ಲಿ 7 ಕೀರ್ತಿ ಚಕ್ರಗಳು(2 ಮರಣೋತ್ತರ), 15 ವೀರ ಚಕ್ರಗಳು(3 ಮರಣೋತ್ತರ) ಮತ್ತು 29 ಶೌರ್ಯ ಚಕ್ರಗಳು(1 ಮರಣೋತ್ತರ) ಸೇರಿವೆ.



## ಲ್ಯಾನ್ಸ್ ನಾಯಕ್ ಮೀನಾಚಿ ಸುಂದರಂ ಎ, ಕೀರ್ತಿ ಚಕ್ರ

ಆರ್ಟಿಲರಿ ರೆಜಿಮೆಂಟ್‌ನ ಲ್ಯಾನ್ಸ್ ನಾಯಕ್ ಮೀನಾಚಿ ಸುಂದರಂ ಎ ಅವರು ಗಂಭೀರ ಗಾಯಗಳಾಗಿದ್ದರೂ ಧೃತಿಗೆಡದೆ ಕುಲ್ಗಾಮ್‌ನಲ್ಲಿ ಒಬ್ಬ ಭಯೋತ್ಪಾದಕನನ್ನು ಹೊಡೆದುರುಳಿಸಿದರು.



## ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್, ಫ್ಲೈಯಿಂಗ್ ಪೈಲಟ್, ಕೀರ್ತಿ ಚಕ್ರ

ಭಾರತದ ಮೊದಲ ಮಾನವ ಬಾಹ್ಯಾಕಾಶ ಹಾರಾಟ ಮಿಷನ್ ಗಗನಯಾನದ ನಾಲ್ವರು 'ಗಗನಯಾತ್ರಿ'ಗಳಲ್ಲಿ ಒಬ್ಬರಾಗಿ ಆಯ್ಕೆಯಾದ ಪ್ರಶಾಂತ್ ಅವರು, ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡುವ ಅಚಲ ಸಂಕಲ್ಪ ಪ್ರದರ್ಶಿಸಿದರು. ಈ ಅದಮ್ಯ ಧೈರ್ಯ ಮತ್ತು ಶೌರ್ಯಕ್ಕಾಗಿ ಅವರಿಗೆ ಕೀರ್ತಿ ಚಕ್ರ ನೀಡಲಾಯಿತು. ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಆಕ್ಸಿಯಮ್ -4 ಮಿಷನ್‌ಗೆ ಸ್ಟ್ಯಾಂಡ್‌ಬೈ ಮಿಷನ್ ಪೈಲಟ್ ಆಗಿಯೂ ಸೇವೆ ಸಲ್ಲಿಸಿದರು. ಅವರು ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಗಳಲ್ಲಿ ತರಬೇತಿ ಪಡೆದರು, ಅಸಾಧಾರಣ ದೈಹಿಕ ಸಹಿಷ್ಣುತೆ, ಮಾನಸಿಕ ಧೈರ್ಯ ಮತ್ತು ಏಕಾಗ್ರತೆ ಪ್ರದರ್ಶಿಸಿದರು. ಆಕ್ಸಿಯಮ್ -4 ಮಿಷನ್‌ಗೆ ಸಿದ್ಧತೆಗಳ ಸಮಯದಲ್ಲಿ ಅವರು, ಗೊತ್ತಿಲ್ಲದ ಅಪಾಯಗಳನ್ನು ಎದುರಿಸುವ ಇಚ್ಛಾಶಕ್ತಿ ಪ್ರದರ್ಶಿಸಿದರು, ಹೆಚ್ಚಿನ ಅಪಾಯದ ಸಂದರ್ಭಗಳಲ್ಲಿ ಶಾಂತತೆ ಕಾಯ್ದುಕೊಂಡಿದ್ದರು.

## ಲೆಫ್ಟಿನೆಂಟ್ ಶಶಾಂಕ್ ತಿವಾರಿ, ಕೀರ್ತಿ ಚಕ್ರ (ಮರಣೋತ್ತರ)

ಉತ್ತರ ಸಿಕ್ಕಿಂನ ಎತ್ತರದ ಪ್ರದೇಶದಲ್ಲಿ ಸೇನಾ ಸೇವಾ ದಳದ (ಸಿಕ್ಕಿಂ ಸ್ಕೌಟ್ಸ್) ಲೆಫ್ಟಿನೆಂಟ್ ಶಶಾಂಕ್ ತಿವಾರಿ ಗಸ್ತು ತಿರುಗುತ್ತಿದ್ದಾಗ, ತಂಡದ ಸದಸ್ಯ ಅಗ್ನಿವೀರ್ ಸ್ಟೀಫನ್ ಸುಬ್ಬಾ ಸಮತೋಲನ ಕಳೆದುಕೊಂಡು ನದಿಗೆ ಜಾರಿದರು. ತಮ್ಮ ಸುರಕ್ಷತೆ ಲೆಕ್ಕಿಸದೆ, ಲೆಫ್ಟಿನೆಂಟ್ ಶಶಾಂಕ್ ತಿವಾರಿ ನದಿಗೆ ಹಾರಿ ಸುಬ್ಬಾ ಅವರನ್ನು ದಡಕ್ಕೆ ಕರೆತರುವಲ್ಲಿ ಯಶಸ್ವಿಯಾದರು. ಅಗ್ನಿವೀರ್ ಸ್ಟೀಫನ್ ಸುಬ್ಬಾ ಅವರ ಜೀವ ಉಳಿಸಿದರೂ, ಬಲವಾದ ಪ್ರವಾಹಕ್ಕೆ ಸಿಕ್ಕಿಕೊಂಡ ತಿವಾರಿ ತನ್ನನ್ನು ತಾನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ತನ್ನ ಅಧೀನ ಅಧಿಕಾರಿಯನ್ನು ರಕ್ಷಿಸುವಾಗ ಬಂಡೆಗಳಿಗೆ ಡಿಕ್ಕಿ ಹೊಡೆದು ಗಂಭೀರ ಗಾಯಗಳಿಂದ ಅವರು ಸಾವನ್ನಪ್ಪಿದರು. ಅವರ ಅಸಾಧಾರಣ ಶೌರ್ಯ, ನಿಸ್ವಾರ್ಥತೆ ಮತ್ತು ಅಚಲ ಧೈರ್ಯಕ್ಕಾಗಿ ಅವರಿಗೆ ಮರಣೋತ್ತರವಾಗಿ ಕೀರ್ತಿ ಚಕ್ರ ನೀಡಲಾಯಿತು.



## ನೈಬ್ ಸುಬೇದಾರ್ ದೋಲೇಶ್ವರ ಸುಬ್ಬಾ, ಕೀರ್ತಿ ಚಕ್ರ

ಕಿಶ್ತ್ ವಾರ್ ಜಿಲ್ಲೆಯ ದುರ್ಗಮ ಮತ್ತು ನಿರ್ಜನ ಅರಣ್ಯ ಪ್ರದೇಶದಲ್ಲಿ ಅದ್ಭುತ ಮನಸ್ಸಿನ ಉಪಸ್ಥಿತಿ ಮತ್ತು ಶೌರ್ಯ ಪ್ರದರ್ಶಿಸಿದ ಅವರು ಒಂದೇ ಕಾರ್ಯಾಚರಣೆಯಲ್ಲಿ ಇಬ್ಬರು ಭಯೋತ್ಪಾದಕರನ್ನು ನಿರ್ಮೂಲನೆ ಮಾಡಿದರು.

*ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶೌರ್ಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದ ಸಮಾರಂಭ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.*

**ಪ್ರಧಾನ ಮಂತ್ರಿ ಮೋದಿ ಅಧ್ಯಕ್ಷತೆಯಲ್ಲಿ ನೀತಿ ಆಯೋಗದ ಆಡಳಿತ ಮಂಡಳಿ ಸಭೆ**

# ಭಾರತದ ಬೆಳವಣಿಗೆಯ ಯಶೋಗಾಥೆ ಜಗತ್ತಿಗೆ ಸ್ಫೂರ್ತಿ ನೀಡುತ್ತಲೇ ಇದೆ

*ನೀತಿ ಆಯೋಗವು ಭಾರತದ ಅಡಿಪಾಯವನ್ನು ಬಲಪಡಿಸುವ ಮತ್ತು ಅಭಿವೃದ್ಧಿಯ ಪ್ರತಿಯೊಂದು ಅಂಶದಲ್ಲೂ ಜಾಗತಿಕವಾಗಿ ಸ್ಪರ್ಧಿಸಲು ದೇಶವನ್ನು ಸಿದ್ಧಪಡಿಸುವ ಸರ್ಕಾರದ ದೃಷ್ಟಿಕೋನವನ್ನು ಕಾರ್ಯಗತಗೊಳಿಸುವ ಪ್ರಮುಖ ಸಂಸ್ಥೆಯಾಗಿದೆ. ಇಂದು ಭಾರತವು ಸ್ಪರ್ಧಿಸುವುದಲ್ಲದೆ, ಪ್ರತಿಯೊಂದು ಪ್ರಮುಖ ಆರ್ಥಿಕತೆಯನ್ನು ಮೀರಿ ಮುಂದೆ ಸಾಗಲು ಶ್ರಮಿಸುತ್ತಿದೆ. 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಗುರಿಯತ್ತ ಮುನ್ನಡೆಯುತ್ತಿದೆ. ಜೂನ್ 11ರಂದು ನಡೆದ ನೀತಿ ಆಯೋಗದ 11ನೇ ಆಡಳಿತ ಮಂಡಳಿ ಸಭೆಯಲ್ಲಿ, ಭಾರತದ ಅಭಿವೃದ್ಧಿಯ ಯಶೋಗಾಥೆ ಇಡೀ ಜಗತ್ತಿಗೆ ಸ್ಫೂರ್ತಿ ನೀಡುತ್ತಲೇ ಇದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು.*

ನವದೆಹಲಿಯ ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆದ 11ನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ವಹಿಸಿದ್ದರು. 28 ರಾಜ್ಯಗಳು ಮತ್ತು 5 ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸುವ ಮುಖ್ಯಮಂತ್ರಿಗಳು, ಲೆಫ್ಟಿನೆಂಟ್ ಗವರ್ನರ್‌ಗಳು ಮತ್ತು ಆಡಳಿತಾಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. 28 ರಾಜ್ಯಗಳ ಮುಖ್ಯಮಂತ್ರಿಗಳು ನೀತಿ ಆಯೋಗದ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿದ ಮೊದಲ ಸಂದರ್ಭ ಇದಾಗಿದೆ. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನ ಮಂತ್ರಿ ಮೋದಿ, ಅನೇಕ ಪ್ರಮುಖ ಆರ್ಥಿಕತೆಗಳು ಅನಿಶ್ಚಯ ಮತ್ತು ಆರ್ಥಿಕ ಸವಾಲುಗಳನ್ನು ಎದುರಿಸುತ್ತಿರುವ ಸಮಯದಲ್ಲಿ, ಭಾರತದ ಬೆಳವಣಿಗೆಯ ಯಶೋಗಾಥೆ ಜಗತ್ತಿಗೆ ಸ್ಫೂರ್ತಿ ನೀಡುತ್ತಿದೆ. ಸ್ವಾವಲಂಬನೆ ಸಾಧಿಸುವ ರಾಷ್ಟ್ರದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಜಾಗತಿಕ ಅತ್ಯುತ್ತಮ ಅಭ್ಯಾಸಗಳನ್ನು ವಿಶೇಷವಾಗಿ ನವೀಕರಿಸಬಹುದಾದ ಇಂಧನ ವಲಯದಲ್ಲಿ ಅಳವಡಿಸಿಕೊಳ್ಳುವ ಮತ್ತು ಕಾರ್ಯಗತಗೊಳಿಸುವ ಮಹತ್ವವಿದೆ ಎಂದು ಹೇಳಿದರು.

ವಿಕಸಿತ ಭಾರತದ ಗುರಿ ಸಾಧಿಸಲು ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಕೆಲಸ ಮಾಡಬೇಕು. ವಿಕಸಿತ ಭಾರತದ ದೃಷ್ಟಿಕೋನವು ಪ್ರತಿಯೊಂದು ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿಯ ಸಾಮೂಹಿಕ ಸಂಕಲ್ಪವಾಗಬೇಕು ಎಂದು ಪ್ರಧಾನ ಮಂತ್ರಿ ಒತ್ತಿ ಹೇಳಿದರು.

## ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕ್ರಮಗಳ ಕುರಿತು ಚರ್ಚೆ

ನೀತಿ ಆಯೋಗದ ಆಡಳಿತ ಮಂಡಳಿ ಸಭೆಯಲ್ಲಿ ಮುಖ್ಯಮಂತ್ರಿಗಳು ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳು ಸಾಮೂಹಿಕವಾಗಿ ಮಾನವ ಅಭಿವೃದ್ಧಿಯ ಮಾದರಿಗಳ ಕುರಿತು ಚರ್ಚಿಸಿದರು. ಹೆಚ್ಚುವರಿಯಾಗಿ, ದೇಶಾದ್ಯಂತ ಉದ್ಯಮಶೀಲತೆ ಮತ್ತು ಕೌಶಲ್ಯ ಅಭಿವೃದ್ಧಿ ಹೆಚ್ಚಿಸಲು ಮತ್ತು ಸುಸ್ಥಿರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕ್ರಮಗಳ ಕುರಿತು ಸಭೆಯು ಚರ್ಚಿಸಿತು. ನೀತಿ ಆಯೋಗದ ಆಡಳಿತ ಮಂಡಳಿಯು 2025 ಡಿಸೆಂಬರ್ 26ರಿಂದ 28ರ ವರೆಗೆ ನಡೆದ 5ನೇ ರಾಷ್ಟ್ರೀಯ ಮುಖ್ಯ ಕಾರ್ಯದರ್ಶಿಗಳ ಸಮ್ಮೇಳನದ ಶಿಫಾರಸುಗಳ ಕುರಿತು ಚರ್ಚೆ ನಡೆಸಿತು.

*ನೀತಿ ಆಯೋಗದ 11ನೇ ಆಡಳಿತ ಮಂಡಳಿ ಸಭೆ ಕುರಿತ ಪತ್ರಿಕಾಗೋಷ್ಠಿ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.*






> **ಸಹಕಾರಿ ಒಕ್ಕೂಟ ವ್ಯವಸ್ಥೆಯ ಮನೋಭಾವದಿಂದ ಪ್ರೇರಿತರಾಗಿ, ಭಾರತದ ಅಭಿವೃದ್ಧಿ ಪ್ರಯಾಣವನ್ನು ವೇಗಗೊಳಿಸಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯಗಳ ಸಾಮೂಹಿಕ ಪ್ರಯತ್ನಗಳು 'ವಿಕಸಿತ ಭಾರತ'ದ ನಮ್ಮ ಹಂಚಿಕೆಯ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*

## ಪ್ರಮುಖ ವಿಷಯಗಳ ಕುರಿತು ಪ್ರಧಾನ ಮಂತ್ರಿ ಮೋದಿ ಅವರ ಸೂಚನೆಗಳು

- ಯುವ ಜನರು ಮತ್ತು ಎಂಎಸ್‌ಎಂಇಗಳಿಗೆ ಅವಕಾಶಗಳನ್ನು ಸೃಷ್ಟಿಸಲು, ಭಾರತ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿರುವ ದೇಶಗಳಿಂದ ಹೂಡಿಕೆಯನ್ನು ಸಕ್ರಿಯವಾಗಿ ಆಕರ್ಷಿಸಲು ರಾಜ್ಯಗಳನ್ನು ಪ್ರೋತ್ಸಾಹಿಸಬೇಕು.
- ರಾಜ್ಯಗಳು 'ಒಂದು ಜಿಲ್ಲೆ, ಒಂದು ಉತ್ಪನ್ನ' ಉಪಕ್ರಮವನ್ನು ಬಲಪಡಿಸಬೇಕು, ರಕ್ಷಣಾ ಉತ್ಪಾದನೆಯಲ್ಲಿನ ಅವಕಾಶಗಳನ್ನು ಬಳಸಿಕೊಳ್ಳಬೇಕು.
- ಎಐ ತಂತ್ರಜ್ಞಾನವನ್ನು ಒಂದು ಅವಕಾಶವೆಂದು ನೋಡಬೇಕು, ಕಾರ್ಯಪಡೆಯು ಭವಿಷ್ಯಕ್ಕೆ ಸಿದ್ಧವಾಗಿರುವ ಕೌಶಲ್ಯಗಳೊಂದಿಗೆ ಸಜ್ಜುಗೊಳ್ಳಬೇಕು.
- ಮಾದಕ ವಸ್ತುಗಳ ದುರುಪಯೋಗ ಮತ್ತು ಸೈಬರ್ ವಂಚನೆಯಂತಹ ಉದಯೋನ್ಮುಖ ಸಾಮಾಜಿಕ ಸವಾಲುಗಳನ್ನು ನಿಭಾಯಿಸಲು ಸಂಘಟಿತ ಪ್ರಯತ್ನಗಳು ಅಗತ್ಯವಿದೆ.
- ಎಲ್ ನಿನೊ ಬಗ್ಗೆ ಕಳವಳಗಳನ್ನು ಎತ್ತಿ ತೋರಿಸಿದ ಪ್ರಧಾನ ಮಂತ್ರಿ, ರಾಜ್ಯಗಳು ನೀರಿನ ಸಂರಕ್ಷಣೆ ಮತ್ತು ನೈಸರ್ಗಿಕ ಕೃಷಿಯನ್ನು ಉತ್ತೇಜಿಸಬೇಕು ಎಂದು ಒತ್ತಾಯಿಸಿದರು.
- ಜಾಗತಿಕ ಭೌಗೋಳಿಕ-ರಾಜಕೀಯ ಬಿಕ್ಕಟ್ಟುಗಳನ್ನು ತಡೆದುಕೊಳ್ಳಲು ಮತ್ತು ಭಾರತದ ಚೇತರಿಕೆಯನ್ನು ಬಲಪಡಿಸುವ ವಿಷಯದಲ್ಲಿ ರಾಜ್ಯಗಳು ಕೇಂದ್ರದೊಂದಿಗೆ ಒಗ್ಗಟ್ಟು ಪ್ರದರ್ಶಿಸಿದವು.

ಯುವ ಜನರೇ ದೇಶದ ಅತಿದೊಡ್ಡ ಆಸ್ತಿ. ಸುಮಾರು 70 ಕೋಟಿ ಭಾರತೀಯರು 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಇದೊಂದು ಜನಸಂಖ್ಯಾ ಲಾಭಾಂಶವಾಗಿದೆ. ಭವಿಷ್ಯದ ಅವಕಾಶಗಳು ಮತ್ತು ಸವಾಲುಗಳಿಗೆ ಯುವ ಜನರನ್ನು ಸಿದ್ಧಪಡಿಸುವ ಶಿಕ್ಷಣ, ಕೌಶಲ್ಯ ಮತ್ತು ಸಾಮರ್ಥ್ಯವರ್ಧನೆ ಉಪಕ್ರಮಗಳ ಮೂಲಕ ಅಭಿವೃದ್ಧಿ ಲಾಭಾಂಶವಾಗಿ ಪರಿವರ್ತಿಸುವತ್ತ ಗಮನ ಹರಿಸಬೇಕೆಂದು ಪ್ರಧಾನ ಮಂತ್ರಿ ಅವರು ರಾಜ್ಯಗಳನ್ನು ಒತ್ತಾಯಿಸಿದರು.

ವಿಕಸಿತ ಭಾರತ @2047ಕ್ಕಾಗಿ ಎಲ್ಲರನ್ನೂ ಒಳಗೊಂಡ ಮಾನವ ಅಭಿವೃದ್ಧಿ - ಇದು ಈ ವರ್ಷದ ವಸ್ತು ವಿಷಯವಾಗಿದೆ. ಇದರಲ್ಲಿ 28 ರಾಜ್ಯಗಳು ಮತ್ತು 5 ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸುವ ಮುಖ್ಯಮಂತ್ರಿಗಳು, ಲೆಫ್ಟಿನೆಂಟ್ ಗವರ್ನರ್‌ಗಳು ಮತ್ತು ಆಡಳಿತಗಾರರು ಭಾಗವಹಿಸಿದ್ದರು. ಮುಖ್ಯಮಂತ್ರಿಗಳು, ಲೆಫ್ಟಿನೆಂಟ್ ಗವರ್ನರ್‌ಗಳು ಮತ್ತು ಆಡಳಿತಗಾರರು ಪ್ರಧಾನ ಮಂತ್ರಿ ಮೋದಿ ಅವರನ್ನು 12 ವರ್ಷಗಳ ಅಧಿಕಾರಾವಧಿ ಪೂರೈಸಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು.

ಚರ್ಚೆಗಳು ರಚನಾತ್ಮಕವಾಗಿದ್ದವು. ಇವೆಲ್ಲವೂ ರಾಜ್ಯಗಳ ಆಕಾಂಕ್ಷೆಗಳು, ಭರವಸೆಗಳು, ಅನುಭವಗಳು, ಉತ್ತಮ ಅಭ್ಯಾಸಗಳು ಮತ್ತು ಸವಾಲುಗಳನ್ನು ಪ್ರತಿಬಿಂಬಿಸುತ್ತಿವೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು.

# ಸವಾಲಿನ ಸಮಯದಲ್ಲಿ ರಾಷ್ಟ್ರವನ್ನು ಮುನ್ನಡೆಸಿದ ಧೀಮಂತ

***ಮಹಾನ್ ರಾಜನೀತಿ ತಜ್ಞ, ಶಿಕ್ಷಣ ತಜ್ಞ ಮತ್ತು ಅರ್ಥಶಾಸ್ತ್ರಜ್ಞ ಗುಲ್ಜಾರಿ ಲಾಲ್ ನಂದಾ ಅವರು 2 ಪ್ರತ್ಯೇಕ ಸಂದರ್ಭಗಳಲ್ಲಿ ಭಾರತದ ಹಂಗಾಮಿ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ ಏಕೈಕ ವ್ಯಕ್ತಿ. ಅಧಿಕಾರದಲ್ಲಿದ್ದ ಪ್ರಧಾನ ಮಂತ್ರಿ ಅವರು ಅನಿರೀಕ್ಷಿತವಾಗಿ ನಿಧನರಾದ ಸವಾಲಿನ ಸಮಯದಲ್ಲಿ ಅವರು ರಾಷ್ಟ್ರದ ಜವಾಬ್ದಾರಿ ವಹಿಸಿಕೊಂಡರು. ಸರಳತೆ ಮತ್ತು ರಾಷ್ಟ್ರೀಯ ಸೇವೆಯ ಅಚಲ ಬದ್ಧತೆಗೆ ಹೆಸರುವಾಸಿಯಾದ ನಂದಾ ಅವರನ್ನು 1997ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನ ನೀಡಿ ಗೌರವಿಸಲಾಯಿತು. ದೇಶದ ಅಭಿವೃದ್ಧಿ ಮತ್ತು ಸಮಾಜದ ದುರ್ಬಲ ವರ್ಗಗಳ ಉನ್ನತಿಗಾಗಿ ಅವರು ಹೊಂದಿದ್ದ ದೂರದೃಷ್ಟಿಯು ಇಂದಿಗೂ ರಾಷ್ಟ್ರಕ್ಕೆ ಸ್ಫೂರ್ತಿ ನೀಡುತ್ತಿದೆ.***



**ಜನನ: ಜುಲೈ 4, 1898 | ಮರಣ: ಜನವರಿ 15, 1998**

ತತ್ವಬದ್ಧ ರಾಜಕಾರಣದ ಅತ್ಯುತ್ತಮ ಮಾದರಿಯಾಗಿದ್ದ ಗುಲ್ಜಾರಿ ಲಾಲ್ ನಂದಾ, ಹಂಗಾಮಿ ಪ್ರಧಾನ ಮಂತ್ರಿಯಾಗಿ 2 ಬಾರಿ ರಾಷ್ಟ್ರವನ್ನು ಮುನ್ನಡೆಸಿದರು, ಆದರೆ ಅವರು ಉನ್ನತ ಹುದ್ದೆಯೊಂದಿಗೆ ಸಿಗುವ ಸವಲತ್ತುಗಳು ಅಥವಾ ಸೌಕರ್ಯಗಳನ್ನು ಎಂದಿಗೂ ಬಯಸಲಿಲ್ಲ. ಸಮರ್ಪಿತ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಭಾರತದ ಸ್ವಾತಂತ್ರ್ಯ ಹೋರಾಟ ಸಮಯದಲ್ಲಿ ಜೈಲು ಶಿಕ್ಷೆ ಅನುಭವಿಸಿದರು. ತಮ್ಮ ಜೀವನದುದ್ದಕ್ಕೂ ಕಾರ್ಮಿಕರ ಹಕ್ಕುಗಳಿಗಾಗಿ ವಕೀಲರಾಗಿ ಹೋರಾಟ ನಡೆಸಿದರು. ಸರ್ಕಾರದಲ್ಲಿ ಕೆಲವು ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದರೂ, ಅವರು ಗಮನಾರ್ಹವಾಗಿ ಸರಳತೆ ಮತ್ತು ನಮ್ರತೆಯ ಜೀವನವನ್ನು ಆರಿಸಿಕೊಂಡರು.

ಸಾರ್ವಜನಿಕ ಜೀವನದಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದರೂ, ಅವರು ಅಧಿಕಾರದ ಆಮಿಷಗಳಿಗೆ ಬಲಿಯಾಗಲಿಲ್ಲ. ತಮ್ಮ ಸಮಗ್ರತೆ ಅಥವಾ ಆದರ್ಶಗಳನ್ನು ಎಂದಿಗೂ ರಾಜಿ ಮಾಡಿಕೊಳ್ಳಲಿಲ್ಲ. ತಮ್ಮ ಸಾಧಾರಣ, ಸರಳ ಜೀವನಶೈಲಿಗೆ ಹೆಸರುವಾಸಿಯಾಗಿದ್ದ ಅವರು, ದೇಶದ ಹಲವಾರು ಪ್ರತಿಷ್ಠಿತ ಹುದ್ದೆಗಳನ್ನು ಅಲಂಕರಿಸಿದ ನಂತರವೂ ತಮ್ಮ ಇಡೀ ಜೀವನವನ್ನು ಬಾಡಿಗೆ ಮನೆಯಲ್ಲೇ ಕಳೆದಿದ್ದರು ಎಂಬುದು ವಾಸ್ತವ. 1898 ಜುಲೈ 4ರಂದು ಪಂಜಾಬ್‌ನ ಸಿಯಾಲ್‌ಕೋಟ್‌ನಲ್ಲಿ ಜನಿಸಿದ ಗುಲ್ಜಾರಿ ಲಾಲ್ ನಂದಾ ಅವರು ಲಾಹೋರ್, ಆಗ್ರಾ ಮತ್ತು ಅಲಹಾಬಾದ್‌ನಲ್ಲಿ ಶಿಕ್ಷಣ ಪಡೆದರು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ 1932ರಲ್ಲಿ ಅವರನ್ನು ಜೈಲಿಗೆ ಹಾಕಲಾಯಿತು. ನಂತರ ಅವರನ್ನು 1942ರಿಂದ 1944ರ ವರೆಗೆ ಮತ್ತೆ ಜೈಲಿಗೆ ಹಾಕಲಾಯಿತು. 1937ರಲ್ಲಿ ಅವರು ಬಾಂಬೆ ವಿಧಾನಸಭೆಗೆ ಆಯ್ಕೆಯಾದರು, 1937ರಿಂದ 1939ರ ವರೆಗೆ ಬಾಂಬೆ ಸರ್ಕಾರದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ನಂತರ, ಬಾಂಬೆ ಸರ್ಕಾರದ ಕಾರ್ಮಿಕ ಸಚಿವರಾಗಿ(1946–1950), ಅವರು ರಾಜ್ಯ ವಿಧಾನಸಭೆಯಲ್ಲಿ ಕಾರ್ಮಿಕ ವಿವಾದ ಮಸೂದೆಯನ್ನು ಯಶಸ್ವಿಯಾಗಿ ಪರಿಚಯಿಸಿದರು. ಸ್ವಾತಂತ್ರ್ಯದ ನಂತರ ಅವರು ರಾಷ್ಟ್ರ ರಾಜಕೀಯದಲ್ಲಿ ಸಕ್ರಿಯರಾಗಿ, ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು.

ಅವರು 1962 ಮತ್ತು 1963ರಲ್ಲಿ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವರಾಗಿ, 1963ರಿಂದ 1966ರ ವರೆಗೆ ಗೃಹ ಸಚಿವರಾಗಿ ಸೇವೆ ಸಲ್ಲಿಸಿದರು. ಪಂಡಿತ್ ಜವಾಹರಲಾಲ್ ನೆಹರು ಅವರ ಮರಣದ ನಂತರ, ಅವರು 1964 ಮೇ 27ರಂದು ಭಾರತದ ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು, 13 ದಿನಗಳ ಕಾಲ ಹಂಗಾಮಿ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ತಾಷ್ಕೆಂಟ್‌ನಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಮರಣದ ನಂತರ ಅವರು 1966 ಜನವರಿ 11ರಂದು ಮತ್ತೆ ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು, ಆಗಲೂ 13 ದಿನಗಳ ಕಾಲ ಹಂಗಾಮಿ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ಅವರ ಕೊನೆಯ ವರ್ಷಗಳಲ್ಲಿ ಸಕ್ರಿಯ ರಾಜಕೀಯದಿಂದ ನಿವೃತ್ತರಾಗಿ, ಸಮಾಜ ಕಲ್ಯಾಣ ಸೇವೆಗಳಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಅವರು ಉತ್ತಮ ಬರಹಗಾರರೂ ಆಗಿದ್ದರು. ಅವರು ಲೇಖಕರಾಗಿ ತಮ್ಮ ಪಾತ್ರವನ್ನು ಅದ್ಭುತವಾಗಿ ಪೂರೈಸಿದರು ಮತ್ತು ಹಲವಾರು ಕೃತಿಗಳನ್ನು ಬರೆದರು. 1998 ಜನವರಿ 15ರಂದು ಸುಮಾರು 100 ವರ್ಷ ವಯಸ್ಸಿನಲ್ಲಿ ಅವರು ನಿಧನರಾದರು. ಅವರ ಚಿತಾಭಸ್ಮವನ್ನು ಕುರುಕ್ಷೇತ್ರದಲ್ಲಿ ವಿಸರ್ಜನೆ ಮಾಡಬೇಕೆಂಬುದು ಅವರ ಕೊನೆಯ ಆಸೆಯಾಗಿತ್ತು. ಅವರ ಇಚ್ಛೆಯಂತೆ, ಅವರ ಮರಣದ ನಂತರ ಅವರ ಚಿತಾಭಸ್ಮವನ್ನು ಗುಲ್ಜಾರಿಲಾಲ್ ನಂದಾ ಸ್ಮಾರಕದಲ್ಲಿ ಇರಿಸಲಾಯಿತು. ಗುಲ್ಜರಿಲಾಲ್ ನಂದಾ ಸ್ಮಾರಕ ನಿರ್ಮಾಣಕ್ಕೆ 1999 ಜುಲೈ 4ರಂದು ಆಗಿನ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಕುರುಕ್ಷೇತ್ರ ಅಭಿವೃದ್ಧಿ ಮಂಡಳಿಯ ಮೇಲ್ವಿಚಾರಣೆಯಲ್ಲಿ ಶಂಕುಸ್ಥಾಪನೆ ನೆರವೇರಿಸಿದರು. ಅಂದಿನ ಕೇಂದ್ರ ಗೃಹ ಸಚಿವ ಎಲ್.ಕೆ. ಅಡ್ವಾಣಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಡಾ. ಮುರಳಿ ಮನೋಹರ್ ಜೋಶಿ ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



**Narendra Modi**
@narendramodi

धरती आबा भगवान बिरसा मुंडा जी के बलिदान दिवस पर उन्हें कोटि-कोटि नमन। उन्होंने जल, जंगल और जमीन की रक्षा के लिए विदेशी हुकूमत के विरुद्ध अदम्य साहस के साथ संघर्ष किया। उनका पूरा जीवन जनजातीय समाज के स्वाभिमान, संस्कृति और अधिकारों की रक्षा को समर्पित रहा। मातृभूमि के लिए सर्वस्व त्याग करने की उनकी गाथा देश की हर पीढ़ी में राष्ट्रभक्ति का संचार करती रहेगी।



**Rajnath Singh**
@rajnathsingh

डिफेंस कॉरिडोर के माध्यम से उत्तर प्रदेश, भारत के रक्षा क्षेत्र को आत्मनिर्भर बना रहा है। यहाँ लखनऊ में ब्रह्मोस का भी निर्माण हो रहा है। और भी कई तरह से उत्तर प्रदेश, डिफेंस मैन्युफैक्चरिंग को मज़बूत कर रहा है।



**Amit Shah**
@AmitShah

मोदी जी के नेतृत्व में केंद्रीय कैबिनेट ने दिल्ली-NCR को प्रदूषणमुक्त बनाने की दिशा में एक ऐतिहासिक निर्णय लिया है।
पेट्रोल-डीजल चालित लगभग 2 लाख ट्रकों और 16 हजार बसों को चरणबद्ध तरीके से BS-4, इलेक्ट्रिक एवं CNG वाहनों में परिवर्तित करने की इस महत्वाकांक्षी पहल के लिए ₹9,585 करोड़ की मंजूरी दी गई है। यह निर्णय दिल्ली-NCR की वायु को स्वच्छ बनाने की दिशा में महत्त्वपूर्ण सिद्ध होगा तथा पेट्रोलियम आयात पर निर्भरता कम करके देश की अर्थव्यवस्था को गति प्रदान करेगा।



**Nitin Gadkari**
@nitin_gadkari

भारत के सबसे लंबे समय तक निर्वाचित प्रधानमंत्री के रूप में ऐतिहासिक पड़ाव पूर्ण करने पर आज केंद्रीय कैबिनेट की बैठक में आदरणीय प्रधानमंत्री श्री @narendramodi जी का सभी सदस्यों द्वारा अभिनंदन किया गया।

प्रधानमंत्री जी की देशसेवा की यह ऐतिहासिक उपलब्धि 145 करोड़ देशवासियों के उन पर विश्वास और प्रेम का प्रतीक है। राष्ट्र निर्माण के लिए उनके मार्गदर्शन में और कार्यकुशल नेतृत्व में कार्य करना निरंतर प्रेरणादायी है।



**Giriraj Singh**
@girirajsinghbjp

PLI योजना के माध्यम से भारत का वस्त्र क्षेत्र नई ऊंचाइयों की ओर अग्रसर है।
राउंड-3 के तहत 22 नई कंपनियों को मंजूरी मिलने से ₹2,339 करोड़ के निवेश, ₹15,561 करोड़ के संभावित कारोबार तथा 36,217 नए रोजगार अवसरों का मार्ग प्रशस्त होगा।
बढ़ता निवेश, सशक्त उद्योग और रोजगार सृजन के साथ आत्मनिर्भर भारत का संकल्प निरंतर मजबूत हो रहा है।



**Gajendra Singh Shekhawat**
@gssjodhpur

प्रधानमंत्री श्री @narendramodi जी के नेतृत्व में पिछले 12 वर्षों में अन्नदाता किसानों का जीवन बदला है। बीज से बाजार तक किसान खुशहाली का बदलाव देख रहे हैं।

पीएम-किसान से सीधे मदद, e-NAM से बड़े बाजार, सॉयल हेल्थ कार्ड और नई तकनीकों से खेती ज्यादा आसान और फायदेमंद बनी है। फसल बीमा और मत्स्य संपदा जैसी योजनाओं ने भी अन्नदाता को नई ताकत दी है।

# PM: Will voice aspirations of Global South at G7 summit

TIMES NEWS NETWORK



File photo

PM Modi will participate in the G7 summit in France next week

**New Delhi:** At the G7 summit next week, India will not only speak for itself, but it will also give voice to the aspirations of the Global South, said PM Narendra Modi ahead of his departure to France where he will participate in the summit and also have bilateral engagements with French President Emmanual Macron. The PM will have bilateral meetings with US President Donald Trump and Canadian PM Mark Carney, along with other G7 leaders, on the margins.

After his meeting with Macron on Sunday in Nice, Modi will travel to Slovakia for the first ever visit by an Indian PM to the country since its independence in 1993 before returning to France for the Evian G7 summit on June 16-17.

"India's presence at the G7 reflects the trust our partners place in us and our growing global profile. This is the 8th consecutive G7 Summit to which India has been invited," said the PM, who will also participate in a special meeting on West Asia hosted by France on the sidelines of the summit. Leaders of Qatar, UAE and Egypt are also expected to attend the meeting.

Modi is expected to underscore India's concerns over the consequences of the West Asia conflict, including the energy crisis, for the Global South in his engagements while stressing the significance of freedom of navigation through the Strait of Hormuz. In an interview to **TOI** ahead of G7, French ambassador Thierry Mathou had signalled France's intent to have India's participation in a "defensive" coalition that would work with Iran to secure the Strait after the end of the conflict. Mathou had said that India's presence would send a powerful signal.

Ahead of his bilateral meeting with Macron, Modi said, "Earlier this year, President Macron visited India and we elevated our relationship to a Special Global Strategic Partnership... We will review the progress made since Feb, and chart the next steps in our cooperation.

# World looking towards inclusive, human-centric technologies: PM

PRESS TRUST OF INDIA
Nice (France), June 14



## India, France to double trade in next five years

# States play vital role in taking nation's progress further: PM

Sejal Sharma



PM Narendra Modi in a group picture during the 11th meeting of the Governing Council of Niti Aayog on Thursday.

# World leaders praise Modi for completing 12 yrs as Prime Minister

HT Correspondent
letters@hindstantimes.com



Anura Kumara Dissanayake

**NEW DELHI:** Sri Lankan President Anura Kumara Dissanayake was among the first world leaders to congratulate Prime Minister Narendra Modi for becoming India's longest-serving elected premier, saying the neighbouring country benefited from his personal intervention and support in challenging times.

In a message to Modi sent on June 8, Dissanayake said the milestone in Modi's political career is a testament to the trust and confidence that the people of the world's largest democracy "have repeatedly placed in your leadership".

"Your vision of an economically dynamic India has inspired many beyond your borders, including in Sri Lanka," Dissanayake said. "We are especially grateful for India's steadfast friendship, and for your personal intervention and support during challenging times for Sri Lanka."

Over Modi's three terms in ... as vast, diverse and dynamic as India points to Modi's governance capabilities and delivery of tangible improvements in the lives of people. India has strengthened its position as one of the world's leading economies and has emerged as an increasingly influential voice in regional and global affairs," he said, adding that he looks forward to building on the unprecedented momentum in bilateral relations.

Modi received congratulations from other leaders for his advocacy for the Global South and vision of an inclusive and economically dynamic India. Papua New Guinea Prime Minister James Marape, in a video

# 4,399 days, not a personal feat: PM

At a meeting in New Delhi, NDA clears a resolution reaffirming faith in Modi's leadership

RAJESH KUMAR THAKUR



'Nation is greater than any political party'

# For Viksit Bharat, Next Decade Must Be One of Excellence, Not Just Achievement: Modi

NDA Resolution: The right leader at the right time at the right place... Modi ji is both our anchor and our innovator



Our mantra has been 'Sabka Saath, Sabka Vikas, Sabka Vishwas aur Sabka Prayas.' Sabka Prayas is the true energy behind building a developed India Now is the time for a new kind of healthy competition among states: PM MODI

TAKING ON CONGRESS

'Congress Growth Rate' was a reflection of the absence of effective governance, clear policy, genuine intent and decisive action: PM

**ರಾಮ್ಸರ್ ತಾಣಗಳ ಶತಮಾನ...**

# ಭಾರತದ 100ನೇ ರಾಮ್ಸರ್ ತಾಣ ಜೈ ಪ್ರಕಾಶ್ ನಾರಾಯಣ್ ಪಕ್ಷಿಧಾಮ

*ಉತ್ತರ ಪ್ರದೇಶದ ಬಲ್ಲಿಯಾದಲ್ಲಿರುವ ಜೈ ಪ್ರಕಾಶ್ ನಾರಾಯಣ್ ಪಕ್ಷಿಧಾಮವು ಭಾರತದ 100ನೇ ರಾಮ್ಸರ್ ತಾಣವಾಗಿದೆ. ಪಕ್ಷಿ ವೈವಿಧ್ಯತೆಯಿಂದ ಸಮೃದ್ಧವಾಗಿರುವ ಈ ಅಭಯಾರಣ್ಯವನ್ನು ಸುರ್ಹಾ ತಾಲ್ ಎಂದೂ ಕರೆಯುತ್ತಾರೆ. 100 ರಾಮ್ಸರ್ ತಾಣಗಳ ಈ ಮೈಲಿಗಲ್ಲನ್ನು ತಲುಪಿದ್ದಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಂತಸ ವ್ಯಕ್ತಪಡಿಸಿದರು. ಈ ಸಾಧನೆಯು ಜಾಗತಿಕ ವೇದಿಕೆಯಲ್ಲಿ ಭಾರತದ ನಾಯಕತ್ವದ ಪಾತ್ರವನ್ನು ಮತ್ತಷ್ಟು ಬಲಪಡಿಸಿದೆ. ಈ ಸಂಖ್ಯೆ ಕೇವಲ ಒಂದು ಸಂಖ್ಯೆಯನ್ನು ಪ್ರತಿನಿಧಿಸದೆ, ಸಂರಕ್ಷಣೆ, ಜೀವವೈವಿಧ್ಯ ಮತ್ತು ಸುಸ್ಥಿರ ಅಭಿವೃದ್ಧಿಯ ಕಡೆಗೆ ಭಾರತ ಹೊಂದಿರುವ ಸಂಕಲ್ಪದ ಕಥೆಯನ್ನು ಪ್ರತಿನಿಧಿಸುತ್ತದೆ ಎಂದರು...*

## ರಾಮ್ಸರ್ ತಾಣಗಳ ಕಥೆ

- 1971ರಲ್ಲಿ ಇರಾನ್‌ನ ರಾಮ್ಸರ್ ನಲ್ಲಿ ಸಹಿ ಹಾಕಲಾದ 'ರಾಮ್ಸರ್ ಸಮಾವೇಶ'ದ ಒಡಂಬಡಿಕೆಯ ದೇಶಗಳಲ್ಲಿ ಭಾರತವೂ ಒಂದಾಗಿದೆ. 1982 ಫೆಬ್ರವರಿ 1ರಂದು ಭಾರತ ಈ ಸಮಾವೇಶಕ್ಕೆ ಸಹಿ ಹಾಕಿತು.
- ರಾಮ್ಸರ್ ತಾಣಗಳು 'ರಾಮ್ಸರ್ ಸಮಾವೇಶ'ದ ಅಡಿ ಗುರುತಿಸಲ್ಪಟ್ಟ ಜೌಗು ಪ್ರದೇಶಗಳಾಗಿವೆ.
- 31 ವರ್ಷಗಳ ಅವಧಿಯಲ್ಲಿ(2014ರ ವರೆಗೆ) ಭಾರತದಲ್ಲಿ 26 ರಾಮ್ಸರ್ ತಾಣಗಳನ್ನು ಗೊತ್ತುಪಡಿಸಲಾಗಿದ್ದರೂ, ಕಳೆದ 12 ವರ್ಷಗಳಲ್ಲಿ 74 ಹೊಸ ತಾಣಗಳನ್ನು ಸೇರಿಸಲಾಗಿದೆ.
- ಇಂದೋರ್ ಮತ್ತು ಉದಯಪುರ ಭಾರತದ ಮೊದಲ ರಾಮ್ಸರ್ ಜೌಗು ಪ್ರದೇಶಗಳಾಗಿವೆ (ಜನವರಿ 2025).

**12 ವರ್ಷಗಳಲ್ಲಿ ರಾಮ್ಸರ್ ತಾಣಗಳು 4 ಪಟ್ಟು ಹೆಚ್ಚಾಗಿವೆ**

26 — 2014

100 — 2026

**"ನೈಸರ್ಗಿಕ ಆವಾಸಸ್ಥಾನಗಳು ಮತ್ತು ಜೌಗು ಪ್ರದೇಶಗಳನ್ನು ರಕ್ಷಿಸುವ ಭಾರತದ ಅಚಲ ಬದ್ಧತೆಯು ಈ ಸಾಧನೆಯಲ್ಲಿ ಪ್ರತಿಫಲಿಸುತ್ತಿದೆ. ಈ ಪ್ರಯತ್ನಗಳು ಜೀವವೈವಿಧ್ಯತೆಯನ್ನು ಸಂರಕ್ಷಿಸುವಲ್ಲಿ, ಪರಿಸರ ಸಮತೋಲನ ಕಾಪಾಡಿಕೊಳ್ಳುವಲ್ಲಿ ಮತ್ತು ಭವಿಷ್ಯದ ಪೀಳಿಗೆಗೆ ಹಸಿರು ಭವಿಷ್ಯ ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*



NEW INDIA SAMACHAR FORTNIGHTLY

**RNI NO.: DELENG/2020/78811 JULY 01-15, 2026**

RNI Registered No DELENG/2020/78811 (Publishing Date: June 15, 2026 Pages: 42)

**EDITOR IN CHIEF**
**Dhirendra Ojha**
Principal Director General
Press Information Bureau, New Delhi

**PUBLISHER:**
**Kanchan Prasad**
Director General, on behalf of
Central Bureau Of Communication

**PUBLISHED FROM:**
Room No–278, Central Bureau Of Communication, 2nd Floor, Soochna Bhawan, New Delhi -110003